ಗೌರಿ ಲಂಕೇಶರ

ಲಂಕೇಶ್


ಆಗಸ್ಟ್ 22 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



100 ಕೋಟಿ ಆಸ್ತಿ

ಉಪ್ಪಾರರಿಗೆ ವಂಚನೆ

ಓಂಕಾರಾಶ್ರಮ ಸ್ವಾಹ!



ಲಿಂಗಾಯತ ಲೀಡರ್ ಖಂಡ್ರೆ ಕತೆ



ಬಿಜೆಪಿಗೆ ಹಾರಲಿರುವ ಸೊರಕೆ

ಮೈಸೂರು ವಿ.ವಿ. : ಭ್ರಷ್ಟ ಶಶಿಧರ್‌ಪ್ರಸಾದ್



ಕೊಳ್ಳೆಯಲ್ಲಿ ಇನ್ನಷ್ಟು ಚೆಡ್ಡಿ ವೀರರು



ಬಿಡಿ ಚಿತ್ರಗಳು

● ಪಾರ್ವತೀಶ

ತೇಜಸ್ವಿನಿಯ ಅಮೋಘ ಭಾಷಣ ಪ್ರಸಂಗವು...



ಕಂಠದಿದಂ ಯುದ್ಧಾತದ್ಯಾ ಮಾತಾ ಡುವವರು, ಕುಡಿದಿರ ದಿದ್ದರೂ ಅಸಂಬದ್ಧವಾಗಿ ವರ್ತಿಸುವ ಜನರನ್ನು ನೀವು ನೋಡಿರುತ್ತೀರಿ. ಆದರೆ ಕುಡಿಯದಿದ್ದರೂ ಕುಡು ಕರಿಗಿಂತಾ ಅಧ್ವಾನವಾಗಿ ತಾಳ ಮೇಳ, ಲಂಗುಲಗಾಮಿರದಂತೆ ಮಾತಾಡುವವರನ್ನು ಕಳೆದ ವಾರ ಒಂದಷ್ಟು ಜನ ನೋಡಬೇಕಾಗಿ ಬಂತು.

ಅದು ಸಂಸದೆ ತೇಜಸ್ವಿನಿ ಭಾಷಣ ಪ್ರಸಂಗ.

ಕೆಂಪೇಗೌಡ ಪ್ರಶಸ್ತಿ ಅಂತ ಒಂದಿದೆ. ಇದನ್ನು ಯಾರು, ಯಾರಿಗೆ ಯಾಕೆ ಕೊಡುತ್ತಾರೆಂಬುದು ಅಷ್ಟು ನಿಖರವಾಗಿ ಹೇಳಲಿಕ್ಕಾಗದು. ಇರಲಿ, ಈ ಸಾಲಿನ ಕೆಂಪೇಗೌಡ ಪ್ರಶಸ್ತಿಗೆ ಕೆಲವರನ್ನು ಆಯ್ಕೆ ಮಾಡಿ ಕಳೆದ ವಾರ ಒಂದು ಸಮಾರಂಭ ನಡೆಸಲಾಯಿತು. ಅವತ್ತು ಭಾಷಣ ಮಾಡಲು ಎದ್ದು ನಿಂತ ತೇಜಸ್ವಿನಿ ಶ್ರೀರಮೇಶ್ ಮಾಡಿದ ಬೇಕಾರ್ ಭಾಷಣದ ಕೆಲ ಸಾಲುಗಳು ಹೀಗಿದ್ದವು!


"ಪ್ರಶಸ್ತಿ ಅಂದ್ರೆ ಏನ್ ತಿಳ್ಕಂಡಿದ್ದೀರಿ.... ಯಾರ್ರೀ ಇವರನ್ನು ಆರಿಸಿರೋದು, ನಮ್ಮಲ್ಲಿ ಬೇಕಾದಷ್ಟು ಜನ ಸಮಾಜ ಸೇವಕರಿದ್ದಾರೆ. ಬೇರೆ ಬೇರೆ ಕ್ಷೇತ್ರದ ಅರ್ಹ ಗಣ್ಯರೂ ಇದ್ದಾರೆ. ಅಂತ ಅರ್ಹರಿಗೆ ಯಾಕ್ರಿ ಪ್ರಶಸ್ತಿ ಕೊಡಲ್ಲ, ಇವತ್ತು ಕೊಡದೆ ಇನ್ಯಾವತ್ತೀ ಕೊಡ್ತೀರಾ. ಈ ದಿನ ಇಲ್ಲಿ ಅನೇಕ ಮಹನೀಯರಿದ್ದಾರೆ. ಪ್ರಶಸ್ತಿ ಪಡೆದವರೂ ಬಂದಿದ್ದಾರೆ. ಅವರಿಗೆಲ್ಲಾ ಅಭಿನಂದನೆಗಳನ್ನು ಹೇಳ್ತಾ ಮುಂದಿನ ಸಾರಿಯಾದರೂ ಅರ್ಹರನ್ನು ಆರಿಸಿ ಪ್ರಶಸ್ತಿ ಕೊಡಬೇಕೆಂದು ಕೋರುತ್ತೇನೆ."

ಪ್ರಶಸ್ತಿಗೆ ಆರಿಸಿದ್ದರಲ್ಲಾ ಅಂತ ಅವತ್ತು ಸಿನಿಮಾ, ಸಾಹಿತ್ಯ ಕ್ಷೇತ್ರದ ಅನೇಕ ದೊಡ್ಡವರು ಬಂದು ಸೌಜನ್ಯಕ್ಕೆ ಕುಳಿತಿದ್ದರು. ಅಂತವರ ಎದುರಿಗೆ ತೇಜಸ್ವಿನಿ 'ಬಾಯಿ ಬಿಟ್ಟರೆ ಬಣ್ಣ ಗೇಡು' ಥರ ಮಾತಾಡುತ್ತಿದ್ದರೆ ಕೇಳುತ್ತಿದ್ದವರೆಲ್ಲಾ 'ಇದೇನ್ರಿ ಈ ಬಾಯಿ ಬಡುಕಿ ಔತಾರ' ಅಂದು ಪೇಚಾಡಿಕೊಳ್ಳುತ್ತಿದ್ದರು.

ಸುಗುಣೇಂದ್ರ ತೀರ್ಥರ ಸಂಧಾನ ಯಾತ್ರೆ!

ಕೆಲವು ತಮಾಷೆ ಘಟನೆಗಳು ಹೇಗೆ ಶುರುವಾಗುತ್ತವೆ, ಅದಕ್ಕೆ ಪ್ರೇರಣೆ ಯಾರು ಅಂತ ತಕ್ಷಣಕ್ಕೆ ಗೊತ್ತಾಗುವುದಿಲ್ಲ.

ಉಡುಪಿಯ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥಸ್ವಾಮಿ ಈ ವರ್ಷಾಂತ್ಯದೊಳಗೆ ಶ್ರೀಲಂಕಾಗೆ ಹೋಗುತ್ತಿದ್ದಾರೆ... ಯಾಕೆ ಗೊತ್ತಾ?



ಎಲ್‌ಟಿಟಿಇ ಹಾಗೂ ಶ್ರೀಲಂಕಾ ಸರ್ಕಾರದ ಮಧ್ಯೆ ಸಂಧಾನ ನಡೆಸಿ ಕದನ ವಿರಾಮ ಏರ್ಪಡಿಸುವಂತೆ ಅವರಿಗೆ ಆಹ್ವಾನ ಬಂದಿದೆಯಂತೆ. ಹಾಗಂತ ಸ್ವತಃ ಈ ಸ್ವಾಮಿಯೇ ಪೇಪರ್‌ನವರಿಗೆ ಹೇಳಿದ್ದಾರೆ.

ಅಂದಹಾಗೆ ಇಂಥ ಆಹ್ವಾನ ನೀಡಿರುವುದು ಯಾರೂಂತ ಈತ ಬಹಿರಂಗಪಡಿಸಿಲ್ಲ.

ಶ್ರೀಲಂಕಾದ ಮೂಲನಿವಾಸಿಗಳೇ ಆಗಿರುವ ತಮಿಳರನ್ನು ಹತ್ತಿಕ್ಕಿ ಸಿಂಹಳರ ದುರಭಿಮಾನ ಮೆರೆಸಲು ಹೋಗಿದ್ದಕ್ಕೇ ಅಲ್ಲಿ ಅಂತರ್ಯುದ್ಧ ಶುರುವಾಗಿದ್ದು. ಇದನ್ನು ಬಗೆಹರಿಸಲು ಭಾರತ, ವಿಶ್ವಸಂಸ್ಥೆ ಇತ್ತೀಚೆಗೆ ನಾರ್ವೆ ದೇಶದವರೆಲ್ಲಾ ಪ್ರಯತ್ನಿಸಿ ಸೋತಿದ್ದಾರೆ. ಅಂತಲ್ಲಿ ರಾಜಕೀಯ ಮುತ್ಸದ್ದಿಯೂ ಅಲ್ಲದ, ಇಂಥ ಜನಾಂಗೀಯ ಸಂಘರ್ಷಗಳ ಇತಿಹಾಸವೂ ಗೊತ್ತಿರದ, ಕಾರಣಗಳನ್ನು ಕಂಡರಿಯದ ಪುರೋಹಿತರೊಬ್ಬರು ಮಹಾಭಾರತದಲ್ಲಿ ಶ್ರೀಕೃಷ್ಣ ಸಂಧಾನಕ್ಕೆ ಹೋದಂತೆ ತಮಗೂ ಈ ಯುದ್ಧದಲ್ಲಿ ಒಂದು ಪಾತ್ರವಿದೆ ಅಂತ ಭ್ರಮಿಸಿಕೊಂಡು ಜುಟ್ಟು, ಜನಿವಾರ ಸರಿಪಡಿಸಿಕೊಂಡು ಹೊರಟು ಬಿಟ್ಟರೆ ತಮಾಷೆ ಅನ್ನಿಸಲ್ವಾ?

ಈ ತಮಾಷೆ ವಿಷಯ ಬಿಡಿ, ಇವರಿಗೂ ಮೊದಲು ಆರ್ಟ್ ಆಫ್ ಲಿವಿಂಗ್‌ನ ವಯ್ಯಾರಿ ಧರ್ಮಗುರು ರವಿಶಂಕರ್ ಇತ್ತೀಚೆಗೆ ಸಂಧಾನಕ್ಕಾಗಿ ಅಂತ ಇರಾಕ್ ದೇಶಕ್ಕೆ ಹೋಗಿಬಂದರು. ಸಂಧಾನ ನಡೆಸುವಂತೆ ಅವರಿಗೆ ಇರಾಕ್ ಸರ್ಕಾರದಿಂದ ಅಧಿಕೃತ ಅಥವಾ ಅನಧಿಕೃತ ಆಹ್ವಾನ ಇರಲಿಲ್ಲ. ಆದರೂ ಅಲ್ಲಿ ಇರಾಕಿ ಪ್ರಧಾನಿ ನೂರ್-ಅಲ್ ಮಾಲಿಕಿ ಜೊತೆ ರವಿಶಂಕರ್ ಮಾತಾಡುತ್ತಾ ಕೂತಿದ್ದ ಫೋಟೋಗಳನ್ನು ವಿಜಯ ಕರ್ನಾಟಕ ಪ್ರಕಟಿಸಿತಲ್ಲದೆ ಆತ ಸಂಧಾನಕ್ಕೆಂದು ಹೋಗಿದ್ದ ಎಂದೆಲ್ಲ ಪ್ರಕಟಿಸಿ ಅಪಹಾಸ್ಯಕ್ಕೆ ಗುರಿಯಾಗಿತ್ತು. ಅಂದಹಾಗೆ ಇದೇ ರವಿಶಂಕರ್ ಕೆಲ ವರ್ಷಗಳ ಹಿಂದೆ ಐ.ಆರ್.ಎ ಮತ್ತು ಬ್ರಿಟನ್ ನಡುವೆ ಸಂಧಾನ ಮಾಡುತ್ತೇನೆ ಎಂದು ಹೋಗಿದ್ದ. ಈ ಮಧ್ಯೆ ಆಂಧ್ರ ಮತ್ತು ಛತ್ತೀಸ್‌ಗಢದ ನಕ್ಸಲರಿಗೆ ಸುದರ್ಶನ ಕ್ರಿಯೆ ಹೇಳಿಕೊಡುತ್ತೇನೆಂದೂ ಹೇಳಿದ್ದ!

ಇದೆಲ್ಲದಕ್ಕೂ ಮುನ್ನ ಇದೇ ಉಡುಪಿಯ ತೀರ್ಥರೊಬ್ಬರು ನೇಪಾಳಕ್ಕೊಮ್ಮೆ ಹೋಗಿಬಂದಿದ್ದರು. ಕೇಳಿದವರಿಗೆ ಮಾವೋವಾದಿಗಳಿಗೂ ನೇಪಾಳಿ ರಾಜನಿಗೂ ಸಂಧಾನ ಮಾಡಿಸಲು ಕರೆದಿದ್ದಾರೆ ಅಂತಲೂ ರೈಲು ಬಿಟ್ಟಿದ್ದರು. ಅಸಲಿ ವಿಚಾರ ಅಂದರೆ ಆ ತೀರ್ಥ ರಾಜ ಜ್ಞಾನೇಂದ್ರನ ಹತ್ತಿರ 3 ಕೋಟಿ ದುಡ್ಡು ಕೇ(ಕೀ)ಳಲು ಹೋಗಿತ್ತು; ಮುಳಬಾಗಿಲ ಹತ್ತಿರ ನೂರೆಕರೆ ಜಮೀನು ಪ್ಲಸ್ ಒಂದು ಸ್ಕೂಲ್ ಖರೀದಿಸಲು!


ಆದರೆ ಅಷ್ಟು ಹೊತ್ತಿಗೆ ಮಾವೋವಾದಿಗಳು ಜ್ಞಾನೇಂದ್ರನಿಗೆ ಸರಿ ಲಾತ ಕೊಟ್ಟು ಓಡಿಸಿದ್ದರು. ತೀರ್ಥರಿಗೆ ಪ್ರಸಾದ ಸಿಗಲಿಲ್ಲ.

ಒಟ್ಟಾರೆ ಕರ್ನಾಟಕದ ಬ್ರಾಹ್ಮಣ ಮಠಾಧೀಶರು ಹೀಗೆ ಶ್ರೀಲಂಕಾ, ನೇಪಾಳ, ಇರಾಕ್, ಛತ್ತೀಸ್‌ಗಡ್, ಕಾಶ್ಮೀರ, ಅಫಘಾನಿಸ್ತಾನ ಅಂತ ಎಲ್ಲೆಲ್ಲಿ ಸಂಘರ್ಷ ನಡೆಯುತ್ತಿದೆಯೋ ಅಲ್ಲಿಗೆಲ್ಲಾ ಸಂಧಾನ ಮಾಡಲು ಹೋಗುತ್ತಿರುವುದೇತಕ್ಕೆ?!

ಲಿಂಗಾಯತ, ಒಕ್ಕಲಿಗ, ಕುರುಬ ಮಠಾಧೀಶರ್ಯಾರು ಮಾಡದ, ಇದು ಒಂದು ಅಸಂಬದ್ಧ ನಿಷ್ಪ್ರಯೋಜಕ ಕೆಲಸವಾದರೂ ಯಥೇಚ್ಛ ಪ್ರಚಾರ ಸಿಗುತ್ತೆ ಆದರಿಂದಾಗಿ ಇವರೆಲ್ಲಾ ಅವತಾರ ಪುರುಷರೇ ಇರಬೇಕು ಅಂತ ಕರ್ನಾಟಕದ ಜನ ನಂಬುತ್ತಾರೆ, ಅದರಿಂದ ಭಕ್ತರ ಶ್ರದ್ಧೆ ಜಾಸ್ತಿಯಾಗುತ್ತದೆ. ಹೊಸ ಭಕ್ತರು ಸಿಗುತ್ತಾರೆ. ಇದು ನಿಜವಾದ ಮರ್ಮ!

ಬೇಕಿದ್ದರೆ ಚೆಕ್ ಮಾಡಿ ನೋಡಿ ಇವರನ್ನು ಯಾರೂ ಸಂಧಾನ ನಡೆಸಿಕೊಡಿ ಅಂತ ಆಹ್ವಾನಿಸಿರುವುದಿಲ್ಲ. ಆದರೂ ಹಾಗೆಂದು ಪ್ರಚಾರ ಪಡೆಯುತ್ತಿರುತ್ತಾರೆ.

ಗಂಗೂಭಾಯಿ ಸಿಂಪಲ್ ಸಂಭಾವನೆ




ಗಾಯಕಿ ಗಂಗೂಭಾಯಿ ಹಾನಗಲ್ ಮುಂಬೈ ಆಕಾಶವಾಣಿಯಲ್ಲಿ ಮೊದಲ ಕಾರ್ಯಕ್ರಮ ನಡೆಸಿ ಕೊಟ್ಟದ್ದು 1936 ರಲ್ಲಿ. ಅಂದರೆ 70 ವರ್ಷಗಳ ಹಿಂದೆ. ಅದರ ನೆನಪಿನಲ್ಲಿ ಮೊನ್ನೆ ಹಲವಾರು ಆಕಾಶವಾಣಿ ಕೇಂದ್ರದವರು ಒಟ್ಟುಗೂಡಿ ಅವರ ಹುಬ್ಬಳ್ಳಿಯ ಮನೆಗೇ ಹೋಗಿ ಸ್ಮರಣ ಫಲಕ ಇತ್ಯಾದಿ ಕೊಟ್ಟು ಬಂದಿದ್ದಾರೆ. ತಮ್ಮ ಮೊದಲ ಪ್ರೋಗ್ರಾಂ ಬಗ್ಗೆ ಮಾತಾಡುತ್ತ ಗಂಗೂಭಾಯಿ 'ಆ ದಿನ ನನಗೆ ಕೇವಲ 25 ರೂ. ಸಂಭಾವನೆ ಕೊಟ್ಟಿದ್ದರು' ಅಂತ ನೆನೆದುಕೊಂಡಿದ್ದಾರೆ. ಇವತ್ತು 25 ರೂಪಾಯಿ ಜುಜುಬಿ ಅನ್ನಿಸಬಹುದು. ಆದರೆ 1936 ರಲ್ಲಿ ಅದಕ್ಕೆ ಭಾರಿ ಕಿಮ್ಮತ್ತಿತ್ತು ಬಿಡಿ.

ಒಂದೆರಡು ಕಾರಣಗಳಿಗಾಗಿ ಈ ಸಿಂಪಲ್ ಸಂಭಾವನೆ ವಿಚಾರಕ್ಕೆ ಮಹತ್ವವಿದೆ. ಖ್ಯಾತ ಹಿಂದುಸ್ತಾನಿ ಗಾಯಕಿ ಗಂಗೂಭಾಯಿ ತಮ್ಮ 20 ನೇ ವಯಸ್ಸಿನಲ್ಲೇ ಗಾಯನದ ಮೂಲಕ ಹಣ ಗಳಿಗೆ ಮಾಡಲು ಶುರು ಮಾಡಿದ್ದರು. ಆಮೇಲೆ ಅವರಿಗೆ ಕೇಂದ್ರ ಸಂಗೀತ ಅಕಾಡೆಮಿ ಅವಾರ್ಡ್, ಪದ್ಮವಿಭೂಷಣ ಎಲ್ಲಾ ಬಂತು. ಹಣ, ಕೀರ್ತಿಯೂ ಸಿಕ್ಕವು. ಅಲ್ಲೀತನಕ ನಿಷ್ಕಳಂಕವಾಗಿ ತಮ್ಮ ಸಂಗೀತ ಸಾಧನೆ ಮಾಡಿಕೊಂಡಿದ್ದ ಗಂಗೂಭಾಯಿ ಹುಬ್ಬಳ್ಳಿ ಈದ್ಗಾ ಗಲಾಟೆ ನಡೆಯುತ್ತಿದ್ದಾಗ ಭಜರಂಗ ದಳದವರು ಮತ್ತು ಅಗ್ನಿ ಕಾರುವ ಉಮಾಭಾರತಿ ತಮ್ಮ ಮನೆಯಲ್ಲೇ ಮುಚ್ಚಿಟ್ಟುಕೊಳ್ಳಲು ಅವಕಾಶ ಮಾಡಿಕೊಟ್ಟು ರಕ್ತಪಾತಕ್ಕೂ ಹೊಣೆಯಾಗಿದ್ದರು. ನಂತರ ಚೆಡ್ಡಿಗಳು ಅದಕ್ಕೆ ಹೇಗೆ ಪ್ರತ್ಯುಪಕಾರ ಮಾಡಿದರು ಗೊತ್ತೆ?

ಗಂಗೂಭಾಯಿಯವರ ಹುಟ್ಟೂರು ಹಾನಗಲ್‌ನಲ್ಲಿದ್ದ ಅವರ ಹಳೇ ಮನೆ ಪಾಳು ಬೀಳುವ ಹಂತದಲ್ಲಿತ್ತು. ಈ ಚೆಡ್ಡಿಗಳು "ಸರ್ಕಾರ ಕೂಡಲೇ ಅದನ್ನು ರಕ್ಷಿಸಬೇಕು. ಹಣ ಬಿಡುಗಡೆ ಮಾಡಬೇಕು" ಅಂತೆಲ್ಲಾ ಸಾಂಸ್ಕೃತಿಕ ದುರಂತವೇ ನಡೆಯುತ್ತಿದೆ ಎಂಬಂತೆ ಗಂಗೂಭಾಯಿ ಇನ್ನೂ ಬಡತನದಲ್ಲಿಯೇ ಇದ್ದರೇನೋ ಎಂಬಂತೆ, ಗಲಾಟೆ ಎಬ್ಬಿಸಿದ್ದರು. ಸ್ವತಃ ಗಂಗೂಭಾಯಿಯೇ ನಿರ್ಲಕ್ಷಿಸಿದ್ದ ಹಳೇ ಮನೆಗೂ ಸರ್ಕಾರಿ ಹಣ ಬರುವಂತೆ ನೋಡಿಕೊಂಡರು. ಆ ವೇಳೆಗೆ ಗಂಗೂಭಾಯಿ ಶ್ರೀಮಂತರಾಗಿ ಹುಬ್ಬಳ್ಳಿಯಲ್ಲಿ ಚೆನ್ನಾಗೇ ಸೆಟಲ್ ಆಗಿದ್ದರು. ಅವರು ಬಯಸಿದ್ದಿದ್ದರೆ, ತಮ್ಮ ಹಳೇ ಮನೆಯೊಂದಿಗೆ ನಿಜಕ್ಕೂ ಭಾವನಾತ್ಮಕ ಸೆಳೆವಿದ್ದಿದ್ದರೆ ಅವರೇ ಸ್ವಲ್ಪ ಸ್ವಂತ ಹಣ ಖರ್ಚು ಮಾಡಿ ರಿಪೇರಿ ಮಾಡಿಸಿಕೊಳ್ಳಬಹುದಿತ್ತು. ಸರ್ಕಾರ ಖರೀದಿಸಲು ಅದೇನು ಪುರಂದರ ದಾಸರಿದ್ದ ಮನೆಯಾಗಿರಲಿಲ್ಲ.

ಆದರೆ ಸರ್ಕಾರಿ ದುಡ್ಡು ಪುಗಸಟ್ಟೆಯಾಗಿ ಸಿಗುತ್ತದೆಂದರೆ ಗಂಗೂಭಾಯಿ ಯಾಕೆ ಬೇಡ ಅನ್ನುತ್ತಾರೆ ಹೇಳಿ?

ಬ್ರಾಹ್ಮಣ ಹಾರನಹಳ್ಳಿ ಶರಣರ ವಿರುದ್ಧ ಮಾತಾಡಿದ್ದು




ಕಾಂಗ್ರೆಸ್ ಪಾರ್ಟಿಲಿದ್ದರೂ ಹಾರನಹಳ್ಳಿ ರಾಮಸ್ವಾಮಿ ಎಂಬ ಬೇರಿಲ್ಲದ ನಾಯಕ ಒರಿಜಿನಲ್ ಚೆಡ್ಡಿ ಚತುರನಂತೆ ಆಡುತ್ತಿರುತ್ತಾರೆ. ಈತ ಸಂಯುಕ್ತ ಕರ್ನಾಟಕ ಟ್ರಸ್ಟ್‌ಗೆ ಅದ್ಯಾವ ವಿಷಗಳಿಗೆಯಲ್ಲಿ ಕಾಲಿಟ್ಟನೋ ಅವತ್ತಿನಿಂದಲೇ ಅದು ವಿಕ್ರಮದ ರೀತಿ RSS ನ ಗಬ್ಬು ನಾರಲು ಶುರುವಾಗಿತ್ತು. ಮೈತುಂಬಾ ಬ್ರಾಹ್ಮಣಶಾಹಿತನ ತುಂಬಿಕೊಂಡಿರುವ ಹಾರನಹಳ್ಳಿ ಮೊನ್ನೆ ಕರ್ನಾಟಕದಲ್ಲಿ "ನಕ್ಸಲೀಯರು ಬೆಳೆಯಲು ಚಿತ್ರದುರ್ಗದ ಮುರುಘಾಮಠದ ಶರಣರೇ ಕಾರಣ. ಅವರು ಕ್ರಾಂತಿ ಕವಿ ಗದ್ದರ್‌ಗೆ ಬಸವಶ್ರೀ ಪ್ರಶಸ್ತಿ ಕೊಟ್ಟಿದ್ದೇ ಇದಕ್ಕೆ ಪ್ರೇರಣೆ" ಅಂತೆಲ್ಲಾ ಒದರಿದ್ದಾರೆ.

ಪ್ರಶಸ್ತಿಗೋಸ್ಕರ ಚಳವಳಿ ನಡೆಸಲು ನಕ್ಸಲರೇನು ಚಮೂ ಕ್ಯಾಟಗರಿಯವರಾ?

ನಾವಿಲ್ಲಿ ಗಮನಿಸಬೇಕಾದ ಸೂಕ್ಷ್ಮಗಳು ಇನ್ನೂ ಹಲವಿವೆ. ನಾವೆಲ್ಲಾ ಕಂಡಂತೆ ಲಿಂಗಾಯತ ಮಠಾಧೀಶರಾದ ಶರಣರು ಸದಾ ಜಾತಿ ಬೇಧದ ವಿರುದ್ಧ, ಕೋಮು ದ್ವೇಷ ಹರಡುವವರ ವಿರುದ್ಧ ಇರುತ್ತಾ ಬಂದಿದ್ದಾರೆ. ಮತ್ತೊಂದೆಡೆ ಹಾರನಹಳ್ಳಿಯ ಸ್ವಜಾತಿ ಬ್ರಾಹ್ಮಣ ಮಠಾಧೀಶರಾದ ಪೇಜಾವರ ಮುಂತಾದವರು ಜಾತಿ-ಧರ್ಮದ ಜಗಳಕ್ಕೆ ಪ್ರಚೋದನೆ ನೀಡುತ್ತಾ ತಮ್ಮ ಜನ್ಮ ಪಾವನಗೊಳಿಸಿಕೊಳ್ಳುತ್ತಿದ್ದಾರೆ. ಹಾಗಾಗಿ ಜನಪರ ಕೆಲಸ, ಪ್ರಾಮಾಣಿಕತೆಯಲ್ಲಿ ಯಾರೇ ಆದರೂ ಪೇಜಾವರರಿಗಿಂತ ಶರಣರಲ್ಲಿ ಹೆಚ್ಚು ತೂಕ ಕಂಡರೆ ಏನಾಶ್ಚರ್ಯ!

ಹಾರನಹಳ್ಳಿಗೆ ತಡೆದುಕೊಳ್ಳಲು ಆಗದ್ದು ಈ ಸಂಕಟವೇ. ಒಂದು ವೇಳೆ ಈತನ ತಲೆ ಸರಿ ಇದ್ದಿದ್ದರೆ "ಕರ್ನಾಟಕದಲ್ಲಿ ಭಜರಂಗ ದಳ, ಹಿಂದೂ ಜಾಗರಣ ವೇದಿಕೆ ಮುಂತಾದವರ ಭಯೋತ್ಪಾದಕ ಚಟುವಟಿಕೆಗಳು ಬೆಳೆಯಲು ಅವರೊಂದಿಗೇ ಗುರುತಿಸಿಕೊಂಡಿರುವ ಪೇಜಾವರ ಸ್ವಾಮಿಯೂ ಕಾರಣ" ಎನ್ನಬೇಕಿತ್ತಲ್ಲವೆ. ■

ಕ್ಷಮಿಸಿ ಇದು ತಮಾಷೆಗಾಗಿ



ಟೋಪಿ ಹಾಕಿಸಿಕೊಂಡ ಕಾಂಗ್ರೆಸ್‌ನ ಮಹಾರಾಜ್!

ಸದಾ ತಲೆ ಮೇಲೆ ಗಾಂಧಿ ಟೋಪಿ ಇಟ್ಟುಕೊಳ್ಳುವ ಕೊಪ್ಪಳ ಕಾಂಗ್ರೆಸ್‌ನ ನಮ್ಮ ಮಹಾರಾಜ್(?)ಗೆ ಟೋಪಿ ಹಾಕಲಾಯಿತೆಂದರೆ ಇನ್ನು ನಮ್ಮ ಪಾಡೇನು? ಅಂತ ಕಾಂಗ್ರೆಸ್ ಕಾರ್ಯಕರ್ತರು ತಲೆ ಮೇಲೆ ಕೈ ಹೊತ್ತು ಕುಳಿತಿದ್ದಾರೆ.

ಇರ್ಲಿ, ಧೈರ್ಯ ತಗೋರಿ ಅಂತ ಸಾಂತ್ವನ ಹೇಳ ಬೇಕಾದ್ದು ಅದೇ ಪಕ್ಷದ ಶಾಸಕ, ಸಂಸದರ ಕೆಲಸ. ವಿಚಿತ್ರವೆಂದರೆ ಕಾರ್ಯಕರ್ತರು ಹೆದರುತ್ತಿರುವುದು ಇದೇ ಶಾಸಕ, ಸಂಸದರಿಗೆ.

ಕೊಪ್ಪಳ ಕಾಂಗ್ರೆಸ್‌ನ ಸಭೆ-ಸಮಾರಂಭಗಳಲ್ಲಿ ಶಾಯಿರಿ ಹೇಳುತ್ತ ಎಲ್ಲರಿಗೂ ಮಹಾರಾಜ್ ಎಂದು ಕರೆಯುತ್ತ ಪ್ರತಿಯಾಗಿ ಜನರಿಂದ ತಾನೂ ಮಹಾರಾಜ್ ಎಂದೇ ಕರೆಸಿಕೊಳ್ಳುವ ಜಾಲಿಯಾಗಿರುವ ವ್ಯಕ್ತಿಯೆಂದರೆ ಶಾಂತಣ್ಣ ಮುದಗಲ್. ಈತ ಆಗರ್ಭ ಶ್ರೀಮಂತ. ಹಿಂದೆ ಇವರ ಚಿಕ್ಕಪ್ಪ ವೀರಣ್ಣ ಮುದಗಲ್ ಕೊಪ್ಪಳಕ್ಕೆ ಶಾಸಕರಾಗಿದ್ದರು. ಎಷ್ಟೇ ಆಗಲಿ ನವಾಬ್‌ರ ಕಾಲದಲ್ಲಿ ಕೊಪ್ಪಳದಲ್ಲಿ ಬಿಗಿ ಹಿಡಿತ ಇದ್ದ ಮುದಗಲ್ ಕುಟುಂಬದವರು. ಹೀಗಾಗಿ ಶಾಂತಣ್ಣನಿಗೆ ಕೊಪ್ಪಳಕ್ಕೆ ಎಂಎಲ್‌ಎ ಆಗುವ ಆಸೆಯಿಂದ ಎರಡು ಬಾರಿ ಸ್ಪರ್ಧಿಸಿ ಸೋತ.

ಮೊದಲೆಲ್ಲ ಹೆಂಡದ ದೊರೆ, ಮಾಜಿ ಸಂಸದ ರಾಮುಲು ವಿರೋಧಿ ಗುಂಪಿನವರು ಎಂದೇ ಹೆಸರಾಗಿದ್ದ ಶಾಂತಣ್ಣ ಎರಡೆರಡು ಬಾರಿ ಸೋತ ಮೇಲೆ ಶಾಸಕನಾಗುವ ಆಸೆಗೆ ಎಳ್ಳು-ನೀರು ಬಿಟ್ಟಿದ್ದರು. ಹೋಗಲಿ ಕೊಪ್ಪಳ ಜಿಲ್ಲೆ ಆದ ಮೇಲೆ ಡಿಸಿಸಿ ಅಧ್ಯಕ್ಷಗಿರಿ ಅದೇ ರಾಮುಲು ಮನೆಯಲ್ಲಿ ಕಾಲು ಮುರಕೊಂಡು ಬಿದ್ದಿತ್ತಲ್ಲ, ಅದಾದರೂ ತನಗೆ ಮೂರನೇ ಅವಧಿಗೆ ಸಿಗಲಿ ಅಂತ ತನ್ನಂತೆಯೇ ರಾಮುಲು ವಿರೋಧಿಗಳಾದ ಶಾಸಕ, ಸಂಸದರನ್ನು ಕಂಡು ಗೋಳಾಡಿದರು.

ಸರಿ ಅಂತ ಅವರು ಶಾಂತಣ್ಣನನ್ನು ಆತನ ಖರ್ಚಿನಲ್ಲೇ ಬೆಂಗಳೂರಿನಿಂದ ದೆಹಲಿಗೆ ಕರೆದುಕೊಂಡು ಹೋಗಿದ್ದಾರೆ. ಅಲ್ಲಿ ಯಾರ್‍ಯಾರನ್ನೋ ಮಾತಾಡಿಸಿ 'ನಿಮ್ಮ ಕೆಲಸ ಆಯ್ತು ನೀವೇ ಕೊಪ್ಪಳ ಡಿಸಿಸಿ ಅಧ್ಯಕ್ಷರು' ಅಂದಿದ್ದಾರೆ. ಶಾಂತಣ್ಣ ಖುಷ್ ಆಗಿದ್ದಾನೆ. ಮರಳಿ ಕೊಪ್ಪಳಕ್ಕೆ ಬಂದ ಕೆಲವೇ ದಿನಗಳಲ್ಲಿ ಲಲಿತಾರಾಣಿ ಡಿಸಿಸಿ ಅಧ್ಯಕ್ಷೆಯಾಗಿಬಿಟ್ಟರು.

ಭಯಂಕರ ದುಃಖ ಅನುಭವಿಸಿ ಸುಮ್ಮನಾಗಿದ್ದ ಶಾಂತಣ್ಣ ಮೊನ್ನೆ ಕೆಲ ಕಾಂಗ್ರೆಸ್ ಮುಖಂಡರೊಂದಿಗೆ ಬೆಂಗಳೂರಿಗೆ ಬಂದು ಕೆಪಿಸಿಸಿ ಅಧ್ಯಕ್ಷ ಖರ್ಗೆಗೆ ಭೇಟಿಯಾಗಿ ಪಕ್ಷ ಸಂಘಟನೆ ಬಗ್ಗೆ ಮಾತಾಡಿದ್ದಾರೆ. ಅದಾದ ಮೇಲೆ ಅಲ್ಲಿದ್ದವರು 'ಅಲ್ರೀ ಖರ್ಗೆಜಿ, ಎಂಎಲ್‌ಎ ಎಂಪಿ ಶಾಂತಣ್ಣನನ್ನು ಡಿಸಿಸಿ ಅಧ್ಯಕ್ಷರನ್ನಾಗಿಸಿ ಅಂತ ಹೇಳಿದ್ದರೂ ನೀವು ಲಲಿತಾರಾಣಿಯವರನ್ನು ಮಾಡಿದ್ದಿರಲ್ಲ' ಅಂದಿದ್ದಾರೆ. ಆಗ ಖರ್ಗೆ 'ಇಲ್ಲ ಲಲಿತಾರಾಣಿ ನೇಮಕ ಮೇಡಂರಿಂದ ಆಗಿರೋದು, ಆದ್ರೆ ನಿಮ್ಮ ಎಂಎಲ್‌ಎ, ಎಂಪಿ ಶಿಫಾರಸ್ಸು ಮಾಡಿದ್ದು ನಾಗಪ್ಪ ಸಾಲೋಣಿಗೆ, ಶಾಂತಣ್ಣಗಲ್ಲ' ಎಂದಾಗ ಶಾಂತಣ್ಣನಿಗೆ ಮೂರ್ಛೆ ಬರುವುದೊಂದೇ ಬಾಕಿ.

ಅಂದಹಾಗೆ ಶಾಂತಣ್ಣನಿಗೆ ಟೋಪಿ ಹಾಕಿದವರು ಕೊಪ್ಪಳದ ಶಾಸಕ ಬಸವರಾಜ ಹಿಟ್ನಾಳ ಮತ್ತು ಕೊಪ್ಪಳದ ಸಂಸದ ಕೆ. ವಿರುಪಾಕ್ಷಪ್ಪ! ■


ರಾಜನ್ ತಂದೆ ಹೇಳಿದ ಕತೆ



ಕಂಡಹಾಗೆ

"ಇತ್ತೀಚೆಗೆ ಕರ್ನಾಟಕದಲ್ಲಿನ ಢೋಂಗಿ ಲಿಂಗಾಯತ ನಾಯಕರ ಮತ್ತು ಲೆಕ್ಕಕ್ಕಿಲ್ಲದ ಮಠಾಧೀಶರ ಒತ್ತಡಕ್ಕೆ ಮಣಿದು ರಾಜ್ಯ ಸರ್ಕಾರ ಬಂಜಗೆರೆ ಜಯಪ್ರಕಾಶರು ಬರೆದಿದ್ದ 'ಆನು ದೇವಾ ಹೊರಗಣವನು' ಎಂಬ ಸಂಶೋಧನಾ ಕೃತಿಯನ್ನು ಮುಟ್ಟುಗೋಲು ಹಾಕಿಕೊಂಡಿತು. ಮೊನ್ನೆ ಪಕ್ಕದ ಆಂಧ್ರ ಪ್ರದೇಶದಲ್ಲಿ ಒಬ್ಬ ಮುಸಲ್ಮಾನ್ ಶಾಸಕ ಮತ್ತು ಆತನ ಪುಂಡರ ದಂಡು ಹೈದರಾಬಾದಿನಲ್ಲಿ ಲೇಖಕಿ ತಸ್ಲೀಮಾ ನಸ್ರೀನ್ ಮೇಲೆ ದೈಹಿಕ ಹಲ್ಲೆ ನಡೆಸಿದ್ದಾರೆ.

ಇಲ್ಲಿ ಒಂದು ಅಂಶವನ್ನು ಸ್ಪಷ್ಟವಾಗಿ ಗುರುತಿಸಬೇಕಿದೆ. ಬಸವಣ್ಣ ಮಾದಿಗ ಜಾತಿಯಲ್ಲಿ ಜನಿಸಿದ್ದಿರಬಹುದು ಎಂದು ಸಂಶೋಧನೆ ಮೂಲಕ ತನಗೆ ಅನ್ನಿಸುತ್ತಿದೆ ಎಂದು ಬಂಜಗೆರೆ ಬರೆದಿದ್ದನ್ನು ವಿರೋಧಿಸಿದ ಲಿಂಗಾಯತ ನಾಯಕರು ಮತ್ತು ಮಠಾಧೀಶರಿಗೂ, ತಸ್ಲೀಮಾ ಬದುಕಿರುವುದೇ ವಿಷಾದಕರವಾದ ಸಂಗತಿ ಮತ್ತು ಪ್ರಚೋದನಾಕಾರಿ ಎಂದು ಅರಚಾಡುತ್ತಿರುವ ಮುಸಲ್ಮಾನ ಧರ್ಮಾಂಧರಿಗೂ ಯಾವುದೇ ವ್ಯತ್ಯಾಸವಿಲ್ಲ. ಅವರೆಲ್ಲರ ಕೃತ್ಯಗಳು ಸಮವಾಗಿ ಖಂಡನಾರ್ಹವಾದದ್ದು. ಯಾಕೆಂದರೆ ಇಂತಹ ಲಿಂಗಾಯತರಾಗಲಿ, ಮುಸಲ್ಮಾನರಾಗಲಿ, ಇತ್ತೀಚೆಗೆ ಬರೋಡಾದ ಕಲಾ ಶಾಲೆಯ ಮೇಲೆ ದಾಳಿ ಮಾಡಿದ ಸಂಘ ಪರಿವಾರದ ಕಿಡಿಗೇಡಿಗಳಿಂತ ಭಿನ್ನರಲ್ಲ. ಎಲ್ಲರೂ ಈ ಸಮಾಜಕ್ಕೆ ಅನಿಷ್ಟರು!



ಈಚಾರ್ ವಾರಿಯರ್

* * * * * * * * * *

ಬಂಜಗೆರೆಯವರ 'ಆನು ದೇವಾ....' ಲಿಂಗಾಯತರಿಗೆ ನೋವನ್ನುಂಟು ಮಾಡುತ್ತದೆಂದೂ, ತಸ್ಲೀಮಾ ನಸ್ರೀನರ ಕಾದಂಬರಿಗಳು ಮುಸಲ್ಮಾನರಿಗೆ ಕೋಪ ತರಿಸುತ್ತದೆಂದೂ ಎಲ್ಲ ಪುಸ್ತಕಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾ ಹೋದರೆ ನಾವೆಲ್ಲ ಆದಿಮಾನವನ ಕಾಲಕ್ಕೆ ಹಿಂದಿರುಗುತ್ತೇವಷ್ಟೇ.

ಹಾಗೊಮ್ಮೆ ಯಾವುದೋ ಒಂದು ಕೋಮಿಗೆ, ಜಾತಿಗೆ, ಸಮುದಾಯಕ್ಕೆ ಒಂದು ಕೃತಿ ಸರಿಕಂಡುಬರಲಿಲ್ಲ ಎಂಬ ಕಾರಣವೊಡ್ಡಿ ಮುಟ್ಟುಗೋಲು ಸಂಸ್ಕೃತಿಗೆ ಬೆಂಬಲ ನೀಡುವುದಾದರೆ ಮೊದಲು ಮನುಸ್ಮೃತಿಯನ್ನು ಬ್ಯಾನ್ ಮಾಡಬೇಕು. ಯಾಕೆಂದರೆ ಈ ದೇಶದ ಶೂದ್ರರಿಗೆ, ದಲಿತರಿಗೆ, ಮಹಿಳೆಯರಿಗೆ ಆ ಕೃತಿ ಮಾಡುವಷ್ಟು ಅನ್ಯಾಯ ಮತ್ತೊಂದಿರಲಾರದು. ಹಾಗೆ ಮನುಸ್ಮೃತಿಯಿಂದ ಪ್ರಾರಂಭಿಸಿ, ಇತ್ತೀಚೆಗೆ ಪೆದ್ದು ಮಹಿಳೆಯರು ಜಪಿಸುತ್ತಿರುವ 'ಸೌಂದರ್ಯ ಲಹರಿ'ಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಯಾಕೆಂದರೆ ಸೌಂದರ್ಯಲಹರಿ ತಾಯಂದಿರನ್ನು ಕಾಮದ ದೃಷ್ಟಿಯಿಂದ ನೋಡುವಂತೆ ಮಾಡುತ್ತದೆ. ಇದಾದ ನಂತರ, ದಕ್ಷಿಣ ಭಾರತದವರನ್ನು ಮಂಗಗಳಂತೆ, ಶ್ರೀಲಂಕಾದ ಜನರನ್ನು ರಾಕ್ಷಸರಂತೆ ಬಿಂಬಿಸಿರುವ ರಾಮಾಯಣದ ಮೇಲೂ ನಿಷೇಧ ಹೇರಬೇಕು, ಪುರೋಹಿತಶಾಹಿಗಳನ್ನು ನಿಂದಿಸುವ ವಚನಗಳನ್ನು ರದ್ದುಮಾಡಬೇಕು.... ಹೀಗೆ ಯುಗ ಯುಗಗಳನ್ನು ದಾಟಿ ವಾಸ್ತವಕ್ಕೆ ಬಂದು ಎಸ್.ಎಲ್. ಭೈರಪ್ಪ ಬರೆದಿರುವ 'ಆವರಣ' ಎಂಬ ವಿಕೃತ ಕೃತಿಯನ್ನೂ ಮುಟ್ಟುಗೋಲು ಹಾಕಿಕೊಳ್ಳಬೇಕು...

ಈ ವಾದ ಹೀಗೆ ಮುಂದುವರೆದರೆ ಏನಾಗುತ್ತದೆ ಊಹಿಸಿ. ಆದ್ದರಿಂದ ಮನುಸ್ಮೃತಿಯಾಗಲೀ, ಅದರ ಶನಿ ಸಂತಾನದಂತಿರುವ 'ಆವರಣ'ವಾಗಲಿ, ಬಂಜಗೆರೆಯವರ ಅನುಮಾನಿತ 'ಕಹಿ ಸತ್ಯ'ವಾಗಲಿ, ತಸ್ಲೀಮಾ ನಸ್ರೀನರ ಅಸಭ್ಯ ಬರವಣಿಗೆಗಳಾಗಲೀ, ಯಾವುದನ್ನೂ ಮುಟ್ಟುಗೋಲು ಹಾಕಿಕೊಳ್ಳಬಾರದು. ಯಾವುದೇ ಕೃತಿಯನ್ನು ವಿಮರ್ಶೆಗೆ ಒಡ್ಡಿ, ಇಷ್ಟವಾದರೆ ಪ್ರೋತ್ಸಾಹಿಸಿ ಇಷ್ಟವಾಗದಿದ್ದರೆ ತಿರಸ್ಕರಿಸಿ ಬಿಡಬಹುದೇ ಹೊರತು ಮುಟ್ಟುಗೋಲು ಹಲ್ಲೆ, ಇತ್ಯಾದಿಗಳು ಸರಿಯಲ್ಲ.

* * * * * * * * * *


ಈ ತಸ್ಲೀಮಾ ನಸ್ರೀನ್ ಎಂತಹ ಬರಹಗಾರ್ತಿ? ಅದಕ್ಕೆ, ಈಕೆಯ ಬಗ್ಗೆ ಅಪ್ಪ ಬರೆದಿದ್ದನ್ನು ಇಲ್ಲಿ ಯಥಾವತ್ತಾಗಿ ನೀಡುತ್ತೇನೆ.

"(ಸಲ್ಮಾನ್ ರಶ್ದಿ ಬರೆದ) 'ಸೆಟಾನಿಕ್ ವರ್ಸಸ್' ಪುಸ್ತಕದ ಅನೇಕ ಭಾಗಗಳು ನಿಜಕ್ಕೂ ಕೆಟ್ಟದಾಗಿವೆ, ಅಶ್ಲೀಲವಾಗಿವೆ, ಶಾಕಿಂಗ್ ಆಗಿವೆ. ಸಲ್ಮಾನ್ ರಶ್ದಿ ಈ ತರಹದ ಲೇಖಕನಾದರೆ ತಸ್ಲೀಮಾ ನಸ್ರೀನ್ ಇನ್ನೂ ಕೆಳಮಟ್ಟದವಳು. ಒಂದು ಕತೆಯನ್ನು ಸರಿಯಾಗಿ ಹೇಳುವುದು ಗೊತ್ತಿಲ್ಲದ, ಒಂದು ಸಮಸ್ಯೆಯ ಬಗ್ಗೆ ಚಿಂತಿಸುವುದು ಅರಿಯದ ನಸ್ರೀನ್ ಬರೆಯುವುದು ಎಲ್ಲರನ್ನು ಬೆಚ್ಚಿಸುವುದಕ್ಕಾಗಿ. ತನ್ನ ಮಾತು ಮತ್ತು ವರ್ತನೆಯಿಂದ ಎಲ್ಲರಲ್ಲಿ ದಿಗ್ಭ್ರಮೆ ಹುಟ್ಟಿಸುವುದಕ್ಕಾಗಿ. ಜೀವ ಹೋದರೂ ಚಿಂತೆಯಿಲ್ಲ, ಮಾನ ಹೋದರೂ ಚಿಂತೆಯಿಲ್ಲ-ಹೇಗಾದರೂ ಮಾಡಿ ಪ್ರಸಿದ್ಧವಾಗಬೇಕು.

ಸಾಹಿತಿಯ ಸ್ವಪ್ರತಿಷ್ಠೆ, ಉದ್ಧಟತನ ನಿಜಕ್ಕೂ ಕರುಣಾಜನಕ ಅನ್ನಿಸಬಲ್ಲವು. ಬರೆಯುವುದೇ ಒಂದು ರೀತಿಯ ಪ್ರದರ್ಶನ; ಹೆಸರಿಗಾಗಿ, ಎಲ್ಲರ ಗಮನ ಸೆಳೆಯುವುದಕ್ಕಾಗಿ. ಶಾಕ್ ಮಾಡುವುದಕ್ಕಾಗಿ ಬರೆಯುವುದು ನೀಚತನ. ರಶ್ದಿ ಆ ತರಹದವನು; ತಸ್ಲೀಮಾ ಅವನಿಗಿಂತ ಕೆಳಮಟ್ಟದವಳು."

ಅಪ್ಪ ಹೇಳಿರುವಂತೆ ತಸ್ಲೀಮಾ ನಸ್ರೀನ್ ಬರೆಯುವುದು-ತನ್ನ ಲೈಂಗಿಕತೆಯ ಬಗೆಗೂ ಸೇರಿದಂತೆ-ಶಾಕ್ ಮಾಡಲು. ಮುಸಲ್ಮಾನ ಸಮುದಾಯದಲ್ಲಿ ಮಹಿಳೆಯರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಆಕೆಗೆ ನಿಜವಾದ ಕಾಳಜಿ ಇದ್ದಿದ್ದರೆ ಈಗಾಗಲೇ ಬಹಳಷ್ಟು ಮುಸಲ್ಮಾನ ಲೇಖಕಿಯರು ಬರೆದಿರುವಂತೆ ಸೃಜನಶೀಲವಾಗಿ ಬರೆಯುತ್ತಾ ಸಮಾಜದ ಸುಧಾರಣೆಗೆ ಪ್ರಯತ್ನಿಸಬಹುದಿತ್ತು. ಉದಾಹರಣೆಗೆ ನಮ್ಮ ಪ್ರೀತಿಯ ಸಾರಾ ಅಬೂಬಕ್ಕರ್‌ರವರನ್ನೇ ತೆಗೆದುಕೊಳ್ಳಿ. ಬುರ್ಖಾ ಪದ್ಧತಿ ಕುರಿತಂತೆ ಅವರು ಬರೆದ 'ಚಂದ್ರಗಿರಿಯ ತೀರದಲ್ಲಿ' ಎಷ್ಟು ಸೃಜನಶೀಲವಾಗಿದೆ ಎಂದರೆ ಅಪ್ಪ ಸೇರಿದಂತೆ ಮುಸಲ್ಮಾನ ಸಮುದಾಯದ ಬಹಳಷ್ಟು ಜನ ಅದನ್ನು ಇಷ್ಟಪಟ್ಟು ಒಪ್ಪಿಕೊಂಡರು. ಆದರೂ ಆ ಕಾದಂಬರಿ ಕುರಿತಂತೆ ಹಲವು ಧರ್ಮಾಂಧ ಮುಲ್ಲಾಗಳು ಪ್ರತಿಭಟಿಸಿದಾಗ ಸಾರಾ ಬೆಂಬಲಕ್ಕೆ ಪ್ರಜ್ಞಾವಂತರೆಲ್ಲ ನಿಂತಿದ್ದರು.

ಹಾಗೆಯೇ ಪಾಕಿಸ್ತಾನದ ಲೇಖಕಿ ತೆಹಮೀನಾ ದುರ್ರಾಣಿ. 'ಮೈ ಫ್ಯೂಡಲ್ ಲಾರ್ಡ್' ಮತ್ತು 'ಬ್ಲಾಸ್‌ಫಮಿ' ಎಂಬ ಎರಡು ಕಾದಂಬರಿಗಳನ್ನು ಬರೆದಿರುವ ದುರ್ರಾಣಿಯವರು ಅಲ್ಲಿನ ಪುರುಷ ಪ್ರಧಾನ ವ್ಯವಸ್ಥೆಯನ್ನೂ, ಧರ್ಮದ ಹೆಸರಲ್ಲಿ ಮುಲ್ಲಾಗಳು ಮಹಿಳೆಯರ ಮೇಲೆ ನಡೆಸುವ ದೌರ್ಜನ್ಯವನ್ನೂ ಬಹಿರಂಗಪಡಿಸಿದ್ದಾರೆ. ಅವರ ಪುಸ್ತಕಗಳ ವಿರುದ್ಧವೂ ಅಲ್ಲಿನ ಧರ್ಮಾಂಧರು ಕಿರುಚಾಡಲು ಶುರು ಮಾಡಿದಾಗ ಅಲ್ಲಿನ ಪ್ರಜ್ಞಾವಂತರು ಅವರ ಬೆಂಬಲಕ್ಕೆ ನಿಂತರು. ಆದರೆ ತಸ್ಲೀಮಾ ನಸ್ರೀನ್‌ರ ಸಾಹಿತ್ಯದ ಬಗ್ಗೆಯಾಗಲೀ, ಅದರಲ್ಲಿನ ಮೌಲ್ಯಗಳ ಬಗ್ಗೆಯಾಗಲೀ ಬೆಂಬಲ ವ್ಯಕ್ತಪಡಿಸುವುದು ಕಷ್ಟಕರವೇ. ಆದರೆ ಇಷ್ಟು ಹೇಳಿದ ಮೇಲೂ, ತಸ್ಲೀಮಾಳಿಗೆ ಬರೆಯುವ ಹಕ್ಕು ಇದ್ದೇ ಇದೆ. ಕೆಟ್ಟ ಸಾಹಿತ್ಯವನ್ನು ಕೂಡ...



ಬಾಲಕನಾಗಿದ್ದಾಗ ರಾಜನ್

* * * * * * * * * *

ಕಳೆದ ಶುಕ್ರವಾರ (ಆಗಸ್ಟ್ 10) ಮೆಣಸಿನಹಾಡ್ಯದಲ್ಲಿ ರಾಮೇಗೌಡ, ಕಾವೇರಮ್ಮ, ಪರಮೇಶ್ವರ್ ಮತ್ತು ಸುಂದರೇಶರಿಗೆ ಶ್ರದ್ಧಾಂಜಲಿ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು, ಸರಿಯಾಗಿ ಒಂದು ತಿಂಗಳ ಹಿಂದೆ ಪೊಲೀಸರ ಬಂದೂಕುಗಳಿಗೆ ಬಲಿಯಾದ ಈ ಅಮಾಯಕ ಆದಿವಾಸಿಗಳು ತಮ್ಮ ಹಕ್ಕುಗಳಿಗಾಗಿ, ನೆಮ್ಮದಿಯ ಜೀವನ ನಡೆಸುವುದಕ್ಕಾಗಿ. ಹೊಟ್ಟೆಪಾಡಿಗೆ ಒಂದಿಷ್ಟು ಭೂಮಿ, ತಲೆ ಮೇಲೊಂದು ಸೂರು.... ಇವುಗಳಿಗಾಗಿ ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಒಕ್ಕೂಟದ ಪ್ರಜಾಸತ್ತಾತ್ಮಕ ಮತ್ತು ಅಹಿಂಸಾತ್ಮಕ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದವರು. ಆದರೆ ಇವತ್ತು ನಮ್ಮ ಪ್ರಜಾಪ್ರಭುತ್ವದಲ್ಲಿ ನಕ್ಸಲರು ಶಶಾಸ್ತ್ರಗಳನ್ನು ಕೈಗೆತ್ತಿಕೊಳ್ಳುವುದು ಎಷ್ಟು ಅಪರಾಧವೋ, ಬಡವರು, ದಲಿತರು, ಮಹಿಳೆಯರು, ಆದಿವಾಸಿಗಳು ತಮ್ಮ ಹಕ್ಕುಗಳಿಗಾಗಿ ಸೊಲ್ಲೆತ್ತುವುದು ಅದಕ್ಕಿಂತಲೂ ದೊಡ್ಡ ಅಪರಾಧವಾಗಿದೆ.

ಇಲ್ಲವಾದರೆ ಮೆಣಸಿನಹಾಡ್ಯದಲ್ಲಿ ಈ ನಾಲ್ಕು ಜನ ವಿನಾಕಾರಣ ಪೊಲೀಸರ ಗುಂಡುಗಳಿಗೆ ಬಲಿಯಾಗುತ್ತಿದ್ದರೆ? ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗಲಿಲ್ಲವೆಂದು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ ಮಣ್ಣಿನ ಮಗ ಎಂಬ ಅಪವಾದವನ್ನು ಹೊತ್ತಿರುವ ದೇವೇಗೌಡರು "ಸತ್ತರೆ ಸಾಯಿಲಿ ಬಿಡ್ರಿ" ಎನ್ನುತ್ತಿದ್ದರೆ? ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಬೀದಿಗಿಳಿದ ಗಾರ್ಮೆಂಟ್ ಕಾರ್ಖಾನೆಯ ಮಹಿಳೆಯರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡುತ್ತಿದ್ದರೆ? ಅವರಲ್ಲಿ ಇಬ್ಬರಿಗೆ ಗರ್ಭಪಾತವಾಗುವಂತೆ ಬಡಿಯುತ್ತಿದ್ದರೆ? ದೇವರಾಜು ಅರಸ್‌ರ ಭೂಸುಧಾರಣಾ ನೀತಿಯನ್ನು ಮರೆತು ಕುವೆಂಪುರವರ 'ನೇಗಿಲ ಯೋಗಿ' ಸಿದ್ಧಾಂತಕ್ಕೆ ತಿಲಾಂಜಲಿ ಇಟ್ಟು ರೈತರಿಂದ ಭೂಮಿಯನ್ನು ಬಲವಂತವಾಗಿ ಕಸಿದು ವಿದೇಶಿ ಕಂಪನಿಗಳಿಗೆ ಧಾರೆಯೆರದು ಕೊಡುತ್ತಿದ್ದರೆ? ಇಲ್ಲಿ ಪ್ರಜಾಪ್ರಭುತ್ವ, ನ್ಯಾಯ, ನೀತಿ ಎಂಬುದು ಇನ್ನೂ ಇದೆಯೇ?

ಮೊನ್ನಿನ ಶ್ರದ್ಧಾಂಜಲಿ ಸಭೆಗೆ ನೂರಾರು ಜನರು ದೂರದೂರುಗಳಿಂದ ಬಂದಿದ್ದರು. ಬಿಡದೇ ಸುರಿಯುತ್ತಿದ್ದ ಮಳೆ, ರಕ್ತ ಹೀರಲು ಕಾದಿದ್ದ ಇಂಬಳಗಳು, ಪೊಲೀಸರ ಬೆದರಿಕೆ, ಕಟ್ಟಿದ್ದ ಟಾರ್ಪೊಲೀನ್ ಅನ್ನೇ ಕಿತ್ತುಹಾಕಿ ಬೀಸುತ್ತಿದ್ದ ಗಾಳಿ, ದಾಟಲು ಅಸಾಧ್ಯವೆಂಬಂತೆ ಮಳೆ ನೀರಿನಿಂದ ತುಂಬಿದ್ದ ರಸ್ತೆ, ಸೇತುವೆಗಳು... ಇವೆಲ್ಲವನ್ನೂ ಮೀರಿ ಜನ ಬಂದಿದ್ದರು. ಸತ್ತವರನ್ನು ನೆನಪಿಸಿಕೊಳ್ಳಲು, ಆದಿವಾಸಿಗಳ ಹೋರಾಟಕ್ಕೆ ಬೆಂಬಲ ಸೂಚಿಸಲು, ಜನ ಬೆಂಬಲದಿಂದ ಧೈರ್ಯ ಪಡೆಯಲು. ಅಂದು ಅಲ್ಲಿ ಸೇರಿದ್ದವರೆಲ್ಲರ ಕಣ್ಣುಗಳಲ್ಲಿ ದುಃಖ ಮತ್ತು ಆತಂಕ ಮಡುಗಟ್ಟಿದ್ದವು.

ಪೊಲೀಸರ ಬಂದೂಕಿನ ನೆರಳಲ್ಲಿ ಬದುಕುತ್ತಿರುವ ಅವರನ್ನೆಲ್ಲ ಕಂಡು ನಾವು ಪ್ರಜಾಪ್ರಭುತ್ವದಲ್ಲಿ ಬದುಕುತ್ತಿದ್ದೇವೋ ಅಥವಾ ಸರ್ವಾಧಿಕಾರಿ ವ್ಯವಸ್ಥೆಯಲ್ಲಿ ಜೀವಿಸುತ್ತಿದ್ದೇವೋ ಎನಿಸಿತು.

* * * * * * * * * *

ಅಂದಹಾಗೆ ಬಹಳಷ್ಟು ಜನ 60 ವರ್ಷಗಳ ಸ್ವತಂತ್ರ ಭಾರತದ ಇತಿಹಾಸದಲ್ಲಿ ಪ್ರಜಾಪ್ರಭುತ್ವಕ್ಕೆ ಕಳಂಕ ಎಂಬುದಿದ್ದರೆ ಅದು ಇಂದಿರಾ ಗಾಂಧಿ ಹೇರಿದ್ದ ತುರ್ತುಪರಿಸ್ಥಿತಿ ಎಂದೇ ನಂಬಿದ್ದಾರೆ. ಆದರೆ ಇವತ್ತು ಆ ತುರ್ತುಪರಿಸ್ಥಿತಿಯನ್ನೇ ಮೀರಿಸುವಂತಹ ಕಾನೂನುಗಳು ಜಾರಿಯಲ್ಲಿದ್ದು ಇವತ್ತು ಅಘೋಷಿತ ತುರ್ತುಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದೇವೆ ಎಂಬುದು ಅಂಥವರ ಅರಿವಿಗೆ ಇನ್ನೂ ಬಂದಿಲ್ಲದಿರುವುದೇ ಒಂದು ದುರಂತ.

ಇವತ್ತಿನ **POTA, Unlawful Activities Prevention Act,** ಇತ್ಯಾದಿಗಳ ಮುಂದೆ ತುರ್ತುಪರಿಸ್ಥಿಯ **MISA** ಯಾವ ಲೆಕ್ಕಕ್ಕೂ ಇಲ್ಲ. ಹಾಗೆಯೇ ಅಂದಿನಂತೆ ಇಂದೂ ಪೊಲೀಸರು ಮನೆ ಮನೆಗಳಿಗೆ ನಡುರಾತ್ರಿ ನುಗ್ಗುತ್ತಾರೆ, ಯಾರನ್ನು ಬೇಕಾದರೂ ಬಂಧಿಸುತ್ತಾರೆ, ಅವರನ್ನು ತಮಗೆ ಇಷ್ಟವಾದಷ್ಟು ದಿನ ಬಂಧಿಸಿಡುತ್ತಾರೆ... ಇವೆಲ್ಲಾ ತುರ್ತುಪರಿಸ್ಥಿತಿಯ ಲಕ್ಷಣಗಳಲ್ಲದೆ ಮತ್ತಿನ್ನೇನು?

ಅಂದಿನ ತುರ್ತುಪರಿಸ್ಥಿತಿ ಸಮಯದಲ್ಲಿ ಬಹಳಷ್ಟು ಪ್ರಚಾರ ಪಡೆದಿದ್ದು, ಪೊಲೀಸರ ಕೃತ್ಯವನ್ನು ಬಯಲಿಗೆಳೆದದ್ದು, ರಾಜಕಾರಣಿಗಳ ಅಮಾನುಷತವನ್ನು ಬಹಿರಂಗಪಡಿಸಿದ್ದು ರಾಜನ್ ಪ್ರಕರಣ. ಕೇರಳದಲ್ಲಿ ವಿದ್ಯಾರ್ಥಿಯಾಗಿದ್ದ ರಾಜನ್‌ನನ್ನು ಒಂದು ದಿನ ಪೊಲೀಸರು ಬಂಧಿಸಿ ಅದೆಲ್ಲೋ ಕರೆದುಕೊಂಡು ಹೋದರು. ಆನಂತರ ಆತನಿಗೇನಾಯಿತು? ಅವನೆಲ್ಲಿದ್ದಾನೆ? ಅವನನ್ನು ಪೊಲೀಸರು ಕೊಂದರೆ? ಆತ ಯಾವ ತಪ್ಪು ಮಾಡಿದ ಎಂದು ಪೊಲೀಸರು ರಾಜನ್‌ನನ್ನು ಬಂಧಿಸಿದರು? ಎಂಬೆಲ್ಲಾ ಪ್ರಶ್ನೆಗಳು ಎಲ್ಲೆಡೆ ಕೇಳಿಬರುತ್ತಿದ್ದವು. ಆದರೆ ಯಾವ ಪ್ರಶ್ನೆಗೂ ಉತ್ತರಗಳು ಸಿಗಲೇ ಇಲ್ಲ.

ರಾಜನ್ ಪ್ರಕರಣ ಹಲವಾರು ವರ್ಷಗಳ ಕಾಲ ರಾಷ್ಟ್ರೀಯ ಸುದ್ದಿಯಾಗಿತ್ತು, ಅದನ್ನು ಆಧರಿಸಿ ಒಂದು ಉತ್ತಮ ಚಲನಚಿತ್ರವೂ ಬಂದಿತ್ತು (ಖ್ಯಾತ ನಿರ್ದೇಶಕ ಶಾಜಿ ಕರುಣ್ ಅದನ್ನು ತಯಾರಿಸಿದ್ದರು). ಇವತ್ತಿಗೂ ರಾಜನ್ ಪ್ರಕರಣ ತುರ್ತುಪರಿಸ್ಥಿತಿಯಲ್ಲಿ ನಡೆಯುವ ದೌರ್ಜನ್ಯಗಳಿಗೆ ಒಂದು ಸಾಕ್ಷಿಯಾಗಿ ನಿಲ್ಲುತ್ತದೆ.

ಪುತ್ರ/ಪುತ್ರಿ ಅಗಲಿಕೆಯ ಶೋಕ ನಿರಂತರ ಎಂಬ ಮಾತಿದೆ. ರಾಜನ್ ತಂದೆ ಪ್ರೊ. ಟಿ.ವಿ. ಈಚಾರ್ ವಾರಿಯರ್ ಬದುಕಿನಲ್ಲಿ ಅದು ನಿಜವಾಯಿತು. ಮಗ ರಾಜನ್ ನಾಪತ್ತೆಯಾದ ದಿನದಿಂದ ಅವರು ಆತನಿಗಾಗಿ ಎಲ್ಲೆಡೆ ಹುಡುಕಾಡಿದರು, ರಾಜಕಾರಣಿಗಳನ್ನು ಬೇಡಿದರು, ಪೊಲೀಸರ ಮುಂದೆ ಅಂಗಲಾಚಿದರು, ಪತ್ರಕರ್ತರ ನೆರವನ್ನು ಕೇಳಿದರು. ಇದ್ಯಾವುದರಿಂದಲೂ ಪ್ರಯೋಜನವಾಗದಿದ್ದಾಗ ನ್ಯಾಯಾಲಯದ ಮೊರೆಹೋದರು. ಅಲ್ಲಿ ಅವರಿಗೆ ತಮ್ಮ ಮಗ ಸಿಗದಿದ್ದರೂ, ಆತನ ನಾಪತ್ತೆಗೆ ಕಾರಣರಾದ ಪೊಲೀಸ್ ಅಧಿಕಾರಿಗಳಿಗೆ ಶಿಕ್ಷೆ ಆಗದಿದ್ದರೂ ಅವರಿಗೆ ಆರು ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಲಾಯಿತು. ಆ ಹಣದಲ್ಲಿ ತಮ್ಮ ಮಗನ ನೆನಪಿನಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಿದ ವಾರಿಯರ್ ಉಳಿದ ಹಣವನ್ನು ಆಸ್ಪತ್ರೆಗೆ ದಾನ ಮಾಡಿದರು.

ಈಚಾರ್ ವಾರಿಯರ್ ತಮ್ಮ ಮಗನಿಗಾಗಿ ನಡೆಸಿದ ಹೋರಾಟವನ್ನು 'ತಂದೆಯ ನೆನಪುಗಳು' ಎಂಬ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಇದನ್ನು ನಮ್ಮ ಪ್ರೀತಿಯ ಸಾರಾ ಅಬೂಬಕ್ಕರ್‌ರವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಪುಸ್ತಕ ಎಷ್ಟು ಮನಮುಟ್ಟುವಂತಿದೆ ಎಂದರೆ ಅಬೂಬಕ್ಕರ್‌ರವರ ಹಸ್ತಪ್ರತಿಯನ್ನು ನಾನು ಒಂದೇ ರಾತ್ರಿಯಲ್ಲಿ ಓದಿ ಮುಗಿಸಿದೆ. ಹಾಗೆ, ಮುಗಿಸಿದಾಗ ನಾನು ಕಣ್ಣೀರಿಡುತ್ತಿದ್ದೆ....

ಖ್ಯಾತ ಇಂಗ್ಲಿಷ್ ಕವಿ ಡಿಲನ್ ಥಾಮಸ್‌ರವರ ಒಂದು ಪದ್ಯದ ಸಾಲುಗಳು ಹೀಗಿವೆ:

Do not go gentle into that good night,

Rage, rage against the fading of the light.....

ಈ ಸಾಲಿನಂತೆ ವಾರಿಯರ್‌ರವರು ತಮ್ಮ ಕೊನೆ ಉಸಿರಿನ ತನಕ ಹೋರಾಡಿ ಕಳೆದ ವರ್ಷ ಕೊನೆಯುಸಿರೆಳೆದರು. ರಾಜನ್ ಕಣ್ಮರೆಯಾದಾಗ ಕೇರಳದ ಗೃಹಮಂತ್ರಿ ಆಗಿದ್ದ ಕೆ. ಕರುಣಾಕರನ್ ಎಂಬ ರಾಜಕಾರಣಿ ವಾರಿಯರ್‌ರವರ ಸಾವಿನ ಸುದ್ದಿ ಕೇಳಿದಾಗ ಹೇಳಿದ್ದೇನು ಗೊತ್ತಾ?

"ಯಾರು ಈ ವಾರಿಯರ್? ಆತನೇನು ರಾಜಕಾರಣಿಯೇ, ನಾಯಕನೇ, ಸಾಹಿತಿಯೇ? ಈ ದೇಶಕ್ಕೆ ಅವನ ಕೊಡುಗೆ ಏನು?" ಎಂದಿದ್ದರು ಕೇರಳದ ಈ ನಾಯಕ! ಅಷ್ಟೇ ಅಲ್ಲ, ರಾಜನ್ ಕೇಸ್ ಹೊರಬಿದ್ದ ನಂತರವೂ ತಾನು ಎಲ್ಲ ಚುನಾವಣೆಗಳಲ್ಲಿ ಗೆಲ್ಲುತ್ತಾ ಬಂದಿದ್ದೇನೆ ಎಂದೂ ಹೇಳಿದ್ದರು. ಆದರೆ ರಾಜನ್ ಮತ್ತು ಆತನ ತಂದೆ ವಾರಿಯರ್‌ರಂಥವರು ನಮ್ಮ ಈ ಪ್ರಜಾಪ್ರಭುತ್ವ ಎಂತಹದ್ದು ಎಂಬುವನ್ನು ತೋರಿಸುತ್ತಾರೆ. ಆ ಕೊಡುಗೆ, ಕರುಣಾಕರನ್‌ನಂತಹ ನಾಯಕರ ಕೊಡುಗೆಗಿಂತ ಅಮೂಲ್ಯವಾಗಿರುತ್ತದೆ....

ಸಾರಾ ಅಬೂಬಕ್ಕರ್‌ರವರು ಅನುವಾದಿಸಿರುವ ವಾರಿಯರ್‌ವರ ಪುಸ್ತಕದ ಹಲವು ಕಂತುಗಳನ್ನು ಈ ವಾರದಿಂದ ಪ್ರಕಟಿಸುತ್ತಿದ್ದೇವೆ. ಇದನ್ನು ಬರೆದುಕೊಟ್ಟ ಸಾರಾ ಅಬೂಬಕ್ಕರ್‌ರವರಿಗೆ ಧನ್ಯವಾದಗಳನ್ನು ಹೇಳುತ್ತಾ ರಾಜನ್ ಮತ್ತು ಈಚಾರ್ ವಾರಿಯರ್‌ರವರನ್ನು ಸ್ಮರಿಸುತ್ತಾ...

-ಗೌರಿ ಲಂಕೇಶ್

ಉತ್ತರಹಳ್ಳಿ ಬಗರ್‌ಹುಕುಂ ಲ್ಯಾಂಡ್ ಗ್ರಾಬಿಂಗ್:

ಭೂಕೊಳ್ಳೆಯಲ್ಲಿ ಇನ್ನಷ್ಟು ಚೆಡ್ಡಿವೀರರು!

ಭಾಗ-3

ಇವತ್ತಿನ ರಾಕ್ಷಸ ಬೆಂಗಳೂರಿನ ದುರಂತಕ್ಕೂ ಉತ್ತರಹಳ್ಳಿ ಬಗರ್‌ಹುಕುಂ ಭೂಕಬಳಿಕೆಗೂ ಸಂಬಂಧ ವಿಲ್ಲವೇ ಇದ್ದಿದ್ದರೆ ಈ ಬಗ್ಗೆ ನಾವ್ಯಾರೂ ಇಷ್ಟೊಂದು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ.

ನಿಮ್ಮಲ್ಲೇ ಹೀಗೊಂದು ಪ್ರಶ್ನೆ ಹಾಕಿಕೊಳ್ಳಿ. ಏನೀವತ್ತು ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್ ಗಳಿವೆಯೋ ಅಂಥ ಒಂದೇ ಒಂದು ಶ್ವಾಸಕೇಂದ್ರವನ್ನು ಸ್ವಾತಂತ್ರ್ಯ ಬಂದು ಅರ್ಧ ಶತಮಾನವಾದರೂ ನಮ್ಮಿಂದ ಏಕೆ ನಿರ್ಮಿಸಲಾಗುತ್ತಿಲ್ಲ?

ಹೋಗಲಿ; ನಿಮಗೆ ವಿಕ್ಟೋರಿಯಾ ಮತ್ತು ಬೋರಿಂಗ್ ಆಸ್ಪತ್ರೆಗಳು ಗೊತ್ತಲ್ಲ! ಅದನ್ನೂ ಬ್ರಿಟೀಷರೇ ಕಟ್ಟಿದ್ದು. ಆವತ್ತಿನ ಬೆಂಗಳೂರಿನ ಜನಸಂಖ್ಯೆಗೆ ತಕ್ಕಂಥ ನಿರ್ಮಿಸಲ್ಪಟ್ಟ ಈ ಎರಡು ಆಸ್ಪತ್ರೆಗಳ ಹೊರತಾಗಿ ಇಂಥ ಮತ್ತೊಂದು ಆಸ್ಪತ್ರೆಯನ್ನೇಕೆ ಕಟ್ಟಲಿಲ್ಲ? ಯಾವುದೋ ಕಾಲದ ಸ್ಮಶಾನಗಳನ್ನು ಬಿಟ್ಟರೆ ಬೆಂಗಳೂರಿನ ಇವತ್ತಿನ ಜನ ದಟ್ಟಣೆಗೆ ಹೆಣ ಹೂಳುವುದಕ್ಕೂ ಜಾಗವಿಲ್ಲ, ಇನ್ನು ಮಕ್ಕಳ ಆಟಕ್ಕೆ, ಆಯಾ ಏರಿಯಾಗಳಲ್ಲಿ ಬಸ್ ನಿಲ್ದಾಣಕ್ಕೆ, ದನದ ಆಸ್ಪತ್ರೆಗೆ, ದಲಿತರ ಹಾಸ್ಟೆಲಿಗೆ, ಪಾಲಿಕೆ ಕಛೇರಿಗಳಿಗೆ, ಸರ್ಕಾರಿ ಕಛೇರಿಗಳಿಗೆಂದು ಅಂಗೈಯಗಲದ ಭೂಮಿ ಇಲ್ಲದೇ ಹೋಗಿದೆ. ಆದರೂ ಮುಟ್ಟುಗೋಲಾದ ಸರ್ಕಾರಿ ಭೂಮಿಯನ್ನೇಕೆ ಸರ್ಕಾರ ಹರಾಜಿಗಿಟ್ಟಿದೆ?


ಮನುಷ್ಯನ ದುಷ್ಟತನ ಮತ್ತು ಆತ್ಮಘಾತುಕತನಕ್ಕೆ ಇದಕ್ಕಿಂತ ನಿದರ್ಶನಬೇಕೆ?

ಈ ಪಾಟ ಬೆಂಗಳೂರಿಗೆ ಇನ್ನೊಂದು ಕಬ್ಬನ್ ಪಾರ್ಕ್, ಮತ್ತೊಂದು ವಿಕ್ಟೋರಿಯಾ ಆಸ್ಪತ್ರೆ, ಹತ್ತಾರು ಹರಿಶ್ಚಂದ್ರ ಘಾಟ್, ಡಜನ್ನುಗಟ್ಟಲೆ ಆಟದ ಮೈದಾನಗಳು ಮತ್ತು ಪಾರ್ಕಿಂಗ್‌ಗೆಂದು ಜಾಗ ಇಲ್ಲದೇ ಹೋದರೆ ಬೆಂಗಳೂರು ನರಕವಾಗುತ್ತದೆ. ಈಗಾಗಲೇ ಅದು ನರಕವಾಗಿದೆ. ಈಗಿನ ಗಾತ್ರಕ್ಕೆ ಕನಿಷ್ಠವೆಂದರೂ ಹತ್ತು ಲಾಲ್‌ಬಾಗ್‌ಗಳಿರಬೇಕಿತ್ತು, ಎಂಟು ವಿಕ್ಟೋರಿಯಾ ಆಸ್ಪತ್ರೆಗಳು ಬೇಕೇಬೇಕು. ಹೆಣ ಹೂಣುವುದಕ್ಕೂ ಜಾಗ ಇಲ್ಲದಿರುವಾಗ ಸರ್ಕಾರ ಜಪ್ತಾದ ಸರ್ಕಾರಿ ಜಮೀನನ್ನು ಹರಾಜಿಗಿಟ್ಟು ದುಡ್ಡೆಣಿಸಿಕೊಳ್ಳುತ್ತದೆಯೆಂದರೆ ಅದಕ್ಕೆ ಕ್ಷಮೆಯುಂಟೆ?


ಈ ಬಗ್ಗೆ ಬೆಂಗಳೂರಿನ ಯಾರೊಬ್ಬರೂ ತಲೆ ಕೆಡಿಸಿಕೊಳ್ಳುತ್ತಿಲ್ಲವೆಂದರೆ ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುತ್ತಾ?

ಉತ್ತರಹಳ್ಳಿ ಬಗರ್‌ಹುಕುಂ ಭೂಕೊಳ್ಳೆ ಕೂಡ ಇಂಥದ್ದೇ ಆತ್ಮಘಾತುಕ ಕೃತ್ಯ. ಬೆಂಗಳೂರಿನ ನೆಮ್ಮದಿಯನ್ನು ಶವಪೆಟ್ಟಿಗೆಯೊಳಗಿಟ್ಟು ಮೊಳೆ ಹೊಡೆದರೆ ಅವುಗಳಲ್ಲಿ ಒಂದು ಮೊಳೆಯಂತೂ ಖಂಡಿತ ಈ ಹಗರಣದ್ದಾಗಿರುತ್ತದೆ. ಈ ಕೊಳ್ಳೆಯಲ್ಲಿ ನಡೆದ ಅಕ್ರಮಗಳ ಪೈಕಿ ಎಂಥವರನ್ನೂ ಬೆಚ್ಚಿಬೀಳಿಸುವುದು; ದೋಚಲ್ಪಟ್ಟ ಭೂಮಿ ಬೆಂಗಳೂರಿನಿಂದ 18 ಕಿ.ಮೀ.ಗಳ ಆಚೆಗಿದೆ ಎಂದು ಸರ್ಕಾರವೇ ಸುಳ್ಳು ದಾಖಲೆ ಸೃಷ್ಟಿಸಿದ್ದು!

ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಆಕ್ಟ್ 1976 ಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡಿದ ನಗರಾಭಿವೃದ್ಧಿ ಇಲಾಖೆ 1995 ರ ನವೆಂಬರ್ 7 ರಂದು



ಬೆಂಗಳೂರಿನ ನೆಮ್ಮದಿಯನ್ನು ಶವಪೆಟ್ಟಿಗೆಯೊಳಗಿಟ್ಟು ಮೊಳೆ ಹೊಡೆದರೆ ಅವುಗಳಲ್ಲಿ ಒಂದು ಮೊಳೆಯಂತೂ ಖಂಡಿತ ಈ ಹಗರಣದ್ದಾಗಿರುತ್ತದೆ. ಈ ಕೊಳ್ಳೆಯಲ್ಲಿ ನಡೆದ ಅಕ್ರಮಗಳ ಪೈಕಿ ಎಂಥವರನ್ನೂ ಬೆಚ್ಚಿಬೀಳಿಸುವುದು; ದೋಚಲ್ಪಟ್ಟ ಭೂಮಿ ಬೆಂಗಳೂರಿನಿಂದ 18 ಕಿ.ಮೀ.ಗಳ ಆಚೆಗಿದೆ ಎಂದು ಸರ್ಕಾರವೇ ಸುಳ್ಳು ದಾಖಲೆ ಸೃಷ್ಟಿಸಿದ್ದು!




ಎಂ. ಸಿ. ರಾಜಣ್ಣ



ಕರೀ ರೇಣುಕಪ್ಪ

ಬಿ.ಎಂ. ಕಾವಲ್‌ನ ಸರ್ಕಾರಿ ಭೂಮಿ






ಅಂಜನಪ್ಪ

ಮಾರ್ವಾಡಿ ಎಮ್ಮೆಲ್ಲೇ ಸುರಾನಾನ ಪ್ರೇಯಸಿಗೂ ಲ್ಯಾಂಡು!

ಉತ್ತರಹಳ್ಳಿಯ ಸಮಸ್ತ ಭೂಸೌಮ್ಯಕ್ಕೆ ಅಶೋಕ್ ಅಧಿಪತಿಯಾದದ್ದೇ ತಡ ಬೆಂಗಳೂರಿನ ಮಾರ್ವಾಡಿಗಳ ಹಿಂಡೊಂದು ಬಗರ್‌ಹುಕುಂ ಕಬಳಿಕೆಗೆ ಮುಂದಾಯಿತು. ಹವಾಲಾ ಖದೀಮ ಶಾಂತಿಲಾಲ್, ಚಿಕ್ಕಪೇಟೆಯ ಬಿಜೆಪಿ ನಾಯಕ ಉಗಮ್ ರಾಜ್ ಜೈನ್, ನಕಲಿ ಎಲೆಕ್ಟ್ರಿಕಲ್ಸ್ ದಂಧೆಯ ಪಾರಸ್‌ಮಲ್ ಇತ್ಯಾದಿಗಳೆಲ್ಲ ಯಾರ್‍ಯಾರಿಗೆ ಬಗರ್‌ಹುಕುಂ ಮಂಜೂರಾಗಿದೆಯೋ ಅಂಥವರಿಂದ ಭೂಮಿ ಖರೀದಿಸಲಾರಂಭಿಸಿದ್ದಾರೆ. ಕಾಯ್ದೆಯಂತೆ ಮಂಜೂರಾದ ಭೂಮಿ 15 ವರ್ಷಗಳ ಪರಭಾರೆಯಾಗುವಂತಿಲ್ಲ.


ಆದರೆ ಇಂಥ ಮಾರ್ವಾಡಿಗಳ ಬೆನ್ನಿಗೆ ಭಾರತಿನಗರದ ಮಾರ್ವಾಡಿ ಎಮ್ಮೆಲ್ಲೇ ಸಾಕ್ಷಾತ್ ನಿರ್ಮಲ್ ಕುಮಾರ್ ಸುರಾನಾನೇ ನಿಂತ ಮೇಲೆ ಕಾನೂನು ಯಾವ ಲೆಕ್ಕ?

ಸದ್ಯ ಭಾರತಿನಗರದ ಶಾಸಕನಾಗಿರುವ ನಿರ್ಮಲ್ ಸುರಾನಾನ ಹುಟ್ಟುಕಸುಬು ಸಿಂಗಲ್ ನಂಬರ್ ದಂಧೆ. ಈತನ ತಮ್ಮ ರಿಕಬ್‌ಚಂದ್ ಸುರಾನಾ ಮೆಜೆಸ್ಟಿಕ್‌ನ ಇಡೀ ಪ್ಯಾರಿಸ್ ಕಾರ್ನರ್‌ನ ಸಿಂಗಲ್ ನಂಬರ್ ಲಾಟರಿ ರ್‍ಯಾಕೆಟ್ಟಿನ ಅಸಲಿ ಡಾನ್. ತಾವೇ ಪ್ರಿಂಟ್ ಮಾಡಿಸಿದ ನಕಲಿ ಸಿಂಗಲ್ ನಂಬರ್ ಲಾಟರಿ ಟಿಕೆಟ್ಟುಗಳನ್ನು ಕರ್ನಾಟಕದ ಉದ್ದಗಲಕ್ಕೂ ಮಾರಿ, ಲಕ್ಷಾಂತರ ಕುಟುಂಬಗಳನ್ನು ಬೀದಿಪಾಲು ಮಾಡಿದ ಈ ಸುರಾನಾ ಬ್ರದರ್ಸ್‌ಗೆ ತೀರ ಇತ್ತೀಚೆಗೆ ಲ್ಯಾಂಡ್ ಡೀಲಿನ ಹುಚ್ಚು ಹಿಡಿದಿದೆ. ಬ್ಲಾಕ್ ಮನಿಯನ್ನು ಭೂಮಿಯ ರೂಪದಲ್ಲಿಟ್ಟರೆ ಲಾಭವೂ ಹೆಚ್ಚು ದುಡ್ಡೂ ಸೇಫು!



ನಿರ್ಮಲ್ ಸುರಾನಾ

ಆದರೆ ಕಾನೂನು ರೈತನಲ್ಲದವನಿಗೆ ಕೃಷಿ ಭೂಮಿಯನ್ನು ಖರೀದಿಸಗೊಡುವುದಿಲ್ಲ. ಭೂಸುಧಾರಣೆ ಕಾಯ್ದೆಯ ಕಲಂ 79(A) ಮತ್ತು 79(B) ಪ್ರಕಾರ ವಾರ್ಷಿಕ ಎರಡು ಲಕ್ಷಕ್ಕಿಂತಲೂ ಅಧಿಕ ಆದಾಯವುಳ್ಳ ಮತ್ತು ರೈತನಲ್ಲದ ಯಾರೂ ಕೃಷಿ ಭೂಮಿಯನ್ನು ಖರೀದಿಸುವಂತಿಲ್ಲ. ಹೀಗಿದ್ದೂ ಭಾರತಿನಗರದ ಬಿಜೆಪಿ ಶಾಸಕ ನಿರ್ಮಲ್‌ಕುಮಾರ್ ಸುರಾನಾ ತನ್ನ ಪತ್ನಿ ಕಾಂತಾ ಸುರಾನಾಳ ಹೆಸರಿಗೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ನೆಟ್ಟಿಗೆರೆ ಗ್ರಾಮದಲ್ಲಿ ಹೀಗೆ ಒಟ್ಟೂ 8.12 ಎಕರೆ ಕೃಷಿ ಭೂಮಿ ಖರೀದಿಸುತ್ತಾನೆ?



ನಿರ್ಮಲ್ ಸುರಾನಾನ ಪತ್ನಿಯ ಪಹಣಿ

ಇದು ಚಿದಂಬರ ರಹಸ್ಯ!

ನೆಟ್ಟಿಗೆರೆಯ ಸ.ನಂ. 121 ರಲ್ಲಿ ಕಾಂತಾ ಸುರಾನಾ ಕೋಂ ನಿರ್ಮಲ್‌ಕುಮಾರ್ ಸುರಾನಾ 2001 ರಲ್ಲಿ ಮೊದಲು ಮೂರೆಕರೆ ಖರೀದಿಸುತ್ತಾಳೆ. ಆನಂತರ ಮತ್ತೆ ಮೂರೆಕರೆಯನ್ನು ಪಕ್ಕದಲ್ಲೇ ಖರೀದಿಸಿದ್ದಾಳೆ. ತದನಂತರ 2004 ರ ಡಿಸೆಂಬರ್ 14 ರಂದು ಮೂರನೇ ಕಂತಾಗಿ ಮತ್ತೆ 2.17 ಎಕರೆ ಜಮೀನನ್ನು ತನ್ನ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಳ್ಳುತ್ತಾಳೆ. ಅಲ್ಲಿಗೆ ಒಟ್ಟೂ 8.12 ಎಕರೆ ಕೃಷಿ ಭೂಮಿ ಎಮ್ಮೆಲ್ಲೇ ನಿರ್ಮಲ್ ಸುರಾನಾನ ಪಾಲಾದಂತಾಯ್ತು.

ಸುರಾನಾ ಹೇಳಿಕೇಳಿ ಕೋಟ್ಯಾಧೀಶ. ಭೂಸುಧಾರಣೆ ಕಾಯ್ದೆಯ ಯಾವೊಂದು ಅಧಿನಿಯಮವೂ ಇಂಥ ಪರಭಾರೆಯನ್ನು ಒಪ್ಪುವುದಿಲ್ಲ. ಮೂಲತಃ ರಾಜಸ್ಥಾನದ ಜೋಧ್‌ಪುರದಿಂದ ವಲಸೆ ಬಂದು ಜನ್ಮಾಷ್ಟಿ ಸಿಂಗಲ್ ನಂಬರ್ ದಂಧೆಯಲ್ಲಿ ತೊಡಗಿದ್ದ ಸುರಾನಾ ಆಗಲಿ, ಆತನ ಪತ್ನಿ(!)ಕಾಂತಾ ಆಗಲಿ ಅದ್ಯಾವತ್ತು ನೇಗಿಲು ಹಿಡಿದರು? ಇಂಥ ಅಕ್ರಮ ಪರಭಾರೆಯನ್ನು ಕಂಡೂ ಕಂದಾಯ ಇಲಾಖೆ ಏಕೆ ಕಣ್ಮುಚ್ಚಿ ಕೂತಿದೆ?

ಇದು ಪ್ರಶ್ನೆ. ಇನ್ನೂ ವಿಚಿತ್ರವೆಂದರೆ ವಿಧಾನಸಭೆಯ ಸ್ಪೀಕರ್‌ಗೆ ಸಲ್ಲಿಸಿದ ವಿವರದಲ್ಲಿ ತನ್ನ ಪತ್ನಿಯ ಹೆಸರನ್ನು ಸರೋಜಾ ಸುರಾನಾ ಎಂದು ನಮೂದಿಸಿರುವ ನಿರ್ಮಲ್‌ಕುಮಾರ್ ಸುರಾನಾ ಇಲ್ಲೇಕೆ ತನ್ನ ಪತ್ನಿಯ ಹೆಸರನ್ನು ಕಾಂತಾ ಸುರಾನಾ ಎಂದು ಬದಲಿಸಿದ? ಈಕೆ ಆತನ ಉಪಪತ್ನಿಯೆ? ಅಥವಾ ಪ್ರೇಯಸಿಯೆ?

ಅಥವಾ ಪತ್ನಿಯ ಹೆಸರನ್ನೇ ಬದಲಿಸಿ ನಿರ್ಮಲ್ ಸುಳ್ಳು ಸೃಷ್ಟಿಸಿದ್ದಾನಾ? ತನ್ನ ಕಪ್ಪು ಹಣವನ್ನು ರಿಯಲ್ ಎಸ್ಟೇಟಿಗೆ ಹಾಕಿ ಅದರಿಂದ ಬಚಾವಾಗಲು ಹೋಗಿ ಇಲ್ಲದ ಎಡವಟ್ಟು ಮಾಡಿಕೊಂಡಿರಬಹುದಾ? ಈ ಬಗ್ಗೆ ತನಿಖೆಯಾಗಬೇಕು. ಎಮ್ಮೆಲ್ಲೇ ಸುರಾನಾ ನೆಟ್ಟಿಗೆರೆಯಲ್ಲಿ ಖರೀದಿಸಿದ ಭೂಮಿಯನ್ನು ಸರ್ಕಾರ ಮೊದಲು ಮುಟ್ಟುಗೋಲು ಹಾಕಿಕೊಳ್ಳಬೇಕು. ಇದು ಪತ್ರಿಕೆಯ ಒತ್ತಾಯ.

ಸುತ್ತೋಲೆಯೊಂದನ್ನು ಹೊರಡಿಸುತ್ತದೆ. ಈ ಪ್ರಕಾರ ಬಗರ್‌ಹುಕುಂ ಮಂಜೂರಾತಿಯ ಜಮೀನೇನಿದ್ದರೂ ಬೆಂಗಳೂರು ಪಾಲಿಕೆ ಸರಹದ್ದಿನಿಂದ 18 ಕಿ.ಮೀ.ಯ ಆಚೆಗೇ ಇರಬೇಕು.

ಈ ಪ್ರಕಾರ ಇವತ್ತೇನು ಉತ್ತರಹಳ್ಳಿ ಮತ್ತು ಕೆಂಗೇರಿ ಹೋಬಳಿಗಳ ಸರಿ ಸುಮಾರು ಮೂರೂವರೆ ಸಾವಿರ ಎಕರೆಗಳಷ್ಟು ಸರ್ಕಾರಿ ಭೂಮಿಯನ್ನು ಬಿಜೆಪಿ ಭೂಗಳ್ಳರು ದೋಚಿದ್ದಾರೋ ಅದೆಲ್ಲವನ್ನೂ ಒಂದೇ ಏಟಿಗೆ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬಹುದು. 1999 ರ ರಿಂದ ನಡೆದ ಅಷ್ಟು ಬಗರ್‌ಹುಕುಂ ಮಂಜೂರಾತಿ ಪ್ರಕ್ರಿಯೆಯನ್ನು ಇದೊಂದೇ ಕಾರಣಕ್ಕೆ ಸರ್ಕಾರ ರದ್ದುಗೊಳಿಸಬಹುದು.



ನಿಗೂಢವಾಗಿ ಸತ್ತ ತಹಸೀಲ್ದಾರ್ ರಾಮೇಗೌಡ

ಆದರೆ ಅಶೋಕ್ ಇಲ್ಲೊಂದು ಕೈಚಳಕ ಮೆರೆದಿದ್ದಾರೆ. ಜೊತೆಗೆ ಆಗಿದ್ದ ಬೆಂಗಳೂರು ದಕ್ಷಿಣದ ಖದೀಮ ತಹಶೀಲ್ದಾರ್ ವೆಂಕಟೇಶಯ್ಯನ ತಲೆಯೂ ಕೆಲಸ ಮಾಡಿದೆ. ಅದು ಬೆಂಗಳೂರಿನ ಸರಹದ್ದನ್ನೇ ಬದಲಿಸಿದ ಖತರ್‌ನಾಕ್ ಕೃತ್ಯ. ಇದು ನಡೆದದ್ದು 29.3.2001 ರಂದು. ಆಗ ಬೆಂಗಳೂರು ದಕ್ಷಿಣ ಉಪವಿಭಾಗಕ್ಕೆ ಉಪವಿಭಾಗಾಧಿಕಾರಿಯಾಗಿದ್ದವನು ಪ್ರಳಾಯಂತಕ ವೈ.ಎಂ. ರಾಮಚಂದ್ರಮೂರ್ತಿ!

ಸದ್ಯಕ್ಕೆ ಐಎಡಿಬಿಯಲ್ಲಿ ಭೂಸ್ವಾದೀನಾಧಿಕಾರಿಯಾಗಿರುವ ಈತ ಉಪವಿಭಾಗಾಧಿಕಾರಿಯಾಗುವುದಕ್ಕೂ, ಭೂಕಬಳಿಕೆಯನ್ನು ವಿರೋಧಿಸಿದ ನಿಷ್ಠುರಿ ತಹಶೀಲ್ದಾರ್ ರಾಮೇಗೌಡರ ನಿಗೂಢ ಸಾವು ಸಂಭವಿಸುವುದಕ್ಕೂ ಒಂದೇ ಆಗಿತ್ತು, ಕೊಲೆಯಾದ(!) ರಾಮೇಗೌಡರ ಜಾಗಕ್ಕೆ ತಹಶೀಲ್ದಾರ್ ಆಗಿ ಕೆ.ವಿ. ವೆಂಕಟೇಶಯ್ಯ ಎಂಬ ಮತ್ತೊಬ್ಬ ನೆಲಗಳ್ಳನ ಪ್ರವೇಶವಾಗಿತ್ತು, ಇಂಥ ಅನುಕೂಲಕರ ಸ್ಥಿತಿ ಕಂಡೇ ಬೆಂಗಳೂರು ನಗರ ಬಿಜೆಪಿಯ ಇಂದಿರಾ ಪದ್ಮನಾಭ ಮತ್ತು ಇತರೆ 74 ಮಂದಿ ಬಿಜೆಪಿ ಕಾರ್ಯಕರ್ತರು ತಾವು ಕನಕಪುರ ರಸ್ತೆಯ ಕಗ್ಗಲಿಪುರದ ಸ.ನಂ. 46 ರಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದೇವೆಂದೂ, ಈ ಪೈಕಿ ನೂರಕ್ಕೂ ಅಧಿಕ ಎಕರೆ ಸರ್ಕಾರಿ ಭೂಮಿಯನ್ನು ತಮಗೇ ಮಂಜೂರು ಮಾಡಬೇಕೆಂದೂ ಅರ್ಜಿ ಹಾಕುತ್ತಾರೆ.



ರವಿಶಂಕರ್ ಆಶ್ರಮವಿರುವ ಬಿ.ಎಂ. ಕಾವಲ್ ಭೂಮಿ

ಆ ಹೊತ್ತಿಗಾಗಲೇ ಬೆಂ.ದ. ತಾಲ್ಲೂಕಿನ ಕನಕಪುರ ಮತ್ತು ಮೈಸೂರು ರಸ್ತೆಗಳ ನಡುವಿನ ಕಗ್ಗಲಿಪುರ ಮತ್ತು ಬಿ.ಎಂ. ಕಾವಲು ಗ್ರಾಮಗಳ ಮಧ್ಯೆ ಸರಿಸುಮಾರು ಮೂರೂವರೆ ಸಾವಿರ ಎಕರೆಗಳಷ್ಟು ಸರ್ಕಾರಿ ಭೂಮಿಯಿತ್ತು, ಬೆಂಗಳೂರಿನ ಬೆಳವಣಿಗೆಗೆ ಪೂರಕವಾಗಿ ಅದನ್ನು ಯಥೇಚ್ಛವಾಗಿ ಬಳಸಬಹುದಿತ್ತು. ಯಾವತ್ತು ಸಿಟಿ ಬಿಜೆಪಿ ನಾಯಕಿ ಇಂದಿರಾ ಪದ್ಮನಾಭ ಮತ್ತು ಇತರೇ 74 ಮಂದಿ ಕಗ್ಗಲಿಪುರ ಭೂಮಿಗೆ ಕಣ್ಣಿಟ್ಟರೋ ಉಪವಿಭಾಗಾಧಿಕಾರಿ ರಾಮಚಂದ್ರಮೂರ್ತಿ ಸ್ಪಷ್ಟವಾಗೇ ಇದು ಬೆಂಗಳೂರು ಪರೀದಿಯಿಂದ 14 ಕಿ.ಮೀ. ದೂರಕ್ಕಿದೆ. ಆದ್ದರಿಂದ ತಿರಸ್ಕರಿಸಲಾಗಿದೆಯೆಂದು ಶರ ಬರೆದುಬಿಟ್ಟ.



ದೇವಿಕಾರಾಣಿ ಎಸ್ಟೇಟ್

ಆದರೆ ತಾಲ್ಲೂಕು ಪಂಚಾಯ್ತಿ ಸದಸ್ಯನಾಗಿದ್ದ ಅಶೋಕ್ ಶಿಷ್ಯ ಮತ್ತು ಬಿಜೆಪಿ ರೌಡಿ ಜವರಯ್ಯ ಮತ್ತು ಶಶಿಕುಮಾರ್ ಪಟಾಲಂ ತನ್ನ ಹಠ ಬಡಲಿಲ್ಲ, ಅಶೋಕ್ ಇನ್ಸ್‌ಪೆಕ್ಷನ್ ನೆಪದಲ್ಲಿ ರಾಮಚಂದ್ರಮೂರ್ತಿಯನ್ನು ಉಪಾಯವಾಗಿ ತಮ್ಮ ಜೊತೆ ಕಗ್ಗಲಿಪುರಕ್ಕೆ ಕರೆತಂದರೆ, ಅಲ್ಲಿ ಬಿಜೆಪಿ ಗ್ಯಾಂಗ್ ಅವರನ್ನು ಘೇರಾವ್ ಮಾಡುತ್ತದೆ. ಉಪವಿಭಾಗಾಧಿಕಾರಿಯ ಮೇಲೆ ಹಲ್ಲೆ ನಡೆಸಿದ ಬಿಜೆಪಿ ಹಿಂದು ಆತನನ್ನು ಮಣಿಸುವಲ್ಲಿ ಯಶಸ್ವಿಯಾಗುತ್ತದೆ. ಇಷ್ಟಾಗ್ಯೂ ನಿಯಮಾನುಸಾರ ಕ್ರಮ ಕೈಗೊಳ್ಳಿ ಎಂದು ಷರಾ ಬರೆದು ಅದನ್ನು ತಹಶೀಲ್ದಾರ್ ವೆಂಕಟೇಶಯ್ಯನಿಗೆ ರಾಮಚಂದ್ರಮೂರ್ತಿ ಹೊತ್ತು ಹಾಕುತ್ತಾರೆ.

ಅಶೋಕ್‌ಗೂ ಇಷ್ಟೇ ಬೇಕಿತ್ತೇನೊ. ಈ ಬಾರಿ ಕಗ್ಗಲಿಪುರಕ್ಕೂ ಬೆಂಗಳೂರಿಗೂ ಇರುವ ದೂರವನ್ನು ವಿಸ್ತರಿಸಬೇಕಲ್ಲ ಅದಕ್ಕೆಂದು ಜಿಲ್ಲಾ ಪಂಚಾಯ್ತಿಯ ತಾಂತ್ರಿಕ ವಿಭಾಗದ ಇಂಜಿನಿಯರ್ ಒಬ್ಬನನ್ನೇ ಬಿಜೆಪಿ ಗ್ಯಾಂಗ್ ಬುಟ್ಟಿಗೆ ಹಾಕಿಕೊಳ್ಳುತ್ತದೆ. ನಿಯಮಾನುಸಾರ ಕನಕಪುರ ರಸ್ತೆಯ ಬನಶಂಕರಿ ದೇವಸ್ಥಾನದಿಂದ ದೂರ ಅಳತೆ ಮಾಡುವ ಬದಲು ಈ ಬಾರಿ ಮೈಸೂರು ರಸ್ತೆಯ ಕೆಂಗೇರಿಯನ್ನು ಬೆಂಗಳೂರು ಸರಹದ್ದನ್ನಾಗಿ ಆಯ್ಕೆಮಾಡಿಕೊಳ್ಳಲಾಗುತ್ತದೆ! (ಸದ್ಯ ಯಲಹಂಕದಿಂದ ಅಳೆಯಲಿಲ್ಲವಲ್ಲ!)

ಇದರರ್ಥ ತಮ್ಮ ಅನುಕೂಲಕ್ಕೆ ತಕ್ಕಂಥ ಅಳತೆ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳುವುದು!


ಆ ಪ್ರಕಾರ ಪಾಲಿಕೆ ಸರಹದ್ದಿನಿಂದ 14 ಕಿ.ಮೀ. ಇದ್ದ ಕಗ್ಗಲಿಪುರ ಈ ಬಾರಿ 19 ಕಿ.ಮೀ. ಎಂದಾಗುತ್ತದೆ! ಅದರ ಅಕ್ಕಪಕ್ಕದ ಗ್ರಾಮಗಳಾದ ಚನ್ನಕುರ್ಚಿ, ಬಿ.ಎಂ. ಕಾವಲು, ಗೋಣಿಪುರ, ಉತ್ತರಿ ಇತ್ಯಾದಿಗಳೆಲ್ಲ 18 ಕಿ.ಮೀ. ಒಳಗೆ ಇದ್ದಾಗ್ಯೂ ಅನುಕೂಲಕ್ಕೆ ತಕ್ಕಂಥ ಅಳತೆ ಮಾಡಿದ್ದರಿಂದಾಗಿ ಇನ್ನಷ್ಟು ದೂರದಲ್ಲಿದ್ದಂತೆ ನಮೂದಾಗುತ್ತವೆ. ಅಲ್ಲಿಗೆ ಈ ಸುತ್ತಮುತ್ತಲ ಮೂರೂವರೆ ಸಾವಿರ ಎಕರೆಗಳಷ್ಟು ಸರ್ಕಾರಿ ಜಮೀನಿನ ಭೂಕಬಳಿಕೆಯ ತಿಜೋರಿಯೇ ತೆರೆದಂತಾಗಿ ಅದೇ ಹೊತ್ತಿಗೆ ಸದ್ಯ ಆರೋಗ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಯಾಗಿರುವ ರಾಮಚಂದ್ರರೇ ವೆಂಕಟೇಶಯ್ಯನ ಜಾಗಕ್ಕೆ ತಹಶೀಲ್ದಾರ್ ಆಗಿ ನೇಮಕಗೊಳ್ಳುತ್ತಾರೆ.

ಹೀಗೆ ಭೂಕಬಳಿಕೆಗೆ ಪೂರಕವಾದ ಅನುಕೂಲಗಳನ್ನೆಲ್ಲ ಕಲ್ಪಿಸಿಕೊಂಡ ಬಿಜೆಪಿ ಗ್ಯಾಂಗ್ ಆನಂತರ ಇಡೀ ಮೂರೂವರೆ ಸಾವಿರ ಎಕರೆ ಸರ್ಕಾರಿ ಭೂಮಿಯನ್ನು ಒಂದೊಂದಾಗಿ ಮುಕ್ಕುತ್ತದೆ. ಹಂಪಾಪುರದ ಸ.ನಂ. 19 ರಲ್ಲಿ ಒಂದೂವರೆ ಕೋಟಿ ಮೌಲ್ಯದ ಒಂದೆಕರೆ ಜಮೀನು ಕೆ. ಗೊಲ್ಲಹಳ್ಳಿ ಬಿಜೆಪಿ ನಾಯಕ ಚನ್ನವೆಂಕಟಪ್ಪನಿಗೆ ಮಂಜೂರಾದರೆ, ಬಿಟಿಎಂ ಲೇಔಟಿನ ಬಿಜೆಪಿ ಲೀಡರ್ ಕೆ. ಮುತ್ತಯ್ಯ ಬಿನ್ ಕೆಂಪಣ್ಣನಿಗೆ ಚನ್ನ ಕುರ್ಚಿಯಲ್ಲಿ ಅಶೋಕ್ 3 ಎಕರೆ ಮಂಜೂರು ಮಾಡುತ್ತಾರೆ. ಸೂಲಿಕೆರೆಯ ಸ.ನಂ. 8 ರಲ್ಲಿ ಎರಡೆಕರೆ ಜಮೀನು ಹೊಡೆದ ಆರ್. ರೇಣುಕಪ್ಪನೂ ಮತ್ತೊಬ್ಬ ಬಿಜೆಪಿ ನಾಯಕನೆ. ಇದೇ ಸೂಲಿಕೆರೆಯಲ್ಲಿ ಗೊಲ್ಲಹಳ್ಳಿಯ ಇನ್ನೊಬ್ಬ ಬಿಜೆಪಿ ಲೀಡರ್ ಕರಿ ರೇಣುಕಪ್ಪನಿಗೂ ಅಶೋಕ್ 3 ಎಕರೆ ಮಂಜೂರು ಮಾಡುತ್ತಾರೆ.

ಈತನಿಗಾಗಲೇ ಹತ್ತೆಕರೆ ಜಮೀನಿದೆ. ಬಡವನಲ್ಲ, ಬಗರ್‌ಹುಕುಂ ಸಾಗುವಳಿದಾರನೂ ಅಲ್ಲ. ಹೀಗಿದ್ದೂ ರೇಣುಕಪ್ಪನಿಗೆ ಯಾವ ಕಾಯ್ದೆಯಡಿ ಅಶೋಕ್ ಜಮೀನು ಕೊಟ್ಟರು?

ಇದೆಲ್ಲಕ್ಕೂ ಮಿಗಿಲಾದ ಲ್ಯಾಂಡ್ ರಾಬರಿಗೆ ಕಾರಣನಾದವನು ಎಂ.ಸಿ. ರಾಜಣ್ಣ. ಸದ್ಯ ಶ್ರೀನಿವಾಸ್‌ನಗರದ ಮಾಜಿ ಕೌನ್ಸಿಲರ್ ಡಿ. ವೆಂಕಟೇಶ್‌ಮೂರ್ತಿಗೆ ಗಾಡ್‌ಫಾದರ್ ಆಗಿರುವ ಈತ ಹಿಂದೊಮ್ಮೆ ಉತ್ತರಹಳ್ಳಿಗೆ ಶಾಸಕರಾಗಿದ್ದ ಶ್ರೀನಿವಾಸ್‌ಗೆ ಪಿಎ ಆಗಿದ್ದ. ಶ್ರೀನಿವಾಸ್ ಜೆಡಿಎಸ್‌ಗೆ ನೆಗೆದಿದ್ದೇ ತಡ ರಾಜಣ್ಣ ತನ್ನ ನಿಷ್ಠೆಯನ್ನು ಅಶೋಕ್‌ಗೆ ಬದಲಾಯಿಸಿದ. ಪ್ರತಿಫಲವಾಗಿ ಬಿ.ಎಂ. ಕಾವಲು ಸ.ನಂ. 35 ರಲ್ಲಿ ತನ್ನ ಅತ್ತೆಯ ಹೆಸರಿಗೆ ಮೂರೆಕರೆ ಮತ್ತು ಮಗಳ ಹೆಸರಿಗೆ ಇನ್ನೆರಡೆಕರೆ ಬಗರ್‌ಹುಕುಂ ಭೂಮಿ ರಾಜಣ್ಣನ ಪಾಲಾಗಿದೆ.

ಕ್ಲಾಸ್ ಒನ್ ಕಂಟ್ರಾಕ್ಟರ್ ಜೈರಾಮಯ್ಯ, ಬೂದಿಹಾಳ್ಳದ ಪುಟ್ಟಸ್ವಾಮಿ ಹೆಂಡತಿ ಚಂದ್ರಮೌಳಿ, ಬಿಜೆಪಿ ಕ್ರಿಮಿ ಕೊಳಾಯಿ ಸೀನ, ಜೆ.ಪಿ. ನಗರದ ಸಿದ್ದಲಿಂಗೇಶ್ವರ ಟೆಂಟಿನ ಭೂಗಳ್ಳ ಶಿವಣ್ಣ, ನಾಯಂಡಹಳ್ಳಿಯ ಬಿಲ್ಡರ್ ಎಂ. ರಾಮು, ಕೋರಮಂಗಲದ ಬಿಜೆಪಿ ರಾಣಿ ವಿಜಯಮ್ಮ, ಈಕೆಯ ಮಗ ಪ್ರವೀಣ, ದೊಡ್ಡಕಲ್ಲಸಂದ್ರದ ನೆಲಗಳ್ಳ ಮತ್ತು ಮೈಕೋ ನೌಕರ ಮೂಡಲಗಿರಿಗೌಡ, ಈತನ ಮಗ ದಯಾನಂದ, ಬನಶಂಕರಿ ಬಿಜೆಪಿ ಲೀಡರ್ ನಾಗರಸಯ್ಯ ಇವರೆಲ್ಲ ಯಾವತ್ತೂ ಹೊಲ ಉತ್ತವರಲ್ಲ, ಬಡವರಲ್ಲ, ಹೀಗಿದ್ದೂ ಅವರಿಗೆ ಸರ್ಕಾರಿ ಭೂಮಿ ಮಂಜೂರಾಗುತ್ತದೆಯೆಂದರೆ, ಅದೇ ಜಮೀನನ್ನು ಬಿಲ್ಡರ್‌ಗಳಿಗೆ ಮಾರಿಕೊಳ್ಳುತ್ತಾರೆಂದರೆ; ಇದು ಹಗಲು ದರೋಡೆಯಲ್ಲದೇ ಮತ್ತೇನು? ಅಧಿಕಾರದಲ್ಲಿರಲು ಆರೋಗ್ಯ ಮಂತ್ರಿಗೆ ಯಾವ ನೈತಿಕತೆಯುಂಟು?




ಆಗರ ಗ್ರಾಮ

ಇಷ್ಟಾಗ್ಯೂ ವಿರೋಧಿ ಕಾಂಗ್ರೆಸ್ ಏಕೆ ಬಾಯಿ ಮುಚ್ಚಿ ಕೂತಿದೆ?

18 ಕಿ.ಮೀ. ವ್ಯಾಪ್ತಿಗೆ ಬರುವ ಈ ಯಾವ ಜಮೀನೂ ಮಂಜೂರು ಯೋಗ್ಯವಲ್ಲ. ಹಾಗೊಮ್ಮೆ ಮಂಜೂರಾದರೂ ಅದಕ್ಕೆ ದಲಿತರಿಗಿಂತ ಬೇರೆ ಬೇಕಿಲ್ಲ. ಮುಖ್ಯಮಂತ್ರಿ ಕುಮಾರಸ್ವಾಮಿಗಾಗಲಿ, ದೇವೇಗೌಡರಿಗಾಗಲಿ ಮಾನವಿನ್ನೂ ಉಳಿದಿದ್ದರೆ ಈ ಕೂಡಲೇ ಇದನ್ನು ಸಿಬಿಐ ತನಿಖೆಗೆ ಒಪ್ಪಿಸಲಿ. ಈ ನಿಟ್ಟಿನಲ್ಲಿ ದಲಿತ ಸಮೂಹ ಬೀದಿಗಿಳಿಯಲಿ.

ಇದು ಪತ್ರಿಕೆಯ ಕಳಕಳಿಯ ಮನವಿ.

–ರಾ. ಸೋಮನಾಥ್



4.8.2007

ಆಗರ ಗ್ರಾಮವು ಬೆಂಗಳೂರಿನಿಂದ 14 ಕಿ.ಮೀ. ಎಂದು ಇಂಜಿನಿಯರ್ ನೀಡಿದ ವರದಿ

ಪಟ್ಟಣಗೆರೆ ಬಾಲಕೃಷ್ಣನ ಪತ್ನಿಯ ಮಹಾತ್ಮೆ!



ಆರೋಗ್ಯ ಮಂತ್ರಿ ಅಶೋಕ್ ಬಂಟ ಪಟ್ಟಣಗೆರೆ ಸಿಎಂಸಿಯ ಮಾಜಿ ಅಧ್ಯಕ್ಷ ಬಾಲಕೃಷ್ಣನ ಮಗ ಕಾರ್ತಿಕ್ ಎಂಬ ಬಾಲಕನನ್ನು ನಿರ್ಗತಿಕ ಕೃಷಿ ಕೂಲಿಯನ್ನಾಗಿಸಿ ಸೋಮನಹಳ್ಳಿ ಸ.ನಂ. 242 ರಲ್ಲಿ 4 ಎಕರೆ ಸರ್ಕಾರಿ ಭೂಮಿ ಮಂಜೂರು ಮಾಡಿದ ಕತೆ ಗೊತ್ತಲ್ಲವೆ?

ಇದೇ ಸಾಲಿಗೆ ಸೇರುವ ಮತ್ತೊಂದು ಅಚ್ಚರಿಯಿದೆ. ಅದು ಇದೇ ಬಾಲಕೃಷ್ಣನ ಪತ್ನಿ ಮತ್ತು ಪಟ್ಟಣಗೆರೆ ಸಿಎಂಸಿ ಕೌನ್ಸಿಲರ್ ಸುಗಣಾ ಬಾಲಕೃಷ್ಣರಿಗೆಂದು ಮತ್ತೆ ಸೋಮನಹಳ್ಳಿಯ ಸ.ನಂ. 121 ರಲ್ಲಿ ಹೆಚ್ಚುವರಿ 5.10 ಎಕರೆ ಸರ್ಕಾರಿ ಜಮೀನನ್ನು ಅಶೋಕ್ ಧಾರೆಯೆರೆದಿದ್ದಾರೆ.

ಇನ್ನೂ ವಿಚಿತ್ರವೆಂದರೆ ಇದೇ ಸುಗುಣಾ ತಾನು ಸೋಮನಹಳ್ಳಿ ಸ.ನಂ. 113 ರಲ್ಲೂ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡಿದ್ದೆ, ನಾನೇ ಹೋಗಿ ಹೊಲ ಉಳುತ್ತಿದ್ದೆ ಎಂದು ಮತ್ತೊಂದು ಅರ್ಜಿ ಹಾಕುತ್ತಾರೆ. ಮಹಾತಾಯಿ ಸುಗುಣಾ ಅದ್ಯಾವತ್ತು ಕೌನ್ಸಿಲರ್ ಆಗಿದ್ದು? ಅದೆಂದು ಹೊಲ ಉತ್ತಿದ್ದು? ಮಗನಿಗೆ ನಾಲ್ಕೆಕರೆ, ತಾಯಿಗೆ ಮತ್ತೆ 5.10 ಎಕರೆ ಬಗರ್‌ಹುಕುಂ ಭೂಮಿ ಮಂಜೂರು ಮಾಡಲು ಹೇಗೆ ಸಾಧ್ಯ?


ಹಗಲು ದರೋಡೆಗೆ ಇದಕ್ಕಿಂತ ಸಾಕ್ಷ್ಯ ಬೇಕೆ?

ಗ್ರಹವನ್ನೇ ನಾಶ ಮಾಡುತ್ತಾ ಅದರ ಮೇಲೊಂದು ಸುಂದರ ಗೃಹವನ್ನು ನಿರ್ಮಿಸಿದರೆ ಏನು ಪ್ರಯೋಜನ? -ಹೆನ್ರಿ ಡೇವಿಡ್ ಥೋರೋ

ಲಿಂಗಾಯತರ ಲೀಡ್ರು ಖಂಡ್ರೆಯ ಕಥೆ


ಅಖಿಲ ಭಾರತ ವೀರಶೈವ ಮಹಾಸಭಾದ ಹಾಲಿ ಅಧ್ಯಕ್ಷ ಭೀಮಣ್ಣ ಖಂಡ್ರೆಯ ಹೆಸರು ಕೇಳುತ್ತಿದ್ದಂತೆ ಕರ್ನಾಟಕದ ಕೆಲವು ತಲೆಕೆಟ್ಟ ಲಿಂಗಾಯತರು ಪುಳಕಿತಗೊಳ್ಳುತ್ತಾರೆ. ಲಿಂಗಾಯತರ ಪರವಾಗಿ ಮಾತನಾಡಬಲ್ಲ ಗಂಡುಗಲಿ ಇದ್ದಾನಲ್ಲ ಎಂಬುದು ಅವರ ತಿಳಿಗೇಡಿ ಅಭಿಪ್ರಾಯ. ಎಚ್.ಎಸ್. ಶಿವಪ್ರಕಾಶರ 'ಮಹಾಚೈತ್ರ' ಎಂಬ ನಾಟಕ ಕೃತಿಯನ್ನು ಸರ್ಕಾರ ರದ್ದುಪಡಿಸುವಲ್ಲಿ ಖಂಡ್ರೆಯ ಕುತಂತ್ರ ದೊಡ್ಡದು.

ದೇವರಾಜ್ ಅರಸು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಹಾವನೂರ ವರದಿಯ ಪ್ರತಿಯನ್ನು (ಈ ವರದಿ ಜಾರಿಗೆ ಬಂದರೆ ಲಿಂಗಾಯತರಿಗೆ ಅನಾನುಕೂಲವಾಗುತ್ತದೆ ಎಂದು ಹೇಳಿ) ವಿಧಾನಸಭೆಯಲ್ಲಿಯೇ ಸುಟ್ಟು ಹಾಕಿ ಬಹುದೊಡ್ಡ ಗದ್ದಲವೆಬ್ಬಿಸಿದ್ದ ಈ ಖಂಡ್ರೆ. ಇಷ್ಟಲ್ಲದೆ ಮುಖ್ಯಮಂತ್ರಿ ದೇವರಾಜ್ ಅರಸರ ಅನುಪಸ್ಥಿತಿಯಲ್ಲಿ ಅವರ ಖುರ್ಚಿಗೆ ಹೋಗಿ ಕುಳಿತು ದಾಂಧಲೆ ಎಬ್ಬಿಸಿದ್ದೂ ಇದೆ. ಪಿ.ವಿ. ನಾರಾಯಣರ 'ಧರ್ಮಕಾರಣ' ಎನ್ನುವ ಕೃತಿ ಬಸವಣ್ಣನವರನ್ನು ಕೀಳಾಗಿ ಕಂಡಿದೆ ಎಂದು ಆರೋಪಿಸಿದ ಖಂಡ್ರೆ 'ಇಂಥ ನಾರಾಯಣನನ್ನು ವೀರಶೈವರಲ್ಲಿಯೇ ಗಣಾಚಾರಿಗಳ ಗುಂಪು ತಿಥಿ ಮಾಡಬೇಕು' ಎಂಬ ಪ್ರಚೋದಕ ಮಾತುಗಳನ್ನೂ ಆಡಿದ್ದ.



ಆದೇರೀತಿಯಾಗಿ ಲೇಖಕ ಡಾ. ಬಂಜಗೆರೆ ಜಯಪ್ರಕಾಶರ 'ಆನುದೇವಾ ಹೊರಗಣವನು' ಎಂಬ ಕೃತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವಲ್ಲಿ ಖಂಡ್ರೆಯ ಪಾತ್ರವೂ ಇತ್ತು. ರಾಜಕೀಯದಲ್ಲಿ ನಡೆಯದ ನಾಣ್ಯದಂತಾಗಿರುವ ಈತ ಇದ್ದಬದ್ದ ನಿರುದ್ಯೋಗಿ ಲಿಂಗಾಯತರನ್ನು ಬೆನ್ನಿಗೆ ಕಟ್ಟಿಕೊಂಡು ತನ್ನ ರಾಜಕೀಯ ಅಸ್ತಿತ್ವಕ್ಕಾಗಿ ಒಂದೇಸಮ ಬಡಿದಾಡುತ್ತಿದ್ದಾನೆ. ಆದರೆ ಖಂಡ್ರೆಯ ಅಸಲಿಯತ್ತು ಅರಿಯಬೇಕೆಂದರೆ ಅವರ ಮತಕ್ಷೇತ್ರವಾದ ಭಾಲ್ಕಿಗೆ ಒಮ್ಮೆ ಹೋಗಿ ಬರಲೇಬೇಕು! ಈತನ ಧನದಾಹಕ್ಕೆ ಲಿಂ. ಚನ್ನಬಸವ ಪಟ್ಟದೇವರನ್ನೇ ನುಂಗಿ ಹಾಕಿದ ಸಂಗತಿ ಬಯಲಾಗುತ್ತದೆ. ಲಿಂಗಾಯತರ ಹೆಸರಿನ ಮೇಲೆಯೇ ರಾಜಕೀಯ ನಡೆಸಿದ ಖಂಡ್ರೆಯ ಬದುಕಿನ ಪುಟಗಳನ್ನು ತಿರುವುತ್ತಿರುವಂತೆ ದಿಗ್ಭ್ರಮೆ ಉಂಟಾಗುತ್ತದೆ.

ಕೇವಲ 65 ವರ್ಷಗಳ ಹಿಂದೆ ಭೀಮಣ್ಣ ಖಂಡ್ರೆಯ ಅಪ್ಪ ಶಿವಲಿಂಗಪ್ಪ ಖಂಡ್ರೆ ಭಾಲ್ಕಿಯಲ್ಲಿ ಅನಾಥವಾಗಿದ್ದ. ವಾಸಿಸುವುದಕ್ಕೆ ಹೇಳಿಕೊಳ್ಳುವಂಥ ಮನೆಯೂ ಇರಲಿಲ್ಲ. ನಗ-ನಾಣ್ಯ-ಭೂಮಿ-ಸೀಮೆಯ ಮಾತಂತೂ ದೂರ! ಯಾವಾಗ ಶಿವಲಿಂಗಪ್ಪ ಖಂಡ್ರೆ ರಾಮಕಾಶಿರಾಯ ದೇಶಮುಖರ ಮನೆಯಲ್ಲಿ ಗುಮಾಸ್ತನಾಗಿ ಕೆಲಸಕ್ಕೆ ಸೇರಿಕೊಂಡನೋ ಆಗ ಆತನ ಲಕ್ಕೇ ಖುಲಾಯಿಸಿತು. ಈ ದೇಶಮುಖರಾದರೂ ಸಣ್ಣ ನದರಿನವರಾಗಿರಲಿಲ್ಲ. ಈತ ಹೈದ್ರಾಬಾದ್ ನಿಜಾಮನಿಂದ ನಿಯುಕ್ತಿಗೊಂಡ ಅಧಿಕಾರಿ. ಜತೆಗೆ ಸಾಕಷ್ಟು ಭೂಮಿಯುಳ್ಳ ವತನದಾರ ಬೇರೆ ಆಗಿದ್ದರು. ಹಾಗಾಗಿ 'ಹೂವಿನ ಜತೆ ನಾರೂ ಸ್ವರ್ಗಕ್ಕೆ ಸೇರಿತು' ಎಂಬಂತೆ ಶಿವಲಿಂಗಪ್ಪ ಖಂಡ್ರೆಗೆ ಹಾಗೂ ಆತನ ಮನೆತನಕ್ಕೆ ಎಲ್ಲಿಲ್ಲದ ಗೌರವಗಳು ಸಲ್ಲತೊಡಗಿದವು.



ಚನ್ನಬಸವ ಪಟ್ಟದೇವರು

ರಾಮಕಾಶಿರಾಯ ದೇಶಮುಖರೇ ಕಾಳಜಿ ವಹಿಸಿ ಓದು ವಿದ್ಯಾಭ್ಯಾಸ ಮಾಡಿಸಿದ್ದ ಕಮಲಾನಗರದ ಚನ್ನಬಸವನನ್ನು ತಮ್ಮೂರ ಹಿರೇಮಠಕ್ಕೆ ತಂದು ಪಟ್ಟಾಭಿಷೇಕ ಮಾಡಿಸಿದ್ದರು. ಅಲ್ಲದೆ ಹಿರೇಮಠಕ್ಕೆ ಸಾಕಷ್ಟು ಭೂಮಿಯನ್ನೂ ಊರಿನ ದೈವದವರಿಂದ ಕೊಡಿಸಿದ್ದರು. ಚನ್ನಬಸವ ಪಟ್ಟದೇವರಾದರೂ ಅಷ್ಟೇ; ಅವರು ಬದುಕಿನುದ್ದಕ್ಕೂ ಮಠವನ್ನು ತಮ್ಮ ವೈಯಕ್ತಿಕ ತೀಟೆಗಳಿಗೆ ಬಳಸಿಕೊಳ್ಳದೆ, ಸಮಾಜದ ಉದ್ಧಾರಕ್ಕಾಗಿ ಹಿರೇಮಠವನ್ನು ಮುಖ್ಯ ಕೇಂದ್ರವಾಗಿಸಿಕೊಂಡರು. ಕರ್ನಾಟಕ ಏಕೀಕರಣ ಚಳವಳಿ ಸಂದರ್ಭದಲ್ಲಿ ಚನ್ನಬಸವ ಪಟ್ಟದೇವರು 'ರೈಲು ತಡೆ'ಯಂಥ ಉಗ್ರ ಹೋರಾಟಕ್ಕೂ ಇಳಿದರು. ಇದು ಆಗ ನಿಜಾಮನ ಆಳ್ವಿಕೆಗೆ ಒಳಪಟ್ಟ ಪ್ರದೇಶವಾದ್ದರಿಂದ ಭಾಲ್ಕಿಯಲ್ಲಿ ಕನ್ನಡ ಶಾಲೆಗಳೇ ಇರಲಿಲ್ಲ. ಎಲ್ಲೆಲ್ಲೂ ಉರ್ದು ಶಾಲೆಗಳೇ ವಿಜೃಂಭಿಸುತ್ತಿದ್ದವು. ನಮ್ಮ ಜನಗಳಿಗೆ ಕನ್ನಡ ಭಾಷೆಯ ಪರಿಚಯವಾಗದೇ ಹೋದರೆ ವಚನ ಸಾಹಿತ್ಯದಂಥ ಅಮೂಲ್ಯ ನಿಧಿ ಅವರ ಕೈಗೆಟುಕಲಾರದು. ಆದ್ದರಿಂದ ಹೇಗಾದರೂ ಸೈ ನಮ್ಮ ಜನಗಳಿಗೆ ಕನ್ನಡ ಕಲಿಸಬೇಕೆಂಬ ಉತ್ಸಾಹದಿಂದ ದೋರಣ (1936ರಲ್ಲಿ) ಬೀದ ಸಂಗಮ (1954ರಲ್ಲಿ) ಮುಂತಾದ ಕಡೆ ಕನ್ನಡ ಶಾಲೆಗಳನ್ನು ತೆರೆದರು. ಆದರೆ ಈ ಸಂಗತಿ ಆಗ ಘಂಟಾಘೋಷವಾಗಿ ಸಾರುವಂತಿರಲಿಲ್ಲ. ಹೀಗಾಗಿ ಶಾಲಾ ಕಟ್ಟಡದ ಹೊರಗಡೆ ಉರ್ದು ಬೋರ್ಡ್ ಹಾಕಿದ್ದರೂ ಒಳಗಡೆ ಕನ್ನಡವನ್ನೇ ಕಲಿಸುತ್ತಿದ್ದರು.

ಈ ಸಂದರ್ಭದಲ್ಲಿ ಚನ್ನಬಸವ ಪಟ್ಟದೇವರ ಹತ್ತಿರಕ್ಕೆ ಬಂದ ಯುವಕರಲ್ಲಿ ಶಿವಲಿಂಗಪ್ಪ ಖಂಡ್ರೆಯ ಮಗ ಭೀಮಣ್ಣ ಖಂಡ್ರೆ ಒಬ್ಬ. ಈ ಖಂಡ್ರೆಯನ್ನು ಪಟ್ಟದೇವರು ಅದ್ಯಾಕೋ ಜಾಸ್ತಿ ಹಚ್ಚಿಕೊಂಡಿದ್ದರು. ತಮ್ಮ ಏನೆಲ್ಲ ಸಮಾಜಮುಖಿ ಕಾರ್ಯಗಳಿಗೆ ಯುವಕ ಭೀಮಣ್ಣನನ್ನೇ ನೆಚ್ಚತೊಡಗಿದರು. ಆಗಲೇ 'ಶಾಂತಿ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ' ಎಂಬ ಟ್ರಸ್ಟ್‌ವೊಂದನ್ನು ಮಾಡಿ 1956 ರಲ್ಲಿ ಕಮಲಾನಗರದಲ್ಲಿ ಹೈಸ್ಕೂಲ್ ನಡೆಸಬೇಕೆಂದರು. ಆಗ ಸರ್ಕಾರದವರು ಟ್ರಸ್ಟಿನವರಿಗೆ 25 ಸಾವಿರ ರೂ. ಡಿಪಾಸಿಟ್ ಕೇಳಿದ್ದರು. ಇಷ್ಟೊಂದು ಹಣ ಪಟ್ಟದೇವರಲ್ಲಿ ಇರಲಿಲ್ಲ. ಆಗವರು ಊರೂರು ತಿರುಗಿ ಭಿಕ್ಷೆ ಬೇಡಿ ಹಣ ಸಂಗ್ರಹಿಸಿದರು. 25 ಸಾವಿರ ಮಾತ್ರ ಕೂಡಿಸಬೇಕೆಂದು ಹೊರಟ ಚನ್ನಬಸವರಿಗೆ ಆಗ 75 ಸಾವಿರ ಹಣ ಸಂಗ್ರಹವಾಯಿತು. ಆ ಸಂದರ್ಭದಲ್ಲಿ ಚನ್ನಬಸವ ಪಟ್ಟದೇವರು 25 ಸಾವಿರ ಮಾತ್ರ ತಮ್ಮಲ್ಲಿಟ್ಟುಕೊಂಡು ಉಳಿದ 50 ಸಾವಿರವನ್ನು ಖಂಡ್ರೆ ಕೈಗೆ ಕೊಟ್ಟು ಸಮಾಜದ ಜನರಿಗೆ ಏನಾದರೂ ಮಾಡು ಎಂದರು. ಆಗ ಭೀಮಣ್ಣ ಖಂಡ್ರೆಗೆ ಒಂದು ವಿಚಾರ ಹೊಳೆದು, ಹೇಗೋ ಗುರುಗಳೇ ಮಾಡಿದ 'ಶಾಂತಿವರ್ಧಕ ಶಿಕ್ಷಣ ಸಂಸ್ಥೆ' ಇದೆ. ಅದರ ಅಡಿಯಲ್ಲಿಯೇ ಕಾಲೇಜುಗಳನ್ನು ಆರಂಭಿಸಿದರೆ ಹೇಗೆ? ಈ ವಿಚಾರ ಚನ್ನಬಸವರಲ್ಲಿ ಹೇಳಿದಾಗ ಅವರಿಗೂ ಇದು ಸರಿ ಅನ್ನಿಸಿತು.



ಭಾಲ್ಕಿಯ ಇಂಜಿನಿಯರಿಂಗ್ ಕಾಲೇಜು

ಆದರೆ ಕಾಲೇಜು ಆರಂಭಿಸಲು ಸರ್ಕಾರದಿಂದ ಪರ್ಮಿಶನ್ ತೆಗೆದುಕೊಳ್ಳಬೇಕಾದರೆ ಒಂದು ಲಕ್ಷ ರೂಪಾಯಿ ಮತ್ತು ಅಷ್ಟೇ ಮೌಲ್ಯದ ಭೂಮಿಯನ್ನು ಒತ್ತೆ ಇಡಬೇಕಾಗಿತ್ತು. ಆಗ ಪಟ್ಟದೇವರೇ ಮುಂದಾಗಿ ನಿಂತು ತಮ್ಮ ಮಠದ ಆಸ್ತಿಯ 50 ಎಕರೆ ಜಮೀನನ್ನು ಶಿಕ್ಷಣ ಸಂಸ್ಥೆಯ ಹೆಸರಿಗೆ ಬರೆದುಕೊಟ್ಟರು. ಇದರ ಪರಿಣಾಮವೇ ಬೀದರ್‌ನಲ್ಲಿ ಅಕ್ಕ ಮಹಾದೇವಿ ಮಹಿಳಾ ಮಹಾವಿದ್ಯಾಲಯ, ಭಾಲ್ಕಿಯಲ್ಲಿ ಚನ್ನಬಸವೇಶ್ವರ ಕಲಾ ಮತ್ತು ವಿಜ್ಞಾನ ಕಾಲೇಜುಗಳು ತಲೆ ಎತ್ತಿದವು. ಸುಮಾರು 25 ವರ್ಷ ಈ ಶಾಂತಿವರ್ಧಕ ಶಿಕ್ಷಣ ಸಂಸ್ಥೆಗೆ ಏನು ಬೇಕೋ ಅದೆಲ್ಲವನ್ನೂ ಚನ್ನಬಸವ ಪಟ್ಟದೇವರು ಊರೂರು ಅಲೆದು ಕಂತಿ ಭಿಕ್ಷೆ, ಮುಷ್ಠಿ ಫಂಡು ಮುಂತಾದವುಗಳ ಮೂಲಕ ತಂದು ಹಾಕುತ್ತಿದ್ದರು.

ಖಂಡ್ರೆ ಕಬಳಿಸಿದ ಶಾಲಾ-ಕಾಲೇಜುಗಳ ಪಟ್ಟಿ


1. ಅಕ್ಕಮಹಾದೇವಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಬೀದರ್
2. ಚನ್ನಬಸವೇಶ್ವರ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಭಾಲ್ಕಿ
3. ಹರಳಯ್ಯ ಪಾಲಿಟೆಕ್ನಿಕ್ ಕಾಲೇಜು ಭಾಲ್ಕಿ
4. ಐಟಿಐ ಕಾಲೇಜು, ಭಾಲ್ಕಿ
5. ಬಸವೇಶ್ವರ ರೂರಲ್ ಇಂಜಿನಿಯರಿಂಗ್ ಕಾಲೇಜು, ಭಾಲ್ಕಿ

ಚನ್ನಬಸವ ಪಟ್ಟದೇವರಾದರೋ, ತಾವು ತಮ್ಮ ಭಕ್ತಾದಿಗಳಿಂದ ಸಂಗ್ರಹಿಸಿ ತಂದ ಹಣವನ್ನು ಖಂಡ್ರೆಯ ಕೈಗಿಟ್ಟು, ಆ ಕಡೆ ತಿರುಗಿ ನೋಡಿದವರೇ ಅಲ್ಲ, ನಾನೇ ಸಂಸ್ಥೆ ಮಾಡಿದ್ದು, ಶಾಲೆ-ಕಾಲೇಜು ಮಾಡಿದವನು ಎಂಬ 'ಅಹಂ' ಹೊತ್ತುಕೊಂಡು ಅವರೆಂದೂ ತಿರುಗಲಿಲ್ಲ. ಅಷ್ಟೇ ಏಕೆ? ಅವರು ಬದುಕಿರುವವರೆಗೆ ಆಡಳಿತ ಮಂಡಳಿಯ ಯಾವ ಸಭೆಯಲ್ಲೂ ಭಾಗವಹಿಸಲಿಲ್ಲ, ಏನೆಂದೂ ಕೇಳಲಿಲ್ಲ. ಯಾಕೆಂದರೆ ಬಸವಣ್ಣನವರ 'ಮಾಡಿದೆನೆನ್ನದಿರಾಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ' ಎಂಬ ನುಡಿಗಳನ್ನು ನಡೆದು ತೋರಿದವರು.

ಆದರೆ ಭೀಮಣ್ಣ ಖಂಡ್ರೆ ಮಾತ್ರ ಮೊದಲಿನಿಂದಲೂ ಚನ್ನಬಸವ ಪಟ್ಟದೇವರ ಖಾಸಾ ಶಿಷ್ಯ ಎಂದು ತೋರಿಸಿಕೊಳ್ಳುತ್ತ ನುಸಿಯಂತೆ ಅವರನ್ನೇ ಕಡಿಯುತ್ತಾ ಬಂದ. ಇದು ಕೊನೆಯವರೆಗೂ ಪಟ್ಟದ್ದೇವರಿಗೆ ಹಾಗೂ ಅವರ ಅಪಾರ ಶಿಷ್ಯ ವೃಂದದ ಗಮನಕ್ಕೂ ಬರಲಿಲ್ಲ. ಚನ್ನಬಸವ ಪಟ್ಟದೇವರು ಲಿಂಗೈಕ್ಯರಾದ ತರುವಾಯ ಮಾತ್ರ ಶಾಲಾ-ಕಾಲೇಜಿನ ಯಾವ ಬೈಲಾದಲ್ಲೂ ಅವರ ಹೆಸರು ದೆಸೆ ನಮೂದಿಸದೇ ಇರುವ ಸಂಗತಿ ಬಯಲಾಯಿತು. ಆದರೇನು? ಅಷ್ಟೊತ್ತಿಗಾಗಲೇ ಖಂಡ್ರೆ ವಿರುದ್ಧ ಯಾರೂ ಮಾತಾಡದಷ್ಟು ಬಲಿಷ್ಠನಾಗಿ ಬೆಳೆದಿದ್ದ. ಅಪ್ಪಿತಪ್ಪಿ ಯಾರಾದರೂ ಈತನ ಸಮೀಪ ಹೋದರೆ ಅವರೆಲ್ಲ ಇಲ್ಲವಾಗುವ ಭಯದ ವಾತಾವರಣ ಈಗಲೂ ಇದೆ. ಲಿಂಗಾಯತರ ಬಗ್ಗೆ ಪತ್ರಿಕೆಗಳಲ್ಲಿ, ಸದನದಲ್ಲಿ ಹುಸಿ ಕಾಳಜಿ ತೋರುವ ಖಂಡ್ರೆಯ ಅಸಲಿಯತ್ತು ಇದು!

ಭಾಲ್ಕಿ ಎಂಬ ನರಕ

ಹುಮ್ನಾಬಾದ್‌ನಿಂದ 26 ಕಿ.ಮೀ. ಅಂತರದಲ್ಲಿರುವ ಭಾಲ್ಕಿಯಲ್ಲಿ ದೊಡ್ಡದೊಡ್ಡ ಕಾಲೇಜು ಕಟ್ಟಡಗಳನ್ನು ಹೊರತುಪಡಿಸಿದರೆ ಇನ್ನೇನೂ ಸಿಗುವುದಿಲ್ಲ. ಖಂಡ್ರೆಯ 65 ವರ್ಷಗಳ ರಾಜಕೀಯ ಅಕ್ಟೋಪಸ್ ಹಿಡಿತದಲ್ಲಿ ಈ ನಗರ ತತ್ತರಿಸಿಹೋಗಿದೆ. ಇಲ್ಲಿನ ಬಸ್‌ನಿಲ್ದಾಣದ ಹಿಂದಿನ ಹೊಲಸು ನೋಡಿಬಿಟ್ಟರೆ ಸಾಕು, ಭಾಲ್ಕಿ ಎಂಥ ನರಕದ ನಗರ ಎಂಬುದು ಗೊತ್ತಾಗುತ್ತದೆ.



ಈಶ್ವರ್ ಖಂಡ್ರೆ

ಹಿರೇಮಠಕ್ಕೆ ಹೋಗುವ ರಸ್ತೆಯೊಂದನ್ನು ಮಾತ್ರ ನೋಡಿದರೆ ಸಾಕು ಇಡೀ ಪಟ್ಟಣದ ಗಲ್ಲಿಗಳ ಹಣೆಬರಹ ಕಣ್ಮುಂದೆ ಬರುತ್ತದೆ. ಭಾಲ್ಕಿ ಪಟ್ಟಣಕ್ಕೆ ಈ ಹಣೆಬರಹ ಎಂದಮೇಲೆ ಇನ್ನೂ ಆ ಹಳ್ಳಿಗಳ ಗೋಳು ಆ ದೇವರಿಗೇ ಪ್ರೀತಿ! ಇದ್ಯಾವುದರ ಬಗ್ಗೆ ನಾಚಿಕೆಯಿಲ್ಲದೆ ಚುನಾವಣೆಗೊಮ್ಮೆ ಒಂದೆರಡು ಕೋಟಿ ಖರ್ಚು ಮಾಡಿ ಗೆದ್ದನಂತರ ಯಾರಿಗೂ ಹೇಳದೆ, ಕೇಳದೆ ಜನರಿಂದ ಪೇರಿಕಿತ್ತುವ ಈ ಭೀಮಣ್ಣ ಖಂಡ್ರೆ ಮತ್ತವರ ಮಕ್ಕಳು, ಜನರ ಮುಂದೆ ಪ್ರತ್ಯಕ್ಷವಾಗುವುದು ಐದು ವರ್ಷಗಳ ತರುವಾಯ.

ಖಂಡ್ರೆಯ ಚಾಲಾಕಿತನ ಅರಿತುಕೊಂಡೇ ಈ ಬಾರಿ ಇಲ್ಲಿನ ಚಾಣಾಕ್ಷ ಮತದಾರ ಖಂಡ್ರೆಯ ಮಗನನ್ನು ಸೋಲಿಸುವ ಮೂಲಕ ಭೀಮಣ್ಣ ಖಂಡ್ರೆಯನ್ನು ಬಿದ್ದಾಕ್ಕೆ

ಖಂಡ್ರೆ ಮಾಡಿಕೊಂಡಿರುವ ಆಸ್ತಿಯ ವಿವರ

1. ಅಮರ್ ಚಿತ್ರಮಂದಿರ ಭಾಲ್ಕಿ (ಸುಮಾರು 40 ಲಕ್ಷ ಮೌಲ್ಯದ್ದು)
2. ಕುಂಟೆಶಿರ್ಶಿ
3. ಚಿಕ್ಲಿ ಚಂದಾ
4. ಮಾವಿನಹಳ್ಳಿ
5. ದೊಣಗಾಂವ್

(2–5: ಒಟ್ಟು 500 ಎಕರೆ ಜಮೀನು)

6. ಅಮರ್‌ಲಾಡ್ಜ್ ಭಾಲ್ಕಿ (ಸುಮಾರು 30 ಲಕ್ಷ)
7. ವರ್ಕಿಂಗ್ ವುಮೆನ್ ಹಾಸ್ಟೆಲ್, ಭಾಲ್ಕಿ (ಸುಮಾರು 25 ಲಕ್ಷ)
8. ಸುಮಾರು 5-6 ಕೋಟಿ ಬೆಲೆಬಾಳುವ ಅಕ್ಕಮಹಾದೇವಿ ಕಾಲೇಜು ಬೀದರ್‌ನ ಮುಂಭಾಗದ ಮಳಿಗೆಗಳು
9. ಭಾಲ್ಕಿಯ ತಹಶೀಲ ಕಚೇರಿ ಹತ್ತಿರ ಖಾಲಿ ಜಾಗ (ಸುಮಾರು 17 ಲಕ್ಷ ಮೌಲ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಖರೀದಿಸಿದ್ದು)
10. ಬೀದರ್ ಹಾಗೂ ಭಾಲ್ಕಿಯಲ್ಲಿನ ವಿವಿಧ ಬಡಾವಣೆಗಳಲ್ಲಿ ಖರೀದಿಸಿರುವ ಅನೇಕ ಪ್ಲಾಟ್‌ಗಳು.

ಮೇಲಿನ ಈ ಆಸ್ತಿಗಳೆಲ್ಲವೂ ಎಲ್ಲರಿಗೂ ಗೊತ್ತಿರುವಂಥದ್ದು, ಆದರೆ ಯಾರಿಗೂ ಗೊತ್ತಾಗದೇ ಇರುವ ಆಸ್ತಿ ಇನ್ನೂ ಹೆಚ್ಚಿನ ಮೌಲ್ಯವುಳ್ಳದ್ದಾಗಿದೆ.

ಶಶಿಧರ್ ಪ್ರಸಾದ್ ಸಾರಥ್ಯದಲ್ಲಿ


ಭ್ರಷ್ಟಾಚಾರದ ಕೊಂಪೆಯಾದ ಮೈಸೂರು ವಿವಿ

ಪ್ರೊ. ಜಿ. ಶಶಿಧರ್ ಪ್ರಸಾದ್ ಅವರು ತಮ್ಮ ಅಧಿಕಾರಾವಧಿ ಮುಗಿಯುವುದರೊಳಗೆ ಮೈಸೂರು ವಿಶ್ವವಿದ್ಯಾಲಯಕ್ಕೆ ಒಂದು ಗತಿ ಕಾಣಿಸಿಯೇ ತೀರುತ್ತಾರೆಂದು ಕಾಣಿಸುತ್ತದೆ. 2003ರ ಸೆಪ್ಟೆಂಬರ್‌ನಲ್ಲಿ ವಿಶ್ವವಿದ್ಯಾಲಯಕ್ಕೆ ಕುಲಪತಿಗಳಾಗಿ ಅವರು ಬಂದಾಗಿನಿಂದ ಇದನ್ನು ಭ್ರಷ್ಟರ ತಾಣವನ್ನಾಗಿ ಪರಿವರ್ತಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಅದಕ್ಕೆ ಇತ್ತೀಚಿನ ಉದಾಹರಣೆ ಭೋದಕ ಸಿಬ್ಬಂದಿಯ ನೇಮಕಾತಿಯಲ್ಲಿ ಎಸಗಿರುವ ವ್ಯಾಪಕ ಭ್ರಷ್ಟಾಚಾರ.

ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಪ್ರೊಫೆಸರ್, ರೀಡರ್ ಮತ್ತು ಉಪನ್ಯಾಸಕರುಗಳ ಹುದ್ದೆಯನ್ನು ಭರ್ತಿ ಮಾಡುವ ಸಲುವಾಗಿ ವಿ.ವಿ.ಯ ವತಿಯಿಂದ ಮಾರ್ಚ್ 25, 2006ರಂದು ಜಾಹೀರಾತನ್ನು ಪ್ರಕಟಿಸಲಾಗಿತ್ತು. ಅದರಲ್ಲಿ ನಿಯಮಾನುಸಾರವಾಗಿ ಯಾವ ಯಾವ ವರ್ಗಕ್ಕೆ ಎಷ್ಟೆಷ್ಟು ಹುದ್ದೆಗಳನ್ನು ಮೀಸಲಿಡಲಾಗಿದೆ ಎಂಬುದನ್ನೂ ವಿವರಿಸಲಾಗಿತ್ತು. ಅದರ ಪ್ರಕಾರ, 6 ಪ್ರೊಫೆಸರ್ ಹುದ್ದೆಗಳನ್ನು ಒಬಿಸಿಗೆ ಮೀಸಲಿಡಲಾಗಿತ್ತು. ಇವುಗಳಲ್ಲಿ ಪ್ರವರ್ಗ 1, ಪ್ರವರ್ಗ 2ಬಿ, ಪ್ರವರ್ಗ 3ಎ ಹಾಗೂ ಪ್ರವರ್ಗ 3ಬಿ ತಲಾ ಒಂದೊಂದು ಹುದ್ದೆಗಳನ್ನೂ, ಪ್ರವರ್ಗ 2ಎಗೆ ಎರಡು ಹುದ್ದೆಗಳನ್ನು ಇಡಲಾಗಿತ್ತು.

ಆದರೆ ಶಶಿಧರ್ ಪ್ರಸಾದ್ ಸಾರಥ್ಯದ ಕಮಾಯಿ ಗ್ಯಾಂಗ್ ಮಾಡಿದ್ದೇನು? ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿದ್ದಾಗ್ಯೂ ಮೂರು ಪ್ರೊಫೆಸರ್ ಹುದ್ದೆಗಳನ್ನು ಸಾಮಾನ್ಯವರ್ಗಕ್ಕೆ ಪರಿವರ್ತನೆ ಮಾಡಿ ತಮ್ಮ ಒಕ್ಕಲಿಗ ಕುಲಬಾಂಧವರನ್ನು ಸೇರಿಸಿಕೊಂಡರು! ಅಷ್ಟೇ ಅಲ್ಲದೆ, ಪ್ರೊಫೆಸರ್ ಹುದ್ದೆಗೆ 10 ವರ್ಷಗಳ ಕಾಲ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಪಾಠ ಮಾಡಿರಬೇಕು ಅಥವಾ 15 ವರ್ಷಗಳ ಕಾಲ ಪದವಿ ವಿದ್ಯಾರ್ಥಿಗಳಿಗೆ ಪಾಠ ಮಾಡಿರಬೇಕು ಎಂಬ ಯುಜಿಸಿ ನಿಯಮವಿದೆ. ಆದರೆ ಪ್ರಸಾದ ಸಿಕ್ಕರೆ ಸಾಕು ಎಂಬ ನಿಯಮವನ್ನೇ ನಂಬಿರುವ ಶಶಿಧರ್ ಪ್ರಸಾದರ ಗ್ಯಾಂಗಿಗೆ ಇಂಥ ನಿಯಮಗಳು ಯಾವ ಲೆಕ್ಕಕ್ಕೆ? ಆದ್ದರಿಂದಲೇ ಒಕ್ಕಲಿಗ ಅಭ್ಯರ್ಥಿಗಳಿಗೆ ಅರ್ಹತೆಗಳಿಲ್ಲದಿದ್ದರೂ ಅವರನ್ನು ನೇಮಿಸಿದ್ದಾರೆ.

ಇದೇ ಪಾಲಿಸಿಯನ್ನು ರೀಡರ್ ಹುದ್ದೆಗಳಿಗೂ ಅನ್ವಯಿಸಲಾಗಿದೆ. ವಿವಿಧ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಹತ್ತು ರೀಡರ್ ಹುದ್ದೆಗಳನ್ನು ಮೀಸಲಿಡಲಾಗಿತ್ತು. ಸರ್ಕಾರಿ ಮೀಸಲಾತಿ ನಿಯಮದ ಪ್ರಕಾರ ಅರ್ಹ ಅಭ್ಯರ್ಥಿಗಳ ಲಭ್ಯತೆ ಇಲ್ಲದಿದ್ದಾಗ ಮಾತ್ರ ಅವರಿಗೆ ಮೀಸಲಾಗಿದ್ದ ಸ್ಥಾನಗಳನ್ನು ಸಾಮಾನ್ಯ ವರ್ಗಕ್ಕೆ ಪರಿವರ್ತಿಸಬಹುದು. ಆದರೆ ಹಿಂದುಳಿದ ವರ್ಗಕ್ಕೆ ಸೇರಿದ, ಎಲ್ಲಾ ಅರ್ಹತೆಗಳನ್ನು ಹೊಂದಿದ್ದ ಅಭ್ಯರ್ಥಿಗಳು ಇದ್ದಾಗಲೂ ಅವರು ಯಾರೂ ಪ್ರಸಾದ್ ಅವರ ಕಣ್ಣಿಗೆ ಬೀಳಲಿಲ್ಲ. ಆದ್ದರಿಂದ ನಿಯಮಬಾಹಿರವಾಗಿ ಐದು ಹುದ್ದೆಗಳನ್ನು ಸಾಮಾನ್ಯವರ್ಗಕ್ಕೆ ಪರಿವರ್ತಿಸಿ ಅವುಗಳಿಗೆ ತಮ್ಮ ಸ್ವಜಾತಿ ಒಕ್ಕಲಿಗರನ್ನು ನೇಮಿಸಿದ್ದಾರೆ.



ಇವೆಲ್ಲವನ್ನು ಕಂಡು ಶಶಿಧರ್ ಪ್ರಸಾದರಿಗೆ ಕೇವಲ ಜಾತಿ ಬಗ್ಗೆ ಪ್ರೀತಿಯೆಂದು ಭಾವಿಸುವಂತಿಲ್ಲ, ಯಾಕೆಂದರೆ ಹಣ ಕಂಡರೂ ಅವರಿಗೆ ಅಷ್ಟೇ ಪ್ರೀತಿ. ಇದಕ್ಕೆ ಉದಾಹರಣೆ ವಾಣಿಜ್ಯ ವಿಭಾಗದ ರೀಡರ್ ಹುದ್ದೆಗಳನ್ನು ತುಂಬಲು ಅವರು ಅನುಸರಿಸಿದ ನಿಯಮ. ಪರಿಶಿಷ್ಟ ವರ್ಗಕ್ಕೆ ಮೀಸಲಾಗಿದ್ದ ಈ ಹುದ್ದೆಗೆ ಅರ್ಹರಾಗಬೇಕಾದರೆ ಪಿಎಚ್‌ಡಿ ಪದವಿಯನ್ನು ಹೊಂದಿರಬೇಕು. ಪರಿಶಿಷ್ಟ ವರ್ಗಕ್ಕೆ ಸೇರಿದ್ದ ಡಾ. ವೆಂಕಟೇಶ್ ಎಂಬುವವರು ಇದ್ದರೂ ಅವರನ್ನು ಪರಿಗಣಿಸದೇ ಪಿಎಚ್‌ಡಿ ಪಡೆದಿರದಿದ್ದ ನಾಗರಾಜ್ ಎಂಬುವವರನ್ನು ನೇಮಿಸಿದ್ದಾರೆ. ಇಲ್ಲಿ ನಾಗರಾಜ್ ನೀಡಿದ ಪ್ರಸಾದವೇ ಅವರ ಜಾತಿಗಿಂತ ಮುಖ್ಯವಾಗಿದ್ದಿರಬೇಕು ಶಶಿಧರ್ ಪ್ರಸಾದ್ ಸಾಹೇಬರಿಗೆ!

ಇದೆಲ್ಲ ಕಳೆದ ವರ್ಷ 2006ರಲ್ಲಿ ನಡೆದ ಅವ್ಯವಹಾರಗಳು ಎಂದು ಸುಮ್ಮನಿರುವಂತಿಲ್ಲ. ಯಾಕೆಂದರೆ ಪ್ರಸ್ತುತ ಸಾಲಿನ ನೇಮಕಾತಿಗಳಲ್ಲೂ ಇವು ಮುಂದುವರೆದಿವೆ. ಕಳೆದ ಏಪ್ರಿಲ್ ತಿಂಗಳಲ್ಲಿ ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಹುದ್ದೆಗಳಿಗೆ ಯುಜಿಸಿ ನಿಯಮಗಳ ಪ್ರಕಾರ ಅರ್ಹತೆಯನ್ನು ಹೊಂದಿರದಿದ್ದ ಡಾ. ಶ್ರೀಧರ್ ಮತ್ತು ಡಾ. ಎನ್. ಕೆ. ಲೋಕನಾಥ್ ಎಂಬುವವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಇದಿಷ್ಟೇ ಅಲ್ಲದೆ ಹಲವು ಬಾರಿ ನೇಮಕಾತಿಯ ಪ್ರಕ್ರಿಯೆ ಪೂರ್ಣಗೊಳ್ಳುವ ಮುನ್ನವೇ ಶಶಿಧರ್ ಪ್ರಸಾದ್‌ರವರು ನಿಯಮಬಾಹಿರವಾಗಿ ನೇಮಕಾತಿಗಳನ್ನು ಮಾಡಿರುವ ಉದಾಹರಣೆಗಳೂ ಇವೆ. ಅದರೊಂದಿಗೆ ಕಳೆದ ವರ್ಷ ನಡೆಯಬೇಕಿದ್ದ ಸಂದರ್ಶನಗಳನ್ನು ಅನಗತ್ಯವಾಗಿ ಮುಂದೂಡಿ, ಈ ವರ್ಷದ ಲಿಸ್ಟಿನೊಂದಿಗೆ ಅವುಗಳನ್ನು ಸೇರಿಸಿ, ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಅನ್ಯಾಯ ವೆಸಗಿದ್ದಾರಲ್ಲದೆ, ಅವರಿಗೆ ಮೀಸಲಿಟ್ಟಿದ್ದ ಸ್ಥಾನಗಳನ್ನು ಸಾಮಾನ್ಯ ವರ್ಗಗಳಿಗೆ ಪರಿವರ್ತಿಸಿ ಹಿಂದುಳಿದ ಜನರಿಗೆ ದ್ರೋಹ ಬಗೆದಿದ್ದಾರೆ.

ಉನ್ನತ ಶಿಕ್ಷಣದ ಅಭಿವೃದ್ಧಿಯ ಬಗ್ಗೆ ಸಚಿವ ಶಂಕರಮೂರ್ತಿ ಬೆಂಗಳೂರಿನಲ್ಲಿ ಪುಂಖಾನುಪುಂಖವಾಗಿ ಭಾಷಣ ಬಿಗಿಯುತ್ತಾರೆ. ಅತ್ತ ಮೈಸೂರಿನಲ್ಲಿ ಶಶಿಧರ್ ಪ್ರಸಾದ್ ಪುಷ್ಕಳವಾಗಿ ಮೇಯುತ್ತಿದ್ದಾರೆ. ಇವರಿಬ್ಬರ ಮಧ್ಯೆ 'ನೀನು ಹತ್ತಂಗೆ ಮಾಡು, ನಾನು ಅತ್ತಂಗೆ ಮಾಡ್ತಿನಿ' ಅನ್ನೋ ಒಡಂಬಡಿಕೆ ಇದ್ದರೂ ಆಶ್ಚರ್ಯವಿಲ್ಲ. ಹಾಗೇನಾದರೂ ಇದ್ದರೆ ಕರ್ನಾಟಕದ ಜನತೆಯ ಕೈಗೆ ಎಕ್ಕಡ ಬರುವ ದಿನ ದೂರವಿಲ್ಲ.

ಅಂದಹಾಗೆ ಇನ್ನೊಂದು ವಿಚಾರವನ್ನಿಲ್ಲಿ ಹೇಳಬೇಕು. ಬಹಳ ಜನಕ್ಕೆ ಗೊತ್ತಿರಲಿಕ್ಕಿಲ್ಲ ಸನ್ಮಾನ್ಯ ಶ್ರೀ ಶಶಿಧರ್ ಪ್ರಸಾದ್ ಅವರು ಕನ್ನಡದ ಹೆಸರಾಂತ (!) ಸಾಹಿತಿ ದೆ. ಜವರೇಗೌಡ ಅವರ ಸುಪುತ್ರ!!

-ಕುಮಾರ್ ಬುರಡಿಕಟ್ಟಿ

ಸುಪ್ರೀಂ ಕೋರ್ಟ್ ತೀರ್ಪಿಗೂ ಬಗ್ಗುವುದಿಲ್ಲ

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಎಷ್ಟೊಂದು ಪಕ್ಷಪಾತಿಗಳೆಂದರೆ ಅವರು ಭಾರತದ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೂ ಕ್ಯಾರೇ ಎನ್ನುವುದಿಲ್ಲ. 10 ವರ್ಷಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸಿದ ದಿನಗೂಲಿ ನೌಕರರನ್ನು ಕಾಯಂಗೊಳಿಸಬೇಕೆಂದು ಸುಪ್ರೀಂಕೋರ್ಟ್ ಮೇ 25, 2006ರಂದು ತೀರ್ಪು ನೀಡಿದೆ. ಇದಕ್ಕನುಗುಣವಾಗಿ ಎಲ್ಲಾ ಸರ್ಕಾರಗಳ ಕಾರ್ಯದರ್ಶಿಗಳು, ಆಯಾ ಇಲಾಖೆಗಳ ಕಾರ್ಯದರ್ಶಿಗಳು ಕೋರ್ಟಿನ ಈ ಆದೇಶವನ್ನು ಪಾಲಿಸಲು ಸೂಚಿಸಿದ್ದಾರೆ. ರಾಜ್ಯದ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೂ ಎಲ್ಲ ವಿಶ್ವವಿದ್ಯಾಲಯಗಳಿಗೆ ಈ ಸೂಚನೆಯನ್ನು ರವಾನಿಸಿದ್ದಾರೆ.

ಮೈಸೂರು ವಿವಿಯಲ್ಲಿ ಈ ವಿಚಾರ ಕುರಿತಂತೆ ಒಂದು ಸಿಂಡಿಕೇಟ್ ಉಪಸಮಿತಿ ಇದ್ದು, ಅದು 28.07.2006 ರಂದು ತನ್ನ ವರದಿಯನ್ನು ಸಲ್ಲಿಸಿ ಕೇವಲ 36 ತಾತ್ಕಾಲಿಕ ನೌಕರರು ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಕಾಯಂ ನೌಕರರುಗಳು ಅರ್ಹ ಎಂದು ಹೇಳಿತು. ಆದರೆ ಶಶಿಧರ್ ಪ್ರಸಾರರು ಉಳಿದ 115 ಮಂದಿಯನ್ನೂ ಕಾಯಂ ಮಾಡಿದ್ದಾರೆ.

ಮೈಸೂರು ವಿ.ವಿ. ಕುಲಪತಿಗಳ ಸಾಧನೆಯ ಪಕ್ಷಿನೋಟ

ಪ್ರೊ. ಜಿ. ಶಶಿಧರ್ ಪ್ರಸಾದ್ ಸೆಪ್ಟೆಂಬರ್ 2003ರಿಂದ ಮೈಸೂರು ವಿವಿಯ ಕುಲಪತಿಗಳಾಗಿ ನೇಮಕಗೊಂಡಾಗಿನಿಂದಲೂ ಅವರು ಮಾಡಿರುವ ಘನಂದಾರಿ ಕೆಲಸಗಳ ಒಂದು ಸಣ್ಣ ಚಿತ್ರಣವನ್ನಿಲ್ಲಿ ಕೊಡಲು ಯತ್ನಿಸಿದ್ದೇವೆ.

1. ಕುಲಪತಿಗಳ ಅಧಿಕೃತ ನಿವಾಸವನ್ನು 18 ಲಕ್ಷ ರೂ., ಮತ್ತು ತಮ್ಮ ಕಚೇರಿಯನ್ನು 12 ಲಕ್ಷ ರೂ. ವೆಚ್ಚದಲ್ಲಿ ಅನಗತ್ಯವಾಗಿ ನವೀಕರಿಸಿದ್ದು.
2. ಮೈಸೂರು ವಿ.ವಿ.ಯಲ್ಲಿ ವಾಹನಗಳಿಗೆ ಕೊರತೆ ಇಲ್ಲದಿದ್ದರೂ 30 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ದುಬಾರಿ ಬೆಲೆಯ ಹೊಸ ವಾಹನಗಳನ್ನು (ಇಂಡಿಗೋ 2, ಲ್ಯಾನ್ಸರ್ 1, ಕ್ವಾಲಿಸ್ 1) ಖರೀದಿಸಿದ್ದು.
3. ವಿ.ವಿ.ಗೆ ಆರ್ಥಿಕ ನೆರವು ಪಡೆಯುವ ನೆಪದಲ್ಲಿ ಸಂಬಂಧಪಡದ ಅಧಿಕಾರಿಗಳೊಡನೆ ವಿದೇಶ ಪ್ರಯಾಣ ಮಾಡಿದ್ದು. ಈ ಘನಕಾರ್ಯಕ್ಕೆಂದು 60 ಲಕ್ಷ ರೂ.ಗಳನ್ನು ಪೋಲು ಮಾಡಿದ್ದು.
4. ವಿ.ವಿ.ಯಲ್ಲಿ ನಡೆದ, ನಡೆಯುತ್ತಿರುವ ಎಲ್ಲಾ ರೀತಿಯ ಕಾಮಗಾರಿಗಳ (ಕಟ್ಟಡ ನಿರ್ಮಾಣ, ಡಾಂಬರೀಕರಣ, ಪೇಯಿಂಟಿಂಗ್, ಪೀಠೋಪಕರಣಗಳ ರಿಪೇರಿ ಇತ್ಯಾದಿ) ಗುತ್ತಿಗೆಯನ್ನು ತಮ್ಮ ಕುಲಬಾಂಧವರಿಗೇ ನೀಡಿದ್ದು. ಇದರಲ್ಲಿ ಪ್ರಸಾದ್ ಪಡೆದ ಪ್ರಸಾದ ಎಷ್ಟು ಎಂಬುದು ಮಾತ್ರ ಗುಟ್ಟಾಗಿದೆ.
5. ವಿವಿಯಲ್ಲಿ ಯಾವುದೇ ಸಭೆ ಸಮಾರಂಭ ನಡೆದರೆ ತಮ್ಮ ಸ್ವಜಾತಿ ಬಾಂಧವ ಶಿವಣ್ಣನ ಮಾಲೀಕತ್ವದ 'ಕಂಟ್ರಿ ಕಸಿನ್' ಹೋಟೆಲ್‌ನಿಂದಲೇ ಉಪಾಹಾರ ತರಿಸುವುದು, ಆತನಿಗೂ 'ತಿನ್ನಿಸಿ' ತಾವೂ 'ತಿನ್ನುವುದು'!
6. ವಿ.ವಿ. ಕೆಲಸಗಳಿಗೆ ದುಬಾರಿ ಪ್ರಯಾಣ ದರವನ್ನು ವಿಧಿಸುವ ಕಾವೇರಿ ಟ್ರಾವೆಲ್ಸ್‌ನಿಂದಲೇ ವಾಹನಗಳನ್ನು ಬಾಡಿಗೆಗೆ ತರಬೇಕೆಂದು ಕಟ್ಟಪ್ಪಣೆ ಮಾಡಿರುವುದು. ಈ ಮೂಲಕ ಪ್ರತಿವರ್ಷ 10-15 ಲಕ್ಷದಷ್ಟು ಹಣವನ್ನು ಪೋಲು ಮಾಡುವುದು.
7. ವಿವಿಯ ಯಾವುದೇ ವಿಭಾಗಕ್ಕೆ ಕಂಪ್ಯೂಟರ್ ಬೇಕಾದರೂ ಪಿಸಿಎಸ್ ಟೆಕ್ನಾಲಜೀಸ್ ಎಂಬ ಸಂಸ್ಥೆಯಿಂದ ಮಾತ್ರವೇ ಖರೀದಿಸುವಂತೆ ಆಜ್ಞಾಪಿಸಿರುವುದು. ಇತ್ಯಾದಿ... ಇತ್ಯಾದಿ...

ಮೂರೇ ತಿಂಗಳಲ್ಲಿ ಪ್ರೊಫೆಸರ್ ಆದ ಲೋಕನಾಥ್

ಪ್ರೊ. ಶಶಿಧರ್ ಪ್ರಸಾದರ ನೇತೃತ್ವದಲ್ಲಿ ಮೈಸೂರು ವಿವಿಯಲ್ಲಿ 'ಲೋಕನಾಥ್ ಪವಾಡ'ವೊಂದು ನಡೆದಿದೆ. ಆ ಪವಾಡದ ಮರ್ಮ ಇಷ್ಟೇ: ಎನ್.ಕೆ. ಲೋಕನಾಥ್ ಎಂಬುವವನು ಶಶಿಧರ್ ಪ್ರಸಾದ್ ಅವರ ಒಕ್ಕಲಿಗ ಜಾತಿಗೆ ಸೇರಿದವನು ಮಾತ್ರವಲ್ಲ, ಅವರ ಹತ್ತಿರದ ಸಂಬಂಧಿ ಕೂಡ. ಹೀಗಾಗಿಯೇ ಲೋಕನಾಥ್‌ಗೆ ಬಡ್ತಿಗಳ ಮೇಲೊಂದು ಬಡ್ತಿ ಸಿಗುತ್ತಲೇ ಇದೆ! ಸಾಮಾನ್ಯವಾಗಿ ಐದು ವರ್ಷಗಳ ಕಾಲ ಪೂರ್ಣಾವಧಿ ಸೇವೆ ಸಲ್ಲಿಸಿದವರಿಗೆ ಉಪನ್ಯಾಸಕನ ಹುದ್ದೆ ನೀಡಲಾಗುತ್ತದೆ. ಆದರೆ ಲೋಕನಾಥನಿಗೆ ಈ ಅರ್ಹತೆ ಇಲ್ಲದಿದ್ದರೂ ಆತನನ್ನು ಆ ಹುದ್ದೆಗೆ ನೇಮಿಸಲಾಗಿದೆ. ಲೋಕನಾಥನಿಗೆ ಸಂಬಂಧಿಸಿದಂತೆ ಇಂತಹ ಪವಾಡಗಳು ನಡೆಯುತ್ತಲೇ ಬಂದಿದೆ.

ಉದಾಹರಣೆಗೆ ಲೋಕನಾಥರಿಗೆ ನೀಡಿದ ಹುದ್ದೆ ಸಾಮಾನ್ಯ ವರ್ಗದ ಗ್ರಾಮೀಣ ಅಭ್ಯರ್ಥಿಗೆ ಮೀಸಲಾಗಿತ್ತು. ಆದರೆ ಲೋಕನಾಥರು ಗ್ರಾಮೀಣ ಅಭ್ಯರ್ಥಿಯಾಗಿರದಿದ್ದರೂ ಅವರಿಗೆ ಈ ಕುರ್ಚಿಯನ್ನು ದಯಪಾಲಿಸಲಾಯಿತು!

ಇಲ್ಲಿಗೇ ಮುಗಿಯುವುದಿಲ್ಲ ಲೋಕನಾಥರ ಪವಾಡ. ಈತ ಉಪನ್ಯಾಸಕನಾದ 13 ದಿನಗಳ ನಂತರ ಬೆಂಗಳೂರು ವಿವಿಯ ಭೌತಶಾಸ್ತ್ರ ವಿಭಾಗದಲ್ಲಿ ರೀಡರ್ ಹುದ್ದೆಯನ್ನು ನೀಡಲಾಯಿತು. ಅಂದಹಾಗೆ ಬೆಂಗಳೂರು ವಿವಿಯ ಕುಲಪತಿಗಳೂ ಒಕ್ಕಲಿಗ ಜಾತಿಯವರೇ! ಇದಾದ ಕೆಲವೇ ದಿನಗಳಲ್ಲಿ ಲೋಕನಾಥನಿಗೆ ಮತ್ತೆ ಮೈಸೂರು ವಿವಿಯಲ್ಲಿ ಪ್ರೊಫೆಸರ್ ಸ್ಥಾನವನ್ನು ನೀಡಲಾಯಿತು!

ಸಾಮಾನ್ಯವಾಗಿ ಉಪನ್ಯಾಸಕನಾಗುವುದಕ್ಕೆ ಐದು ವರ್ಷ, ರೀಡರ್ ಆಗುವುದಕ್ಕೆ ಮತ್ತೆ ಹಲವೊಂದಿಷ್ಟು ವರ್ಷ, ಪ್ರೊಫೆಸರು ಆಗುವುದಕ್ಕೆ ಹತ್ತರಿಂದ ಹದಿನೈದು ವರ್ಷ ಹೀಗೆ ಅನುಭವ ಹೊಂದಿರಬೇಕಾಗುತ್ತದೆ. ಆದರೆ ಲೋಕನಾಥ್‌ಗೆ ಈ ಯಾವ ಅನುಭವವೂ ಇಲ್ಲ, ಕಡೇಪಕ್ಷ ಮಾರ್ಗದರ್ಶನ ಮಾಡಿದ ಅನುಭವವೂ ಇಲ್ಲ. ಆದರೆ ಕೇವಲ ಮೂರು ತಿಂಗಳ ಅವಧಿಯಲ್ಲಿ ಉಪನ್ಯಾಸಕ ಹುದ್ದೆಯಿಂದ ಪ್ರೊಫೆಸರ್ ಹುದ್ದೆಗೆ ಏರುತ್ತಾರೆಂದರೆ ಇದನ್ನು ಪವಾಡ ಎನ್ನದೆ ಬೇರೇನೆನ್ನಬೇಕು? ಇದೇ ಶಶಿಧರ್ ಪ್ರಸಾದ್ ಅವರ ಲೋಕನಾಥ್ ಪವಾಡ!

ಬಳಸಿದ್ದಾರೆ. ಶಾಲಾ-ಕಾಲೇಜಿನ ಸಿಬ್ಬಂದಿಗಳನ್ನು ಬಳಸಿಕೊಂಡು ಚುನಾವಣೆ ನಡೆಸುವ ಇವರುಗಳು ರಿಗ್ಗಿಂಗ್ ವೀರರೆಂದೇ ಪ್ರಸಿದ್ಧಿ. ಆದರೇನು? ಖಂಡ್ರೆ ಚನ್ನಬಸವ ಪಟ್ಟದೇವರಿಂದ ಕಬಳಿಸಿದ ಶಿಕ್ಷಣ ಸಂಸ್ಥೆಯ ಒಡೆಯನಾದ್ದರಿಂದ "ಸೋತರೂ ಮೀಸೆಗೆ ಮಣ್ಣು ಹತ್ತಲಿಲ್ಲ" ಎಂದು ಜಾಡಿಸಿಕೊಳ್ಳುವ ಜಾಯಮಾನ ಖಂಡ್ರೆಯವರಿಗಿದೆ.

ಖಂಡ್ರೆ ಮನೆಯಲ್ಲೇ ಉಪವಾಸ

ಈ ಭೀಮಣ್ಣ ಖಂಡ್ರೆ, ಎಂಥ ಹುಂಬ ಆಸಾಮಿ ಎಂಬುದು ಮುಗ್ಧ ಚನ್ನಬಸವರಿಗೆ ಗೊತ್ತಾಗಲೇ ಇಲ್ಲ. ಅಂತೆಯೇ ಸಂಸ್ಥೆಯ ಯಾವ ಬೈಲಾದಲ್ಲೂ ಅವರ ಹೆಸರಿಲ್ಲ. ತರುವಾಯ ಅಧ್ಯಕ್ಷರಾಗಿದ್ದ ಸಂಗಶೆಟ್ಟಿ ಶಟಕಾರ್ ಆರ್.ವಿ. ಬಿಡಪ್ಪ ಅವರನ್ನು ಯಾರಿಗೂ ಗೊತ್ತಾಗದಂತೆ ಹಿಂದೆ ಸರಿಸಿ ತಾನೇ ಅಧ್ಯಕ್ಷನಾದ. ಇದೀಗ ಈತನ ಮಗ ಈಶ್ವರ ಖಂಡ್ರೆ ಈ ಟ್ರಸ್ಟಿನ ಅಧ್ಯಕ್ಷ!


ಪ್ರಕಾಶ್ ಖಂಡ್ರೆ

ಈ ಸಂಸ್ಥೆಯ ಅಕ್ಕಮಹಾದೇವಿ ಕಾಲೇಜು ಒಂದೊಮ್ಮೆ ಆರ್ಥಿಕ ಸ್ಥಿತಿಯಿಂದ ತತ್ತರಿಸಿದ್ದಾಗ ಅದನ್ನು ಆಗ ಕಾಪಾಡಿದವರು ಆ ಕಾಲೇಜಿನ ಪ್ರಾಚಾರ್ಯರಾಗಿದ್ದ ಎಸ್.ವಿ. ಪಾಟೀಲ. ಇವರು ತಮ್ಮ ಹೆಂಡತಿಯ ಮೈಮೇಲಿನ ಒಡವೆಗಳನ್ನು ಮಾರಿ ಸಂಸ್ಥೆಯ ಕೆಲಸಗಾರರಿಗೆ ಸಂಬಳ ಕೊಟ್ಟವರು. ಇಂಥ ಉದಾರ ಮನಸ್ಸಿನ ಪಾಟೀಲರು ಸಹಜವಾಗಿ ಪಟ್ಟದೇವರ ಗಮನ ಸೆಳೆದರು. ಅವರ ಪ್ರೀತಿ-ವಿಶ್ವಾಸಕ್ಕೆ ಪಾತ್ರರಾದರು. ಇದನ್ನು ಗಮನಿಸಿದ ಖಂಡ್ರೆ ಏನೇನೋ ನೆಪವೊಡ್ಡಿ ಪಾಟೀಲರನ್ನು ಸಂಸ್ಥೆಯಿಂದಲೇ ಡಿಸ್‌ಮಿಸ್ ಮಾಡಿದ. ಈ ಸಂಗತಿಯನ್ನು ತಿಳಿದ ಚನ್ನಬಸವರು ಸ್ವತಃ ಭೀಮಣ್ಣನನ್ನು ಭೇಟಿಯಾಗಿ ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತೆ ಆಜ್ಞಾಪಿಸಿದರು. ಆಗಲೂ ಖಂಡ್ರೆ ಕೇರ್ ಮಾಡಲಿಲ್ಲ. ಆಗ ಪಟ್ಟದೇವರು ಅನಿವಾರ್ಯವಾಗಿ ಖಂಡ್ರೆ ಮನೆಯಲ್ಲಿಯೇ ಉಪವಾಸ ಸತ್ಯಾಗ್ರಹ ಆರಂಭಿಸಿದರು.

ಈ ಸಂಗತಿ ಎಲ್ಲೆಡೆಗೆ ಹಬ್ಬಿ ಹಿರೇಮಠದ ಭಕ್ತಾದಿಗಳು ನನಗೆಲ್ಲಿ ಎಕ್ಕಡ ಪೂಜೆ ಮಾಡುತ್ತಾರೆ ಎಂದು ಹೆದರಿದ ಖಂಡ್ರೆ ಪಾಟೀಲರನ್ನು ಪುನಃ ನೇಮಕ ಮಾಡಿಕೊಂಡ. ಆದರೆ ನಿವೃತ್ತಿ ನಂತರ ಅವರಿಗೆ ಬರಬೇಕಾದ ಹಣ ಇನ್ನೂ ಸಂದಾಯವಾಗಿಲ್ಲವೆಂದು ಇಲ್ಲಿನ ಜನ ಹೇಳುತ್ತಿದ್ದಾರೆ.

ಖಂಡ್ರೆ ಬಗ್ಗೆ ಉಸಿರೆತ್ತುವಂತಿಲ್ಲ

ಖಂಡ್ರೆಯ ವಿರುದ್ಧವಾಗಲಿ ಅಥವಾ ಅವರ ಮಕ್ಕಳ ಅನಾಚಾರದ ಬಗ್ಗೆಯಾಗಲಿ ಯಾರೂ ಬರೆಯುವಂತಿಲ್ಲ. ಅವರ ವಿರುದ್ಧ ಬರೆಯುವ ದಮ್ಮೇ ಇಲ್ಲವಾಗಿದೆ ಇಲ್ಲಿನ ಪತ್ರಕರ್ತರಿಗೆ. ಯಾಕೆಂದರೆ ಖಂಡ್ರೆಯ ಮನೆಯ ಊಳಿಗಕ್ಕೆ ನಿಂತ ಗೂಂಡಾಗಳ ದೊಡ್ಡ ದಂಡು ಇದೆ. ಖಂಡ್ರೆಯ ವಿರುದ್ಧ ಯಾರೇ ಮಾತಾಡಿದರೂ ಅವರ ಕೈ-ಕಾಲು ಇಲ್ಲವೇ ಜೀವ ಹೋಯಿತೆಂದೇ ಅರ್ಥ.

ಭಾಲ್ಕಿ ಕ್ಷೇತ್ರವನ್ನು ಈಗ ಪ್ರತಿನಿಧಿಸುತ್ತಿರುವ ಬಿಜೆಪಿಯ ಪ್ರಕಾಶ ಖಂಡ್ರೆಗೂ ಕೂಡ ಜೀವಭಯ ತಪ್ಪಿಲ್ಲ. ಸೋತಿರುವ ವಿಜಯಕುಮಾರ ಖಂಡ್ರೆ ಕೋರ್ಟಿನಲ್ಲಿ ದಾವೆ ಹೂಡಿದ್ದಾರೆ. ಹಾಗಾಗಿ ಭಾಲ್ಕಿಗೆ ಈ ಇಬ್ಬರೂ ಶಾಸಕರಂತಿದ್ದಾರೆ. ಅಂತೆಯೇ ಕರ್ನಾಟಕದ ಮುಕುಟವೆಂದೇ ಕರೆಯಲ್ಪಡುವ ಬೀದರ್ ಜಿಲ್ಲೆಯ ರಾಜಕೀಯ ಬಹಳ ವಿಚಿತ್ರವಾಗಿದೆ. ಖಂಡ್ರೆಯಂಥ ಜೋಮೇನಿಗಳು, ಗುರುಪಾದಪ್ಪ ನಾಗಮಾರಪಳ್ಳಿಯಂಥ ಎಬಡರಿಂದ ಮುತ್ತಾಳ್ಪ ಎಕ್ಕುಟ್ಟಿ ಹೋಗಿದೆ.


-ವರದಿಗಾರ

ರಸ್ತೆ ಟಾರು ಮೋರಿ ಪಾಲು, ಕೆರೆ ಏರಿ ನೀರು ಪಾಲು

ಮಳೆ ಬಿತ್ತು: ಯಡ್ಡಿ ಬಣ್ಣ ಬಯಲಾಯ್ತು!

ರಾ. ಸೋಮನಾಥ್

ನಾನು ಕಳಪೆ ಕಾಮಗಾರಿ ಮಾಡಿ ದುಡ್ಡು ತಿಂತೀನಾ? ಆ ಪತ್ರಿಕೆಯವರು ಬರೀತಾರೆ ಅಂತ ನೀವೂ ನಂಬ್ತೀರಾ? ನಿಮ್ಮನ್ನೆಲ್ಲಾ ಈಗ್ಲೇ ಶಿಕಾರಿಪುರಕ್ಕೆ ಕರೆದೊಯ್ತೀನಿ. ನೀವೇ ನೋಡಿ; ನಾನೇನಾದ್ರೂ ಬೋಗಸ್ ವರ್ಕ್ ಮಾಡಿಸಿ ದುಡ್ಡು ನುಂಗಿದ್ರೆ ಅಲ್ಲೇ ನನ್ನನ್ನ ಎಕ್ಕಡಾ ತಗೊಂಡ್ ಹೊಡೀರಿ....!



ಇಲ್ಲಿಗೆ ಎರಡು ವಾರಗಳ ಹಿಂದಷ್ಟೇ ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ನಾಯಕ ವಿ.ಎಸ್. ಉಗ್ರಪ್ಪನವರ ಆರೋಪಕ್ಕೆ ಉಪಮುಖ್ಯಮಂತ್ರಿ ಯಡಿಯೂರಪ್ಪನವರು ಹೂಂಕರಿಸಿದ ರೀತಿಯನ್ನು ಯಾರು ತಾನೇ ಓದಿಲ್ಲ? ಅದೇ ವಾರ 'ಲಂಕೇಶ್' ಪತ್ರಿಕೆ ಶಿಕಾರಿಪುರದ ನಾನೂರು ಕೋಟಿ ರೂಪಾಯಿಗಳ ವಿಶೇಷ ಪ್ಯಾಕೇಜಿನ ದುರಂತವನ್ನು ಬಯಲಿಗೆಳೆದಿತ್ತು. ಅದಕ್ಕೆ ಸ್ಪಂದಿಸಿಯೇ ವಿ.ಎಸ್. ಉಗ್ರಪ್ಪ ಯಡ್ಡಿಯ ಭೂತ ಬಿಡಿಸಿದ್ದರು. ಬೇಕಾದ್ರೆ ನಿಮ್ಮನ್ನೆಲ್ಲ ಈಗ್ಲೇ ಶಿಕಾರಿಪುರಕ್ಕೆ ಕರೆದೊಯ್ತೀನಿ, ಅಲ್ಲೇ ನನ್ನನ್ನ ಎಕ್ಕಡ ತಗೊಂಡ್ ಹೊಡೀರಿ ಎಂದು ಯಡ್ಡಿ ಲಗಾಟ ಹಾಕಿದ್ದನ್ನೇ ಎಲ್ಲರೂ ನಂಬಿದ್ದರಲ್ಲ.

ಅಲ್ಲಿಗೆ ವಿರೋಧಿ ಕಾಂಗ್ರೆಸ್ಸಿಗೂ ಪರಿಷತ್ತಿಗೂ ಒಟ್ಟೊಟ್ಟಿಗೇ ಕಿವಿಗೆ ಹೂವಿಟ್ಟ ಯಡ್ಡಿಯ ಬಂಡವಾಳವನ್ನು ಈಗ ಪ್ರಕೃತಿಯೇ ಬಯಲಿಗೆಳೆದಿದೆ. ಮೊನ್ನೆ ಬಿದ್ದ ಮಾಮೂಲಿ ಮಳೆಗೆ ಶಿಕಾರಿಪುರದ ಹದಿನೈದು ಕೆರೆಗಳು ಒಟ್ಟೊಟ್ಟಿಗೇ ಕೋಡಿ ಒಡೆದು ಯಡ್ಡಿಯ ಮಾನ ಮತ್ತು ಕಾಮಗಾರಿಗಳ ಬಣ್ಣ ಒಟ್ಟೊಟ್ಟಿಗೇ ಹೋಗಿದೆ. ಜೊತೆಗೆ ಯಡ್ಡಿಯ ಮೇಲೆ ಶಿಕಾರಿಪುರದ ಬಡರೈತರಿಗಿದ್ದ ಅಷ್ಟಿಷ್ಟು ನಂಬಿಕೆಯೂ ನೀರು ಪಾಲಾಗಿದೆ.

ಇದೇ ಆಗಸ್ಟ್ ಒಂದನೇ ತಾರೀಖಿನಿಂದ ಸತತ ನಾಲ್ಕು ದಿನಗಳ ಕಾಲ ಬಿಟ್ಟೂಬಿಟ್ಟು ಸುರಿದ ಮುಂಗಾರು ಮಳೆ ಶಿವಮೊಗ್ಗಕ್ಕಾಗಲಿ, ಶಿಕಾರಿಪುರಕ್ಕಾಗಲಿ ಹೊಸದೇನಲ್ಲ. ಪ್ರತಿ ಮಳೆಗಾಲಕ್ಕೂ ಅಲ್ಲಿನ ಕೆರೆ ಕೋಡಿ ಉಕ್ಕುವುದುಂಟು. ಆದರಲ್ಲೂ ಯಡ್ಡಿ ಉಪಮುಖ್ಯಮಂತ್ರಿಯಾದ ಮೇಲೆ ಬರಪರಿಹಾರ ಕಾಮಗಾರಿಯ ಹೆಸರಲ್ಲಿ, ವಿದರ್ಭ ಪ್ಯಾಕೇಜಿನ ವಿಶೇಷ ನಿಧಿಯಲ್ಲಿ ಒಂದಲ್ಲ ಎರಡು ಬಾರಿ ಕಾಮಗಾರಿಗಳಾಗಿವೆ. ಕೆರೆ ಹೂಳೆತ್ತಲೆಂದು, ಕೋಡಿ ಎತ್ತರಿಸಲೆಂದು, ಏರಿಗೆ ರಿವಿಟ್‌ಮೆಂಟಿಗೆಂದು, ರಸ್ತೆ ನಿರ್ಮಿಸಲೆಂದು ಮೊದಲ ನೂರಿಪ್ಪತ್ತು ಕೋಟಿಯ ಬರಪರಿಹಾರ ಕಾಮಗಾರಿ ನಿಧಿಯೂ, ಆನಂತರ ನಾನೂರು ಕೋಟಿಯ ವಿಶೇಷ ಪ್ಯಾಕೇಜೂ ಒಂದರ ಮೇಲೊಂದರಂತೆ ಶಿಕಾರಿಪುರಕ್ಕೆ ಹರಿದುಬಂದವು. ಯಡ್ಡಿಗೆ ಓಟು ಕೊಟ್ಟದ್ದೂ ಸಾರ್ಥಕವಾಯಿತೆಂದು ಜನ ಖುಷಿಪಟ್ಟಿದ್ದರು. ದಿನಕಳೆದಂತೆ ಹಾಕಿದ ಪೇಪರ್ ದೋಸೆಯಂತೆ ಟಾರು ಕಿತ್ತು, ಮೋರಿಯ ಸಿಮೆಂಟ್ ಹಾರು ಬೂದಿಯಂತೆ ಉದುರತೊಡಗಿದವು.

ಇಷ್ಟಾಗ್ಯೂ ಮಳೆ ಜೋರಾಗಿಲ್ಲವಾದ್ದರಿಂದ ಜನಕ್ಕದು ಗೊತ್ತಾಗಲಿಲ್ಲ. ಕಳಪೆ ಕಾಮಗಾರಿಯ ವಿರುದ್ಧ ಹೋರಾಟಕ್ಕಿಳಿದಿದ್ದ ಶಿಕಾರಿಪುರದ ಸಮಾಜ ಸೇವಕಿ ವಿಜಯಲಕ್ಷ್ಮಿ ಕಂಚುಗಾರರ ಮೇಲೆ ಯಡ್ಡಿ ಮಕ್ಕಳು ಮಾಡಿದ ಗೂಂಡಾಗಿರಿಯ ಬಗ್ಗೆಯೂ ಮೊದಮೊದಲು ಜನ ತಲೆಕೆಡಿಸಿಕೊಳ್ಳಲಿಲ್ಲ. ಈ ಬಗ್ಗೆ ವಿಶೇಷ ವರದಿ ಮಾಡಿದ ಪತ್ರಿಕೆಯ ಒಂದೇ ಒಂದು ಪ್ರತಿಯನ್ನೂ ಸಿಗದಂತೆ ಮಾಡಿದ ಯಡ್ಡಿ ಗ್ಯಾಂಗ್ ಅದಷ್ಟೇ ಲಗಾಟ ಹೊಡೆದರೂ ಬೋಗಸ್ ಕಾಮಗಾರಿಯನ್ನು ಮಾತ್ರ ಮುಚ್ಚಿಡಲಾಗುತ್ತಿಲ್ಲ.



ಇದು ಮಾಸೂರು ರಸ್ತೆಗೆ ಡಾಂಬರು ಹಾಕಿದ ರೀತಿ

ಏಕೆಂದರೆ ಮಳೆಗೆ ಯಡ್ಡಿಯಾದರೇನು? ಆತನ ಚೆಡ್ಡಿಯಾದರೇನು? ಹಾಕಿದ ಕಲ್ಲು ಗಟ್ಟಿಯಿದ್ದರೆ, ಹಚ್ಚಿದ ಸಿಮೆಂಟು ನೆಟ್ಟಗಿದ್ದರೆ ಅದೆಂಥಾ ಮಳೆ ಬಿದ್ದರೂ ತಾಳುತ್ತದೆ. ಆದರೆ ಶಿಕಾರಿಪುರದ ಕತೆಯೇ ಬೇರೆ-

ಸುತ್ತಮುತ್ತಲ ಸಾವಿರ ಎಕರೆ ಕೃಷಿಭೂಮಿಗೆ ಆ ಕಾಲದಿಂದಲೂ ನೀರುಣಿಸುತ್ತಲೇ ಬಂದ ಹೊನ್ನಾಳಿ ರಸ್ತೆಯ ಗುಗ್ಗ ಕೆರೆಯ ಗಜಗಾತ್ರದ ಏರಿಯು ಆಗಸ್ಟ್ ಎರಡರ ಹೊತ್ತಿಗೇ ಒಡೆದು ಬಿತ್ತು. ತುಂಬಿದ ಕೆರೆ ನೀರು ಅಕ್ಕಪಕ್ಕದ ಹಳ್ಳಿಗಳಿಗೆಲ್ಲ ನುಗ್ಗಿ ಹೊಲಗದ್ದೆಗಳೆಲ್ಲ ಸಮುದ್ರದಂತೆ ಉಕ್ಕತೊಡಗಿದವು. Of course ಆರು ತಿಂಗಳ ಹಿಂದಷ್ಟೇ ಗುಗ್ಗ ಕೆರೆಯ ಏರಿಗೆ ಕಲ್ಲು ಜೋಡಿಸಿದ ಶಾಸ್ತ್ರವೂ ಮುಗಿದಿತ್ತು. ಹನ್ನೆರಡು ಲಕ್ಷದ ಬಿಲ್ಲನ್ನು ಕಂಟ್ರಾಕ್ಟರ್ ಉದಯ ವ್ಯವಸ್ಥಿತವಾಗಿ ದೋಚಿದ್ದ. ಇನ್ನೂ ವಿಚಿತ್ರವೆಂದರೆ ಇದೇ ಕೆರೆಗೆ ಇಲ್ಲಿಗೆ ಎಂಟು ತಿಂಗಳ ಹಿಂದೆ ಬರಪರಿಹಾರದ ನೆಪದಲ್ಲಿ ಹೂಳೆತ್ತಿ, ಕೋಡಿ ಎತ್ತರಿಸಿ, ಏರಿಗೆ ಕಲ್ಲು ಜೋಡಿಸಿದ ಹದಿನೆಂಟು ಲಕ್ಷದ ಮತ್ತೊಂದು ಕಾಮಗಾರಿಗೆ ಬಿಲ್ಲು ಪಾಸಾಗಿತ್ತು!



ಸತಿಕಟ್ಟೆ ಕೆರೆಗೆ ಹೂಳು ಎತ್ತಿ ಕಲ್ಲು ರಿವಿಟ್ ಹಾಕುವ ಬದಲು ಮಣ್ಣು ಹಾಕಿ ಹಣ ಗುಳುಂ ಮಾಡಿರುವುದು

ಒಂದೇ ವರ್ಷದಲ್ಲಿ ಎರಡೆರಡು ಸಾರಿ ಹೂಳೆತ್ತಿದ್ದರೆ, ಏರಿಗೆ ರಿವಿಟ್‌ಮೆಂಟ್ ನಡೆದಿದ್ದೇ ಆಗಿದ್ದರೆ ಮಾಮೂಲಿ ಮಳೆಗೆ ಏಕೆ ಏರಿ ಒಡೆಯುತ್ತೆ?

ಶಿಕಾರಿಪುರದಲ್ಲಿ ಸದ್ಯ ಏರಿಕಟ್ಟೆ ಒಡೆದು ಜಲದುರಂತಕ್ಕೆ ಕಾರಣವಾದ ಇಂಥ ಹದಿನೈದು ಕೆರೆಗಳದ್ದೆಲ್ಲ ಒಂದೇ ಕತೆ!

ಶಿರಾಳಕೊಪ್ಪದ ಬೆಳಕಿಕೆರೆ ಇಡೀ ಊರಿಗೆ ದೊಡ್ಡ ಕೆರೆ. 2006 ರ ಅಕ್ಟೋಬರ್ ತಿಂಗಳಿಗೊಮ್ಮೆ, ಆನಂತರ ವಿಶೇಷ ಪ್ಯಾಕೇಜಿನಲ್ಲೊಮ್ಮೆ; ಹೀಗೆ ಎರಡು ಬಾರಿ ಏರಿ ದುರಸ್ತಿಗೆಂದು ಮೊದಲು ಆರು ಲಕ್ಷ, ನಂತರ ಹತ್ತು ಲಕ್ಷದಂತೆ ಬಿಲ್ಲು ಹೊಡೆದಿದ್ದಾರೆ. ಹೀಗಿದ್ದೂ ಬೆಳಕಿಕೆರೆಯ ಏರಿ ಕುಸಿದು ಸರಿಸುಮಾರು ಇನ್ನೂರು ಎಕರೆಯ ಬತ್ತದ ಪೈರು ಕೊಚ್ಚಿ ಹೋಗಿದೆ.

ಮಾಸೂರ್ ರಸ್ತೆಯ ಕೊಟ್ರಳ್ಳಿಕೆರೆ, ಶಿವಬಾರ್ ಕಟ್ಟೆಕೆರೆ, ತಾವರೆಕೆರೆ, ಸನಪ್ಪನ ಕೆರೆ, ಅಂಬಾರಗೊಪ್ಪ ಬಾಕಿಕಟ್ಟೆ, ಸಾಲೂರು ಬೂಕಿನ್‌ಕೆರೆ, ಕೋಟೆಪುರ ಕೆರೆ, ಚಿಕ್ಕ ಸಾಲೂರು ರಾಮನಒಡ್ಡು, ಗಾಯದ ಕೋಗಿಲೆಕೆರೆ; ಹೀಗೆ ಶಿಕಾರಿಪುರವೊಂದರಲ್ಲೇ ಹದಿನೈದು ಕೆರೆಗಳ ಏರಿ ಒಡೆದಿದೆಯೆಂದರೆ ಇನ್ನೆಷ್ಟು ವರ್ಷಗಳಿಂದ ಅಲ್ಲಿ ಬೋಗಸ್ ಬಿಲ್ ದಂಧೆ ನಡೆದಿರಬೇಡ?

ಹಾಗಾದರೆ ವರ್ಷಂಪ್ರತಿ ಹೂಳೆತ್ತಿದ್ದು ಸುಳ್ಳೆ? ಹೂಳೆತ್ತಿದ್ದೇ ಆಗಿದ್ದರೆ ಕೆರೆ ಏರಿಯೇಕೆ ಒಡೆಯುತ್ತದೆ?

ಕೆರೆಗಳ ಕತೆ ಹೀಗಾದರೆ ರಸ್ತೆಗಳದ್ದು ಇನ್ನೂ ಅಧ್ವಾನ. ಧೂಪದಹಳ್ಳಿ ಹರಿಜನಕೇರಿಯಲ್ಲಿ ಸ್ವಚ್ಛತಾ ಗ್ರಾಮ ಯೋಜನೆಯಲ್ಲಿ ಹತ್ತು ಲಕ್ಷದ ಬಿಲ್ಲು ಜಡಿದು ಹಾಕಿದ್ದ ಟಾರು ಒಂದೂವರೆ ತಿಂಗಳಲ್ಲೇ ಕೊಚ್ಚಿ ಹೋಗಿದೆ. ಅದೂ ಬಿಜೆಪಿಯ ಜಿ.ಪಂ. ಸದಸ್ಯೆ ಶಾಂತಲಾ ಭೂಕಾಂತ್‌ಳ ಮೈದುನ ಖದೀಮ ಕಂಟ್ರಾಕ್ಟರ್ ಶಿವಶಂಕರ್ ಇದರ ಗುತ್ತಿಗೆ ಪಡೆದಿದ್ದ!

ಈ ಹಿಂದೆ ಪತ್ರಿಕೆ ಫೋಟೋ ಸಮೇತ ಅಂಜನಾಪುರ ಚಾನೆಲ್‌ನ ಕಳಪೆ ಕಾಮಗಾರಿಗಳ ಬಗ್ಗೆ ಬರೆದಾಗ ಹುಷಾರಾದ ಯಡ್ಡಿ ಗ್ಯಾಂಗ್ ಕಿತ್ತುಬಿದ್ದ ಲೈನಿಂಗ್ ಅನ್ನೇ ತೇಪೆ ಹಾಕಿ ರಿಪೇರಿ ಮಾಡಿತ್ತು. ಈಗ ಬಿದ್ದ ಮಳೆಗೆ ತೇಪೆ ಹಾಕಿದ ಲೈನಿಂಗೂ ಸೇರಿದಂತೆ ಎಲ್ಲೆಂದರಲ್ಲಿ ಗೋಡೆ ಕುಸಿದು ಚಾನೆಲ್ ನೀರು ಹೊಲಕ್ಕೆ ನುಗ್ಗುತ್ತಿದೆ. ಇನ್ನು ಶಿಕಾರಿಪುರ-ಶಿವಮೊಗ್ಗ ಮುಖ್ಯ ರಸ್ತೆಯನ್ನು ನೋಡಿದ ಯಾರೇ ಆದರೂ ಯಡ್ಡಿ ಮುಖಕ್ಕೆ ಕ್ಯಾಕರಿಸಿ ಉಗಿದುಬಿಡುತ್ತಾರೆ.

ಅದು ಶಿಕಾರಿಪುರದ ಮಟ್ಟಿಗೆ ರಾಜಮಾರ್ಗ. ಇಲ್ಲಿಗೆ ವರ್ಷದ ಹಿಂದೆ ನಲವತ್ತೆಂಟು ಲಕ್ಷ ರೂಪಾಯಿ ವೆಚ್ಚದಲ್ಲಿ ಯಡ್ಡಿಯೇ ನಿಂತು ಡಾಂಬರ್ ಹಾಕಿಸಿದ್ದರು. ಅವರ ಪುತ್ರ ರಾಘವೇಂದ್ರನೇ ಅದರ ಬೇನಾಮಿ ಕಂಟ್ರಾಕ್ಟರ್. ಯಡ್ಡಿ ಹಣೆಬರಹವೋ ಅಥವಾ ಕೈಗುಣವೋ, ಮೊನ್ನಿನ ಮಳೆಯಲ್ಲಿ ಶಿವಮೊಗ್ಗ ರಸ್ತೆಗೆ ಹಾಕಿದ ಡಾಂಬರ್ ಪೂರ್ತಿ ದೋಸೆ ಎಬ್ಬಿದಂತೆ ಕಿತ್ತು ಬಿದ್ದಿದೆ.



ಕುಸಿದ ಅಂಜನಾಪುರ ಚಾನೆಲ್

ರಾಜಮಾರ್ಗದ ಗತಿಯೇ ಹೀಗಾದ ಮೇಲೆ ಉಳಿಕೆಪಳಿಕೆ ರಸ್ತೆಗಳು ಬಾಳುವುದುಂಟೆ?

ಶಿವಮೊಗ್ಗ ರಸ್ತೆಯಿಂದ ತರಲಘಟ್ಟ ರಸ್ತೆಗೆ

ಕಲ್ಮನೆಯಲ್ಲಿ ಯಡ್ಡಿ ಮಲತಾಯಿ ಮಕ್ಕಳು?

ನಾವೇನ್ ತಪ್ಪು ಮಾಡಿದ್ವಿ? ಯಡಿಯೂರಪ್ಪನವರಿಗೆ ನಾವೆಲ್ಲ ಮಲತಾಯಿ ಮಕ್ಳಾ?

ಹಾಗಂತ ಕಲ್ಮನೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಕೊಟ್ಟಗೆಹಳ್ಳಿ, ಕೊಪ್ಪರಕೆರೆ ಮತ್ತು ಬೌಡಿಹಳ್ಳಿಗಳ ಗ್ರಾಮಸ್ಥರು ಪ್ರತಿನಿತ್ಯ ತಮ್ಮ ಹಣೆ ಚಚ್ಚಿಕೊಳ್ಳುತ್ತಲೇ ಇದ್ದಾರೆ. ಶಿಕಾರಿಪುರದ ಗಡಿಭಾಗದ ಕಲ್ಮನೆ ಗ್ರಾಮ ಪಂಚಾಯ್ತಿ ಹೇಳಿಕೇಳಿ ಕಾಂಗ್ರೆಸ್ ಆಳ್ವಿಕೆಗೊಳಪಟ್ಟಿದೆ. ಜನ ಯಾವತ್ತೂ ಬಿಜೆಪಿಗೆ ಓಟು ಕೊಟ್ಟವರಲ್ಲ, ಅದೇ ಕಾರಣಕ್ಕೆ ಈಗ ಯಡ್ಡಿ ನೀರು ಕುಡಿಸುತ್ತಿದ್ದಾರೆ. ಬಂದ ನಾನೂರು ಕೋಟಿ ಪ್ಯಾಕೇಜಿನಲ್ಲಿ ಶಿಕಾರಿಪುರದ ಕೊನೇಗಡಿಯ, ಅತ್ಯಂತ ನಿರ್ಲಕ್ಷಿತ ಈ ನಾಲ್ಕು ಹಳ್ಳಿಗಳ ಚಿತ್ರಣವೇ ಬದಲಾಗಬೇಕಿತ್ತು.



ಕುಸಿದ ಶಿವಬಾರ್ ಕಟ್ಟೆ

ಆದರೆ ಯಡ್ಡಿಗೆ ಸವತಿ ಮತ್ಸರ. ಕಲ್ಮನೆಯಲ್ಲಿ ಬಾಕ್ಸ್ ಚರಂಡಿ ನಿರ್ಮಿಸಲು ಬಿಜೆಪಿಯ ಕಳ್ಳ ಕಂಟ್ರಾಕ್ಟರ್ ಒಬ್ಬನಿಗೆ 40 ಲಕ್ಷದ ಒಂದೇ ಒಂದು ಕಾಮಗಾರಿ ಮಂಜೂರಾಗಿದ್ದು ಬಿಟ್ಟರೆ ಇಡೀ ಪಂಚಾಯ್ತಿ ವ್ಯಾಪ್ತಿಗೆ ಇನ್ನೊಂದೇ ನಯಾಪೈಸೆ ಕೊಟ್ಟಿಲ್ಲ. ಕುಡಿಯಲು ನೀರಿಲ್ಲ, ರಸ್ತೆ ಮೊದಲೇ ಇಲ್ಲ, ಇರುವ ಕೆರೆಗಳದ್ದು ಪಿಶಾಚಗತಿ. ಶಾಲೆಗಳಿಲ್ಲ, ಆಸ್ಪತ್ರೆಗಳಿಲ್ಲ, ಯಡ್ಡಿ ಉಪಮುಖ್ಯಮಂತ್ರಿಯಾದರೂ ದುರ್ಗತಿ ಮಾತ್ರ ತಪ್ಪಿಲ್ಲ.

ಪ್ರಧಾನಿಯಾದರೂ ಪಂಚಾಯ್ತಿ ಬುದ್ಧಿ ಬಿಟ್ಟಿಲ್ಲ ಎಂದು ಯಾವ ಯಡ್ಡಿ ದೇವೇಗೌಡರನ್ನು ಹೀಯಾಳಿಸಿದ್ದರೋ ಈಗ ಅವರೇ ದೇವೇಗೌಡರ ಅವತಾರ ತಾಳಿದ್ದಾರೆಂದರೆ-ಯಡ್ಡಿ ಇನ್ನೆಂಥಾ ಚಿಲ್ಲರೆ ಮನುಷ್ಯ?

ಚೆಡ್ಡಿಗಳ ಕಳ್ಳ ಕಂಟ್ರಾಕ್ಟರ್ ಮಾಫಿಯಾ


ರಾಘವೇಂದ್ರ

ಯಡ್ಡಿಯ ಮಕ್ಕಳ ಪೈಕಿ ಕಿರಿಮಗ ವಿಜಯೇಂದ್ರ ಬೆಂಗಳೂರಿನ ಡೀಲುಗಳನ್ನು ಸಂಭಾಳಿಸಿದರೆ, ಶಿವಮೊಗ್ಗ-ಶಿಕಾರಿಪುರದ ಎತ್ತುವಳಿ ನಿಭಾಯಿಸುವವನು ಕುಲಪುತ್ರ ರಾಘವೇಂದ್ರ. ಶಿಕಾರಿಪುರ ಸೇರಿದಂತೆ ಶಿವಮೊಗ್ಗ ಜಿಲ್ಲೆಯೊಂದಕ್ಕೇ ಕೇಂದ್ರದ ವಿದರ್ಭ ಪ್ಯಾಕೇಜ್ ಸೇರಿ ಒಟ್ಟೂ ಎರಡು ಸಾವಿರ ಕೋಟಿ ಸರ್ಕಾರಿ ದುಡ್ಡು ಹರಿದಿದೆ. ಯಡ್ಡಿಯಷ್ಟೇ ದೊಡ್ಡ ಮೊತ್ತದ ಇನ್ನೊಂದು ಪ್ಯಾಕೇಜ್ ಮತ್ತೊಬ್ಬ ಮಂತ್ರಿ ಈಶ್ವರಪ್ಪನವರ ಕೈಸೇರಿದೆ. ದುರಂತವೆಂದರೆ ಶಿವಮೊಗ್ಗ ಶಿಕಾರಿಪುರದ ಏನೊಂದು ಚಿತ್ರಣವೂ ಬದಲಾಗಿಲ್ಲ. ಅದೇ ಕೊಚ್ಚೆ, ಹೊಂಡದ ರಸ್ತೆ, ಕೆರೆಕಟ್ಟೆ; ಯಾವುದೂ ಬದಲಾಗಿಲ್ಲ.

ಹಕೀಕತ್ತೇನೆಂದರೆ ಇಡೀ ಕಾಮಗಾರಿಗಳ ಬೋಗಸ್ ಬಿಲ್ ದಂಧೆಗೆ ಯಡ್ಡಿ ಮಗ ರಾಘವೇಂದ್ರನೇ ಬಾಸ್. ಈತನ ಕೈಕೆಳಗೆ ತೀರ್ಥಹಳ್ಳಿಯ ಕೇಡಿ ಉದಯ ಮತ್ತು ಕುಂದಾಪುರದ ಶರತ್‌ಶೆಟ್ಟಿಯಂಥ ಖದೀಮ ಕಂಟ್ರಾಕ್ಟರ್‌ಗಳಿದ್ದಾರೆ. ಇವರಿಬ್ಬರೂ ಬಿಜೆಪಿಯ ದತ್ತುಪುತ್ರರೇ. ಮೇಲು ನೋಟಕ್ಕೆ ಇವರು ಅಧಿಕೃತ ಕಂಟ್ರಾಕ್ಟರ್‌ಗಳಾದರೂ ಇವರಿಂದ ಉಪಗುತ್ತಿಗೆ ಹಿಡಿದು ಬಿಲ್ಲು ನುಂಗುವ ಬಿಜೆಪಿ ಪುಂಗವರ ಇನ್ನೊಂದು ಹಿಂಡು ಶಿಕಾರಿಪುರದಲ್ಲಿದೆ. ಈ ಪೈಕಿ ಲೋಕಲ್ ಬಿಜೆಪಿ ನಾಯಕ ಭೋಜರಾಜ್ ಪಾಟೀಲ್, ಜಿ.ಪಂ. ಸದಸ್ಯೆ ಶಾಂತಲಾಳ ಗಂಡ ಭೂಕಾಂತನ ತಮ್ಮ ಶಿವಶಂಕರ್, ಮಾಜಿ ಬಿಜೆಪಿ ಎಮ್ಮೆಲ್ಸಿ ಶಾಂತವೀರಪ್ಪನ ಅಣ್ಣ ಪರಮೇಶ್ವರಪ್ಪ, ಆತನ ಮಗ ನಾಗರಾಜ, ಶಾಂತವೀರಪ್ಪನ ಮಗ ರಾಘವೇಂದ್ರ, ಬಿಜೆಪಿ ಕ್ರಿಮಿಗಳಾದ ಜಯಣ್ಣ, ಈತನ ಮಗ ಸುರೇಶ, ಮಹೇಂದ್ರ ಮತ್ತು ದಿವಾಕರ್ ಇತ್ಯಾದಿ ಚೆಡ್ಡಿವೀರರೆಲ್ಲ ಶಿಕಾರಿಪುರದಲ್ಲಿ ಕಂಟ್ರಾಕ್ಟರ್ ಕಾಯಕಕ್ಕಿಳಿದಿದ್ದಾರೆ. ತಮ್ಮ ಕಾಮಗಾರಿಗಳ ಬಗ್ಗೆ ಲೋಕಾಯುಕ್ತದ ತನಿಖೆ, ನ್ಯಾಯಾಂಗ ತನಿಖೆಯ ಭೀತಿ ಹಾಳಾಗಲಿ ಕನಿಷ್ಠ ಆರೆಸ್ಸೆಸ್ ಬೋಧಿಸುವ ದೇಶಭಕ್ತಿಯಾದರೂ ಇದ್ದಿದ್ದರೆ ಇಷ್ಟೊಂದು ನಿರ್ಲಜ್ಜರಾಗಿ ದೋಚುತ್ತಿರಲಿಲ್ಲ.


ವಿಜಯಲಕ್ಷ್ಮಿ

ಪ್ರತಿ ಕಂಟ್ರಾಕ್ಟರನೂ ಯಡ್ಡಿ ಮಗನಿಗೆ ಇಪ್ಪತ್ತು ಪರ್ಸೆಂಟ್ ಕಕ್ಕಲೇಬೇಕು. ಜೊತೆಗೆ ಆಯಾ ಕಾಮಗಾರಿಗೆ ತಕ್ಕಂತೆ ಲೋಕೋಪಯೋಗಿ, ಜಿ.ಪಂ. ಮತ್ತು ನೀರಾವರಿ ಇಲಾಖೆ ಇಂಜಿನಿಯರ್‌ಗಳೆಲ್ಲ ಮಿನಿಮಮ್ ಹದಿನೈದು ಪರ್ಸೆಂಟ್ ಪಾಲನ್ನು ಯಡ್ಡಿ ಮಗನಿಗೆಂದೇ ಎತ್ತಿಡಬೇಕು. ಅಲ್ಲಿಗೆ ಯಡ್ಡಿ ಮಗನೇ 35 ಪರ್ಸೆಂಟ್ ಹೊಡೆದರೆ ಉಳಿಕೆ ಇಂಜಿನಿಯರ್ ಮತ್ತು ಕಂಟ್ರಾಕ್ಟರ್‌ಗಳಿಗೆ ತಲಾ ಇಪ್ಪತ್ತಾದರೂ ಬೇಡವೆ? ಉಳಿದದ್ದು 25 ಪರ್ಸೆಂಟ್ ಮಾತ್ರ. ಎಲ್ಲಾ ಕಳೆದು ಕೊನೆಗೂ ಕೆಲಸಕ್ಕೆ ಬರುವುದು ಕೇವಲ ಹದಿನೈದು ಪರ್ಸೆಂಟ್!

ಇಂಥ ಹಗಲು ದರೋಡೆಯ ವಿರುದ್ಧ ಸದ್ಯ ಶಿಕಾರಿಪುರದಲ್ಲಿ ಸಿಡಿದೆದ್ದ ಏಕೈಕ ದನಿಯೇ ವಿಜಯಲಕ್ಷ್ಮಿ ಕಂಚುಗಾರ. ಇದೊಂದೇ ಕಾರಣಕ್ಕಾಗಿ ಯಡ್ಡಿ ಮಗನೇ ನಡುರಸ್ತೆಯಲ್ಲಿ ಆಕೆಯನ್ನು ಬಡಿದಿದ್ದಾನೆ. ಶಿಕಾರಿಪುರದಲ್ಲಿ ಯಡ್ಡಿ ನಿರಂಕುಶಾಧಿಕಾರ ಹೇಗಿದೆಯೆಂದರೆ ಯಡ್ಡಿ ಮಗನ ಮೇಲೆ ಈತನ ಪೊಲೀಸರು ದೂರು ದಾಖಲಿಸಿಲ್ಲ, ಯಾರೂ ಕೇಳುತ್ತಿಲ್ಲ. ಸಿಡಿದು ನಿಂತ ವಿಜಯಲಕ್ಷ್ಮಿ ಕಂಚುಗಾರ ಬೆನ್ನಿಗೆ ಎಲ್ಲಾ ಪ್ರಜ್ಞಾವಂತರೂ ನಿಲ್ಲಬೇಕಿದೆ.


ಕಟ್ಟಿಗೆ ಹಳ್ಳಿಯನ್ನು ಸ್ವಚ್ಛತಾ ಗ್ರಾಮ ಯೋಜನೆಯಲ್ಲಿ ಕೆಲಸ ಮಾಡದೆ ಮನೆಗೆ ನುಗ್ಗಿದ ಕೆರೆ ನೀರು. ಮಂಜೂರಾದ ಹಣ ಮಾತ್ರ ಗುಳುಂ

ಸರಿಸುಮಾರು 65 ಲಕ್ಷ ರೂಪಾಯಿಯ ಮೆಟಲಿಂಗ್ ಕಾಮಗಾರಿ ನಡೆಯುತ್ತಿದೆ. ತಲಾ 1200 ಮೀಟರ್‌ಗೆ 21.50 ಲಕ್ಷದಂತೆ ದರ ನಿಗದಿ ಮಾಡಿದ ಟೆಂಡರ್ ಯಡ್ಡಿ ಮಗ ರಾಘವೇಂದ್ರನ ಬಂಟ ಮತ್ತು ತೀರ್ಥಹಳ್ಳಿಯ ದಗಲುಬಾಜಿ ಕಂಟ್ರಾಕ್ಟರ್ ಉದಯನಿಗೇ ಸಿಕ್ಕಿದೆ. ಅದೇನೆಂದು ಮೆಟಲಿಂಗ್ ಮಾಡಿದ್ದನೋ!

ಜರಡಿ ಹಿಡಿದಂತೆ ಹಾಕಿದ ಅಷ್ಟೂ ಮೆಟಲಿಂಗ್ ತೂತುಬಿದ್ದಿದೆ. ಚರ್ಚುಗುಂಡಿ ಹರಿಜನ ಕೇರಿ ಮತ್ತು ಬೋವಿ ಕೇರಿಗಳಲ್ಲಿ ಸ್ವಚ್ಛತಾ ಗ್ರಾಮ ಯೋಜನೆಯಲ್ಲಿ ನಡೆದ ಅಷ್ಟೂ ಕಾಮಗಾರಿ ಹೇಗಿದೆಯೆಂದರೆ; ಕೈಯಲ್ಲಿ ಕೆರೆದರೂ ಟಾರು ಕಿತ್ತು ಬರುತ್ತದೆ. ಕಟ್ಟಿಸಿದ ಶೌಚಾಲಯಗಳ ಪಾಡು ಹಂದಿಗೂಡು. ದೊಡ್ಡ ಜೋಗಿಹಳ್ಳಿಯಿಂದ ಚಿಕ್ಕ ಜೋಗಿಹಳ್ಳಿಗೆ ಹೋಗುವ ರಸ್ತೆಯ 3 ಕಿ.ಮೀ. ಕಾಮಗಾರಿಗೆ ಜಡಿದ ಬಿಲ್ಲಿನ ಮೊತ್ತವೇ 65 ಲಕ್ಷ. ಒಂದೂವರೆ ತಿಂಗಳಲ್ಲೇ ರೋಡು ಕೊಚ್ಚೆ ಗುಂಡಿಯಾಗಿದೆ.


ತಾವರೆಕಟ್ಟೆ ಕೆರೆ ಏರಿ ಒಡೆದಿರುವುದು

ಜೊತೆಗೆ ಜೋಗಿಹಳ್ಳಿ ಕೆರೆಯ ನೀರುಕ್ಕಿ ಇಡೀ ಪ್ರದೇಶವೇ ಸರೋವರವಾಗಿಬಿಟ್ಟಿದೆ.

ಹಾಗಾದರೆ ಇದೇ ಜೋಗಿಹಳ್ಳಿ ಕೆರೆಗೆ ಒಂದೇ ವರ್ಷದಲ್ಲಿ ಎರಡು ಬಾರಿ ಹೂಳೆತ್ತಿದ್ದು, ಅದಕ್ಕೊಂದು 21 ಲಕ್ಷ ರೂಪಾಯಿ ಬಿಲ್ಲು ಹಾಕಿದ್ದು ಸುಳ್ಳೆ?

ಶಿಕಾರಿಪುರದ ನಾನೂರು ಕೋಟಿಯ ಪ್ಯಾಕೇಜಿಗಾದ ದುರಂತಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ?

ವಿಧಾನ ಪರಿಷತ್ತಿನಲ್ಲಿ ಯಡ್ಡಿ ಮಾತು ನಂಬಿ ಏಕ್ಕಡ ಪೂಜೆಯ ಅವಕಾಶದಿಂದ ವಂಚಿತರಾದ ಶಾಸಕರಿಗೆ ಏನೆನ್ನಬೇಕು?

ಈಗಲೂ ಕಾಲ ಮಿಂಚಿಲ್ಲ, ಯಡ್ಡಿ ಕ್ಷೇತ್ರದ ನಾನೂರು ಕೋಟಿ ಪ್ಯಾಕೇಜನ್ನು ಲೋಕಾಯುಕ್ತ ತನಿಖೆ ಮಾಡಲಿ. ಕಿಂಚಿತ್ತಾದರೂ ಮಾನ ಎಂಬುದಿದ್ದರೆ ಯಡ್ಡಿಯೇ ಮುಂದಾಗಿ ಅದನ್ನು ತನಿಖೆಗೆ ಒಪ್ಪಿಸಲಿ. ■



ಇದು ಯಡ್ಡಿ ಕಟ್ಟಿಸಿದ ಕಕ್ಕಸ್ಸು!

ಕುಮಾರಣ್ಣನಿಗೆ ಚಡ್ಡಿಗಳಿಂದ ಎಚ್ಚರಿಕೆ ಪತ್ರ

ಜಾತ್ಯತೀತ ಜನತಾದಳವೆಂದು ಪಕ್ಷದ ಪ್ರಣಾಳಿಕೆ ಮಂಡಿಸಿ, ಟ್ರಾಕ್ಟರ್ ಚಿಹ್ನೆ ಪಡೆದು, ಅದರ ದೆಸೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತನ ಸ್ಥಿತಿ ತಲುಪಿದ್ದ ದೇವೇಗೌಡರು, ಚೆನ್ನವ್ವವನ್ನು ನೆನೆಸಿಕೊಂಡು ಆಕೆಯಿಂದಲೇ ನನ್ನ ಮನೆ ಉದ್ಧಾರವಾಯ್ತು, ಮನೆ ತುಂಬ ಮಕ್ಕಳು ಕೊಟ್ಟು ಅವುಗಳನ್ನೆಲ್ಲಾ ನೇರ್ಪು ಮಾಡಿದಳು ಎಂದು ಅರ್ಥ ಮಾಡಿಕೊಂಡರಂತಲ್ಲಾ? ಆ ಕೂಡಲೇ ಬೆಳೆ ಹೊತ್ತ ಮಹಿಳೆ ಚಿಹ್ನೆ ಪಡೆದುಕೊಂಡು, ಧನಕನಕ ವಸ್ತುಗಳ ಗಂಟಿನೊಂದಿಗೆ ಅಧಿಕಾರ, ಐಶ್ವರ್ಯ, ಮದ ಮತ್ಸರಗಳೇ ಪ್ರಾಪ್ತಿಯಾದವಂತಲ್ಲಾ. ಇಷ್ಟೆಲ್ಲಾ ಸವಲತ್ತುಗಳನ್ನು ನಿರಾತಂಕವಾಗಿ ಅನುಭವಿಸುತ್ತಿರಬೇಕಾದರೆ, ಅವರು ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಬೆಂಬಲ ಕೊಟ್ಟರಂತಲ್ಲಾ, ಆದರೆ ತಮ್ಮ ಪಕ್ಷಕ್ಕೆ ಜಾತ್ಯತೀತ ಎಂಬ ಪದ ವಿನಾಕಾರಣ ಅಂಟಿಕೊಂಡಿರುವುದರಿಂದ ಈಗ ನೈತಿಕವಾಗಿ ತುಂಬಾ ಅಪರಾಧವಾಗುವ ಸಂಭವ ಕಂಡು ಬಿಜೆಪಿಗೆ ಕೈಕೊಡುವುದೇ ಸರಿಯೆಂಬ ತೀರ್ಮಾನಕ್ಕೆ ಬಂದಿದ್ದಾರಂತಲ್ಲಾ, ಥೂತ್ತೇರಿ!

* * * * * * * * * *

ಗೌಡರ ತೊಳಲಾಟವನ್ನು ಕರಾರುವಾಕ್ಕಾಗಿ ಗ್ರಹಿಸಿರುವ ಚೆಡ್ಡಿಗಳು ಈಗ ಏನಾದರೂ ಮಾಡಿ ಕುಮಾರಸ್ವಾಮಿಯ ತಲೆ ಸವರಿ, ಇರುವ ಹದಿನಾರು ಕೂದಲನ್ನು ನುಣ್ಣಗೆ ಮಾಡುವಂತಹ ಪತ್ರ ಬರೆದು ಕುಮಾರಣ್ಣನ ಮನೆ ಕಾಂಪೌಂಡಿನೊಳಗೆ ಎಸೆದು



ಹೋಗಿವೆಯಂತಲ್ಲಾ. ಸದರಿ ಪತ್ರ ನಕ್ಸಲರದೇ ಇರಬೇಕೆಂದು ಗ್ರಹಿಸಿದ ಪೊಲೀಸ್ ಪೇದೆಗಳು ಅದನ್ನು ನೇರ ತೆಗೆದುಕೊಂಡು ಹೋಗಿ ಕುಮಾರಣ್ಣನಿಗೆ ಕೊಟ್ಟರಂತಲ್ಲಾ. ಆದರೆ ಇಂತಹ ಯಾವುದೇ ಪತ್ರ, ಪತ್ರಿಕೆ ಓದುವ ಅಭ್ಯಾಸವನ್ನು ಕುಮಾರಣ್ಣ ಇಟ್ಟುಕೊಳ್ಳದೆಯಿರುವ ಪ್ರಯುಕ್ತ, ತಮ್ಮ ಹಿಂಭಾಗದಲ್ಲಿ ನಿಂತಿದ್ದ ಲಕ್ಷ್ಮಯ್ಯನ ಮಗ ಭೋಜಗೌಡನಿಗೆ ಕೊಟ್ಟರಂತಲ್ಲಾ. ಆತನೂ ಅದನ್ನು ಸರಿಯಾಗಿ ಓದದೆ "ಅಯ್ಯೋ, ಇದು ಎಡೂರಪ್ಪನ ಕಡೆ ಶ್ಯಾನುಭೋಗರ ಹುಡುಗ್ರು ಬರದಿರೊ ಲಟ್ರು ಕಣಣ್ಣ, ನೀನೇನು ತಲೆ ಕೆಡಿಸಿಕೊಬೇಡ" ಎಂದನಂತಲ್ಲಾ. ಸದರಿ ಪತ್ರದ ಜೆರಾಕ್ಸ್ ಕಾಪಿಯೊಂದು ನಮಗೂ ಸಿಕ್ಕಲಾಗಿ, ಅದನ್ನು ತಮಗೆ ತೋರದಿದ್ದರೆ ಹೇಗೆ, ಥೂತ್ತೇರಿ!!

* * * * * * * * * *

ಕರ್ನಾಟಕದ ಕಣ್ಮಣಿಯಂತೆ ಕಂಗೊಳಿಸುತ್ತಿರುವ ಕುಮಾರಸ್ವಾಮಿಯವರಿಗೆ ಇದೇ ಕರ್ನಾಟಕದ ತಿಲಕದಂತಿರುವ ಎಡೂರಪ್ಪನ ಅಭಿಮಾನಿಗಳ ಅಂಗಲಾಚಿಕೆಯ ಪ್ರಣಾಮಗಳು. ತಥಾಕಥಿತ ಪತ್ರ ಬರೆದ ಕಾರಣ ತಮಗೂ ಗೊತ್ತಿದೆ. ಸನ್ಮಾನ್ಯ ಎಡೂರಪ್ಪನಿಗಿಂತಲೂ ವಯಸ್ಸಿನಲ್ಲಿ, ಅನುಭವದಲ್ಲಿ, ತಿಳಿವಳಿಕೆಯಲ್ಲಿ ಮತ್ತು ಹೋರಾಟದಲ್ಲಿ ಚಿಕ್ಕವರಾದ ತಮ್ಮನ್ನು ಭಾರತದ ಬಹುದೊಡ್ಡ ಪಾರ್ಟಿಯೊಂದು ಮುಖ್ಯಮಂತ್ರಿಯಾಗಿ ಒಪ್ಪಿಕೊಂಡು ಇಂದಿಗೆ ಹದಿನೆಂಟು ತಿಂಗಳು ತುಂಬುತ್ತ ಬಂದಿವೆ. ಈ ಸಮಯದಲ್ಲಿ ತಮ್ಮ ಹದಿನೆಂಟು ತಿಂಗಳ ಹಿಂದಿನ ವಾಗ್ದಾನವನ್ನು ನೆನಪು ಮಾಡಿಕೊಡುವುದು ನಮ್ಮ ಕರ್ತವ್ಯವಾಗಿ ಪರಿಣಮಿಸಿರುವುದು ತುಂಬಾ ದುರ್ದೈವದ ಸಂಗತಿಯಾಗಿದೆ ಎಂಬುದನ್ನು ನೋವಿನಿಂದ ಹೇಳಬೇಕಾಗಿದೆ.

ಏಕೆಂದರೆ ತಮ್ಮ ಪಿತಾಶ್ರೀಯವರು ಆಡುತ್ತಿರುವ ಆಟ, ಕೊಡುತ್ತಿರುವ ಕಾಟ, ಹೇಳುತ್ತಿರುವ ಹೇಳಿಕೆಗಳನ್ನು ಗಮನಿಸಿದರೆ ಇನ್ನಾವುದೇ ಪಾರ್ಟಿಯವರಾಗಿದ್ದರೂ ಇಷ್ಟರಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಹುಬ್ಬಳ್ಳಿಗೆ ಸೇರುತ್ತಿದ್ದರು. ಸುದೈವಕ್ಕೆ ನಮ್ಮ ಬಿಜೆಪಿ ಜನಕ್ಕೆ ಹಠದ ಮತ್ತು ಕವಾಯಿತಿನ ಹಿನ್ನೆಲೆ ಇರುವುದರಿಂದ ಇನ್ನು ಯಾರೂ ಸೇರಿಲ್ಲ.

* * * * * * * * * *

ಸನ್ಮಾನ್ಯ ಗ್ರಾಮವಾಸಿ ಮುಖ್ಯಮಂತ್ರಿಗಳೆ, ನಿಮ್ಮ ಒಂದೊಂದು ಕಾರ್ಯಕ್ರಮಗಳೂ ಅಜರಾಮರವಾಗಿವೆ. ನೀವು ಮಲಗಿದ ಹಳ್ಳಿಮನೆಗಳು, ಸ್ವೀಕರಿಸಿದ ಅರ್ಜಿಗಳು, ಒಂದೇ ದಿನದಲ್ಲಿ ಯಾರಿಗೂ ಕಾಣದಂತೆ

ಥೂತ್ತೇರಿ

ಯಾಹೂ

ಮಂಗಳೂರಿಗೆ ಹೋಗಿಬಂದಿದ್ದು, ಒಂದೇ ರಾತ್ರಿಯಲ್ಲಿ ಹೈದರಾಬಾದಿಗೆ ಹೋಗಿಬಂದದ್ದು, ಇಂತಹ ಕಾರ್ಯಕ್ರಮಗಳನ್ನು ಬರಲಿರುವ ಯಾವ ಮುಖ್ಯಮಂತ್ರಿಯೂ ಮಾಡಲು ಸಾಧ್ಯವಿಲ್ಲ. ಅದೂಅಲ್ಲದೆ ತಾವು ಕರ್ನಾಟಕ ತಿರುಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವುದನ್ನು ನೋಡಿದರೆ, ಮುಂದಿನ ಇಪ್ಪತ್ತು ತಿಂಗಳೂ ನಿಮ್ಮವೇ ಇರಬಹುದೆಂಬ ಅನುಮಾನ ನಮಗುಂಟಾಗಿದೆ. ಅದೂಅಲ್ಲದೆ, ನಿಮ್ಮ ಪಾರ್ಟಿಯ ಮಂತ್ರಿ ಆ ಹೃದ್ರೋಗಿ ಜಯಕುಮಾರ ಬೇರೆ "ನೀವೇ ಇರುತ್ತೀರಿ. ಅದೂ ನಮ್ಮ ಅಪೇಕ್ಷೆ" ಎಂದು ಹೇಳತೊಡಗಿದ್ದಾರೆ. ಆತನಿಗೆ ತಕ್ಕ ಉತ್ತರ ಕೊಡಲು ಈಗಾಗಲೇ ಆ ಪ್ರಾಂತ್ಯದ ನಮ್ಮ ಪಾರ್ಟಿ ಸ್ವಾಮಿಗಳು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ನೀವೇನಾದರೂ ಆಡಿದ ಮಾತಿಗೆ ತಪ್ಪಿದರೆ, ಇಡೀ ಬಿಜೆಪಿ ಪಾರ್ಟಿಯ ಜಗದ್ಗುರುಗಳು, ಸ್ವಾಮಿಗಳು, ಅರೆಬರೆ ಸ್ವಾಮಿಗಳು, ಎಲ್ಲಾ ಸೇರಿ ಉಗ್ರ ಪ್ರತಿಭಟನೆ ನಡೆಸುತ್ತಾರೆ. ಅಂತಹ ಪ್ರತಿಭಟನೆ ನಿಮಗೆ ಬೇಕೆ, ಈಗಲೇ ಯೋಚಿಸಿ!

* * * * * * * * * *

ದೇವೇಗೌಡರ ತೃತೀಯ ಪುತ್ರರಾದ ಕುಮಾರಣ್ಣನವರೆ, ಪೂಜ್ಯ ತಂದೆಯವರಾದ ದೇವೇಗೌಡರು ರಾಮಕೃಷ್ಣ ಹೆಗಡೆಯವರಿಗೆ ಕೊಟ್ಟ ತೊಂದರೆ, ಮಾಡಿದ ಅನ್ಯಾಯ, ನಮಗೇನೂ ಅನ್ನಿಸಲಿಲ್ಲ. ಏಕೆಂದರೆ ಹೆಗಡೆ ಜಾತ್ಯತೀತ ರಾಜಕಾರಣ ಮಾಡುತ್ತ ಬಿಜೆಪಿ ಸಿದ್ಧಾಂತಗಳಿಂದ ದೂರವಿದ್ದರು. ಆದರೆ ಎಡೂರಪ್ಪನಿಗೆ ನೀವೇನಾದರೂ ಅನ್ಯಾಯ ಮಾಡಿದರೆ ಅದನ್ನು ಹಿಂದೂ ಮನಸ್ಸು ಎಂದೂ ಸಹಿಸಲಾರದು. ಕರ್ನಾಟಕ ರಾಜಕಾರಣದಲ್ಲಿ ನಡೆದ ಈ ಘೋರ ಅನ್ಯಾಯ ಕುರಿತು ನಮ್ಮ ಎಸ್.ಎಲ್. ಭೈರಪ್ಪನಿಂದ ಕಾದಂಬರಿ ಬರೆಸುತ್ತೇವೆ. 'ದೇವಾಯಣ' ಅಥವಾ 'ಕುಮಾರಾಯಣ' ಎಂಬ ಹೆಸರಿನಿಂದ ಹೊರಬರುವ ಈ ಪುಸ್ತಕದಲ್ಲಿ ನಿಮ್ಮಿಂದ ಮೋಸ ಹೋದ ರಾಜಕಾರಣಿಗಳ ಪಾಡನ್ನು ಆಕರ ಗ್ರಂಥಗಳಂತೆ ಬಳಸಿಕೊಳ್ಳುತ್ತೇವೆ. ನಮ್ಮ ಭೈರಪ್ಪ ಬೇಕಿದ್ದರೆ ಒಂದೇ ತಿಂಗಳಲ್ಲಿ ಪುಸ್ತಕ ಬರೆದುಕೊಡಬಲ್ಲರು. ಅವರ ಆವರಣದಲ್ಲಿ ಮುಸ್ಲಿಮರನ್ನು ಹೇಗೆ ಚಿತ್ರಿಸಿದ್ದಾರೋ ಹಾಗೆ ಒಕ್ಕಲಿಗ ಜನಾಂಗವನ್ನು ಚಿತ್ರಿಸಿ ನಾಡಿನ ಜನತೆ ಎದುರು ಕೀಳರಿಮೆಯಿಂದ ನರಳುವಂತೆ ಮಾಡಿಬಿಡುತ್ತಾರೆ. ನಾವೇ ಆ ಪುಸ್ತಕ ಕೊಂಡು ಲಕ್ಷಗಟ್ಟಲೆ ಮಾರುತ್ತೇವೆ. ನೋಡಿ ಯೋಚಿಸಿ. ಇನ್ನೂ ಎರಡು ತಿಂಗಳಿದೆ. ಮತ್ತೊಂದು ವಿಷಯ. ನಮಗೆ ಆ ಎಡೂರಪ್ಪನೆಂಬ ಎತ್ತು ಮುಖ್ಯಮಂತ್ರಿಯಾಗುವುದಕ್ಕಿಂತ ನಮ್ಮ ಬಿಜೆಪಿ ಪೂರ್ಣ ಪ್ರಮಾಣದಲ್ಲಿ ಅಧಿಕಾರಕ್ಕೆ ಬರಬೇಕು. ಅದೇ ನಮ್ಮ ಹಟ.' ಥೂ. ಥೂ. ಥೂತ್ತೇರಿ!!! ■



100 ಕೋಟಿ ಆಸ್ತಿ
ಉಪ್ಪಾರರಿಗೆ ವಂಚನೆ
ಓಂಕಾರಾಶ್ರಮ ಸ್ವಾಹ!



ಕೋಡಗನ ಕೋಳಿ ನುಂಗಿದಂತೆ, ಆಡು ಆನೆಯನ್ನೇ ನುಂಗಿದಂತೆ ಗೋಡೆ ಸುಣ್ಣ ನುಂಗಿದಂತೆ ಬಾಲಗಂಗಾಧರರ ಗ್ಯಾಂಗ್ ನೂರು ಕೋಟಿ ಆಸ್ತಿ ಇರುವ ಓಂಕಾರಾಶ್ರಮವನ್ನೇ ಗುಳುಂ ಮಾಡಲು ಈ ಅಬ್ಬೇಪಾರಿ ಮಧುಸೂಧನನನ್ನು ಎಳೆತಂದು ತಮ್ಮ ಕೈಗೊಂಬೆ ಉತ್ತರಾಧಿಕಾರಿಯಾಗಿಸಿ ತೆರೆಮರೆ ಆಟ ಶುರು ಮಾಡಿದ್ದಾರೆ...

ಕೋಡಗನ ಕೋಳಿ ನುಂಗಿತ್ತಾ... ಅಂತ ನಮ್ಮ ಶಿಶುನಾಳ ಶರೀಫರು ಬಹಳ ಹಿಂದೆಯೇ ನಂಬಲಸಾಧ್ಯ ವಿಡಂಬನಾತ್ಮಕ ಮಾತೊಂದನ್ನು ಹೇಳಿದ್ದರು.

ಅದೀಗ ನಿಜವಾಗಿದೆ.



ಮೊನ್ನೆ ಜುಲೈ 25 ರಂದು ತೀರಿಕೊಂಡ ಓಂಕಾರಾಶ್ರಮದ ಶಿವಪುರಿ ಸ್ವಾಮಿಯ ಸಮಸ್ತ ಆಸ್ತಿ, ನಗ, ನಗದು, ಮೆಹಿಕಲ್‌ಗಳನ್ನೆಲ್ಲಾ ಅತ್ಯಂತ ನಾಟಕೀಯ, ನಾಜೂಕಾದ ರೀತಿಯಲ್ಲಿ ಗುಳುಂ ಮಾಡಲಾಗಿದೆ. ಒಂದು ನೂರು ಕೋಟಿಗೂ ಹೆಚ್ಚಿನ ಮೌಲ್ಯ ಇರುವ ಈ ಆಶ್ರಮ ಈಗ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ವಯೋವೃದ್ಧ ಬಾಲಗಂಗಾಧರ ಸ್ವಾಮಿಯ ಹಿಡಿತಕ್ಕೆ ಸಿಕ್ಕಿದೆ. ತಮ್ಮ ಬಾಲ್ಯದ ಗೆಳೆಯ ಶಿವಪುರಿ ಸ್ವಾಮಿ ನಿಧನರಾದ ತಕ್ಷಣ ಅಲರ್ಟ್ ಆದ ಬಾಲಗಂಗಾಧರರು ಎಲ್ಲಿಂದಲೋ ಏನೋ ಮಧುಸೂಧನಪುರಿ ಸ್ವಾಮಿ ಎಂಬಾತನನ್ನು ಕರೆತಂದು ಇವರೇ ಓಂಕಾರಾಶ್ರಮದ ಉತ್ತರಾಧಿಕಾರಿ ಎಂದು ಪ್ರತಿಷ್ಠಾಪಿಸಿಬಿಟ್ಟಿದ್ದಾರೆ. ಆಶ್ರಮದ ಭಕ್ತರಿಗಾಗಲೀ, ಟ್ರಸ್ಟ್‌ನವರಿಗಾಗಲೀ ಈ ಮಧುಸೂಧನ ಯಾರೆಂಬುದೇ ಗೊತ್ತಿಲ್ಲ ಅಂದರೆ ನಿಮಗೆ ಆಶ್ಚರ್ಯವಾಗಬಹುದು. ಆತ ನಂಜನಗೂಡು ಕಡೆಯ ಬ್ರಾಹ್ಮಣ ಅನ್ನೋ ಒಂದು ವಿಚಾರ ಮಾತ್ರ ಈಗ ಗೊತ್ತಾಗಿದೆ. ಆದರೆ ಮಧ್ಯಾಹ್ನ ಬ್ರಾಹ್ಮಣ ಬಾಲಗಂಗಾಧರರಿಗೆ ಈ ಮಧುಸೂಧನರ ಬಗ್ಗೆ ಇನ್ನು ಜಾಸ್ತಿ ಗೊತ್ತಿದೆ. ಬಜೆಪಿಯ ಭೂಗಳ್ಳ ಮಂತ್ರಿ ಅಶೋಕ್‌ಗೆ, ಮಾಜಿ ಕಾರ್ಪೋರೇಟರ್ ಮುನಿರಾಜುನಿಗೆ, ಇವರಂತ ಅನೇಕ ಖದೀಮರಿಗೆ ಮಧುಸೂಧನ ಶಿವಪುರಿ ಸ್ವಾಮಿಯ ಅಸಲಿ ಉತ್ತರಾಧಿಕಾರಿ ಅಲ್ಲ ಎಂಬುದು ಗೊತ್ತಿದೆ.

ಆದರೇನು

ಕೋಡಗನ ಕೋಳಿ ನುಂಗಿದಂತೆ, ಆಡು ಆನೆಯನ್ನೇ ನುಂಗಿದಂತೆ, ಗೋಡೆ ಸುಣ್ಣ ನುಂಗಿದಂತೆ ಬಾಲಗಂಗಾಧರರ ಗ್ಯಾಂಗ್ 100 ಕೋಟಿ ಆಸ್ತಿ ಇರುವ ಓಂಕಾರಾಶ್ರಮವನ್ನೇ ಗುಳುಂ ಮಾಡಲು ಈ ಅಬ್ಬೇಪಾರಿ ಮಧುಸೂಧನನನ್ನು ಎಳೆತಂದು ತಮ್ಮ ಕೈಗೊಂಬೆ ಉತ್ತರಾಧಿಕಾರಿಯಾಗಿಸಿ ತೆರೆಮರೆ ಆಟ ಶುರು ಮಾಡಿದ್ದಾರೆ.

ಶಿವಪುರಿ ಸ್ವಾಮಿಯ ಅಂತಿಮ ಇಚ್ಛೆಯಂತೆ ಓಂಕಾರಾಶ್ರಮಕ್ಕೆ ಚಿತ್ರದುರ್ಗದ ಹೊಸದುರ್ಗದಲ್ಲಿರುವ ಭಗೀರಥ ಪೀಠದ ಪುರುಶೋತ್ತಮಾನಂದಪುರಿ ಸ್ವಾಮೀಜಿ ಉತ್ತರಾಧಿಕಾರಿ ಆಗಬೇಕಿತ್ತು. ಇವರು ಹಿಂದುಳಿದ ವರ್ಗದ ಉಪ್ಪಾರ ಜನಾಂಗದ ಧರ್ಮಗುರು. ಶಿವಪುರಿ ಸ್ವಾಮಿಯಿಂದಲೇ ದೀಕ್ಷೆ ಪಡೆದು ಓಂಕಾರಾಶ್ರಮದೊಂದಿಗೂ ಒಡನಾಟವಿಟ್ಟುಕೊಂಡಿದ್ದವರು. ಆದರೆ ಜುಲೈ 25 ರಂದು ಅತ್ತ ಶಿವಪುರಿ ಸ್ವಾಮಿ ಪ್ರಾಣ ಬಿಡುತ್ತಿದ್ದಂತೆ ಇಡೀ ಆಶ್ರಮ ಹಾಗೂ ಆಸ್ತಿಪಾಸ್ತಿಗಳ ಮೇಲೆ ತಮ್ಮ ಹಿತೋಟ ಸ್ಥಾಪಿಸಲು ನಿಂತ ಬಾಲಗಂಗಾಧರರು ಥೇಟ್ ಪುಢಾರಿಗಳ ಶೈಲಿಯ ಕಾರ್ಯಾಚರಣೆ ನಡೆಸಿಬಿಟ್ಟರು. ಮತ್ತೊಂದೆಡೆ ಟ್ರಸ್ಟ್‌ನ ಆಡಳಿತಾಧಿಕಾರಿ ಡಿ. ಗಂಗಪ್ಪನವರ ಆಹ್ವಾನದ ಮೇರೆಗೆ ಬಂದಿದ್ದ ಪುರುಷೋತ್ತಮಾನಂದ ಪುರಿ ಸ್ವಾಮಿ ಮತ್ತು ಅವರ ಬೆಂಬಲಿಗರ ಮೇಲೆ ಪೊಲೀಸರನ್ನು ಛೂ ಬಿಟ್ಟು ಆಶ್ರಮದಿಂದ ಹೊರ ತಳ್ಳಿಸಲಾಯಿತು.

ಬಳಿದಾಳೆ ಈಶ

ಅಸಲಿ ವಿಲ್ ಎಲ್ಲಿ?




ಬ್ರಾಹ್ಮಣ ಮಧುಸೂಧನ ಹಾಗೂ ಹೊಸದುರ್ಗದ ಪುರುಷೋತ್ತಮಾನಂದ ಪುರಿ ಸ್ವಾಮಿಗಳ ನಡುವೆ ಈಗ ಓಂಕಾರಾಶ್ರಮದ ಉತ್ತರಾಧಿಕಾರಕ್ಕಾಗಿ ಫೈಟ್ ಶುರುವಾಗಿದೆ. ಸದ್ಯಕ್ಕೆ ಇಬ್ಬರೂ ಶಿವಪುರಿ ಸ್ವಾಮಿಯ ಒಂದೊಂದು ವಿಲ್ ತೋರಿಸುತ್ತಾ ಶಿವಪುರಿ ತಮ್ಮನ್ನೇ ಆರಿಸಿದ್ದರೆಂದು ವಾದಿಸುತ್ತಿದ್ದಾರೆ. ಇದನ್ನು ಸರಿಯಾಗಿ ಬಗೆಹರಿಸುವುದು ಅಂತ ದೊಡ್ಡ ಕೆಲಸವೇನಾಗಿರಲಿಲ್ಲ.

ಉದಾಹರಣೆಗೆ ಈ ಶಿವಪುರಿ ಸ್ವಾಮಿ ಓಂಕಾರಾಶ್ರಮ ಸ್ಥಾಪಿಸುವ ಮೊದಲು ಅದೇ ರಾಜರಾಜೇಶ್ವರಿ ನಗರದಲ್ಲಿರುವ ಕೈಲಾಸಾಶ್ರಮದಲ್ಲಿ ತಿರುಚ್ಚಿ ಸ್ವಾಮಿಯ ಶಿಷ್ಯರಾಗಿದ್ದರು. ಆಗ ಗುರು ಬ್ರಾಹ್ಮಣನೊಬ್ಬನನ್ನು ತನ್ನ ಉತ್ತರಾಧಿಕಾರಿಯಾಗಿ ನೇಮಿಸಲು ಹೊರಟಾಗ ಶಿವಪುರಿ ವಿರೋಧಿಸಿದ್ದರು. ಅದರಲ್ಲಿ ಅರ್ಥ ಇಲ್ಲದಿರಲಿಲ್ಲ. ಆಶ್ರಮದ ಹೆಸರಲ್ಲೇ 'ಕೈಲಾಸ' ಇರುವಾಗ ಅಲ್ಲಿ ಬ್ರಾಹ್ಮಣನಿಗೇನು ಕೆಲಸವಿರಲು ಸಾಧ್ಯ ಹೇಳಿ? ನಂತರ ಶಿವಪುರಿ ಆ ಜಾಗ ಬಿಟ್ಟು ಹೊರಬಂದು 1992 ರಲ್ಲಿ ತಮ್ಮದೇ ಓಂಕಾರಾಶ್ರಮ ಕಟ್ಟಿಕೊಂಡರು. ಅದು ಮುಂದೆ ಬೆಳೆದು ಬೆಳೆದೂ ಶಿವಪುರಿ ತೀರಿಕೊಳ್ಳುವ ವೇಳೆಗೆ ತುರಳ್ಳಿ ಅರಣ್ಯ ಭೂಮಿಗೆ ಹೊಂದಿಕೊಂಡಂತೆ 35 ಎಕರೆಯ ಜಾಗ ಕಬಳಿಸಿಕೊಂಡಿತ್ತು. ಹತ್ತಾರು ಕೋಟಿ ಬೆಲೆಯ ಕಟ್ಟಡಗಳು ತಲೆ ಎತ್ತಿದ್ದವು. ಎಲ್ಲರಿಗೂ ಗೊತ್ತಿರುವಂತೆ ಈ ಶಿವಪುರಿ ಸ್ವಾಮಿ ಆಧ್ಯಾತ್ಮ ಸಾಧನೆಗಿಂತ ರಿಯಲ್ ಎಸ್ಟೇಟ್ ಡೀಲ್‌ಗಳಲ್ಲೇ ಜಾಸ್ತಿ ಮುಳುಗಿರುತ್ತಿದ್ದರು.

ಅವರು ತೀರಿಕೊಂಡ ಹಿಂದಿನ ದಿನವೇ ಡಿ. ಹನುಮಂತಪ್ಪ ಎಂಬ ಆಸಾಮಿ ಯಾವುದೋ ಲ್ಯಾಂಡ್ ಡೀಲ್ ಕುದುರಿಸಲು 1 ಲಕ್ಷ ರೂಪಾಯಿ ತಂದುಕೊಟ್ಟಿದ್ದ. "ನನ್ನ ಲಕ್ಷ ರೂಪಾಯಿ ಎಲ್ಲಿ ಹೋಯಿತು" ಅಂತ ಹನುಮಂತಪ್ಪ ಗೋಳಾಡುತ್ತಿದ್ದರೂ 100 ಕೋಟಿ ಆಸ್ತಿ ಮೇಲೆ ಕಣ್ಣು ಮಡಗಿದ್ದ ಉತ್ತರಾಧಿಕಾರಿಗಳು ಈತನ ಕಂಪ್ಲೆಂಟಿಗೆ ಕಿವಿಗೊಡಲಿಲ್ಲ. ಇಂಥ ಶಿವಪುರಿ ಸ್ವಾಮಿಗೆ ಉತ್ತರಹಳ್ಳಿಯ ಮಾಜಿ ಶಾಸಕ ಎಂ. ಶ್ರೀನಿವಾಸ್‌ರಿಂದ ಹಿಡಿದು ಮಾಜಿ ಕಾರ್ಪೋರೇಟರ್ ಮುನಿರಾಜು, ಸಮಾಜ ಸೇವಕರಂತೆ ಪೋಜ್ ಕೊಡುವ ರಮೇಶ್ ಯಾನೆ ಬಲರಾಮ, ಹೇಮಂತ ಗೌಡ ಎಂಬಿತ್ಯಾದಿ ರಿಯಲ್ ಎಸ್ಟೇಟ್ ಕುಳಗಳ ಪರಿಚಯವಿತ್ತು.

ಇದೇ ಶಿವಪುರಿ 1992 ರಲ್ಲಿ ಸರ್ಕಾರದಿಂದ ಗಾಣಕಲ್ ಸರ್ವೆ ನಂ. 14 ರಲ್ಲಿ 45 ಎಕರೆ ಭೂಮಿ ಮಂಜೂರು ಮಾಡಿಸಿಕೊಂಡು ಆಮೇಲೆ ಅದನ್ನು ಸಿಕಂದರಾಬಾದಿನ ರಾಧಾಕೃಷ್ಣ ರೆಡ್ಡಿ ಎಂಬುವವರಿಗೆ ಮಾರಿಕೊಂಡಿದ್ದ. ಆಮೇಲೂ ಆಶ್ರಮದ ಸುತ್ತಲಿನ ಎಕರೆಗಟ್ಟಲೆ ಜಾಗ ಒತ್ತರಿಸಿಕೊಂಡು ಬೇಲಿ ಸುತ್ತಿಕೊಂಡಿದ್ದ. ಅಲ್ಲಿ ಒಂಚೂರಾದರೂ ಆಶ್ರಮದ ಕಳೆ ಇರಲಿ ಅಂತ ದೇಶದಲ್ಲೇ ದೊಡ್ಡ ಗಡಿಯಾರ, ಸ್ವದೇಶದ ಅತೀ ದ...



ಶಿವಪುರಿ ಆಶ್ರಮದ ಪಕ್ಕದಲ್ಲೇ ಇರುವ ಬಾಲಗಂಗಾಧರರ ಬಿಜಿಎಸ್ ಗ್ಲೋಬಲ್ ಆಸ್ಪತ್ರೆ

ಕೈಲಾಸಾಶ್ರಮದಲ್ಲಿ "ಹರಿ ಓಂ...." ಮಂತ್ರ

ಕೈಲಾಸಾಶ್ರಮ ಎಂಬ ಹೆಸರಾಗಲಿ, ಶಿವಪುರಿ ಸ್ವಾಮಿ ಎಂಬ ಸ್ವಾಮಿಯಾಗಲೀ ಧ್ವನಿಸುವುದು ಶೈವ ಪರಂಪರೆಯನ್ನು ಆದರೆ ಈಗಿನ ನಕಲಿ ಉತ್ತರಾಧಿಕಾರಿ ಮಧುಸೂಧನ 'ಹರಿ ಓಂ....' ಎಂದೇ ಮಾತು ಶುರು ಮಾಡುತ್ತಾರೆ.

ಹರಿ ಅಂದರೆ ವಿಷ್ಣು, ಇವರಿಗೆ ಶಿವನ ಕೈಲಾಸದಲ್ಲೇನು ಕೆಲಸ!

ಈ ಮಧುಸೂಧನ ಸ್ವಾಮಿ ಅರ್ಜೆಂಟಾಗಿ ಕಾವಿ ಹಾಕಿಕೊಂಡು ಕೈಲಾಸಾಶ್ರಮ ವಶಪಡಿಸಿಕೊಂಡಿದ್ದರೂ ಉತ್ತರಾಧಿಕಾರಿ ಜಗಳ ಇಲ್ಲಿಗೇ ನಿಂತು ಹೋಗುವುದಿಲ್ಲ. ಮಧುಸೂಧನರ ಸೀಟು ಇನ್ನೂ ಗ್ಯಾರಂಟಿಯಾಗಿಲ್ಲ. ಆಶ್ರಮದಲ್ಲೀಗ ವಿಶಾಖಪಟ್ಟಣದ ವಿಶ್ವನಾಥನೆಂಬ ಹಳೇ ಗಿರಾಕಿ, ಯೂತ್ ಕಾಂಗ್ರೆಸ್‌ನ ಸೂರ್ಯನಾರಾಯಣ, ಕೆಲ ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರುಗಳು ಮಧುಸೂಧನರ ಬೆನ್ನ ಹಿಂದೆ ನಿಂತಿದ್ದಾರೆ.

"ಜಾರ್‍ರಿ ಈ ಮಧುಸೂಧನ ಸ್ವಾಮಿ, ಇಷ್ಟು ದಿನ ಎಲ್ಲಿದ್ರು, ಶಿವಪುರಿಸ್ವಾಮಿಗೂ ಇವರಿಗೂ ಏನ್ ಸಂಬಂಧ, ಬಾಲಗಂಗಾಧರ ಸ್ವಾಮಿ ಈತನ್ನ ಎಲ್ಲಿಂದ ಹಿಡ್ಕೊಂಡು ಬಂದ್ರು" ಅಂತ ಏನೆಲ್ಲಾ ಕೇಳಿದರೂ ಯಾರೂ ಸರಿಯಾಗಿ ಉತ್ತರಿಸುವುದಿಲ್ಲ.



ಅಸಲಿಗೆ ಈ ಪಟಾಲಂಗೇ ಮಧುಸೂಧನ ಹಿಂದೂಮುಂದೂ ಗೊತ್ತಿಲ್ಲ.

ಯಾರೋ ದೊಡ್ಡ ದೊಡ್ಡವರೆಲ್ಲಾ ಸೇರಿಕೊಂಡು ಏನೋ ಸ್ಕೆಚ್ ಹಾಕಿದ್ದಾರೆ. ಇಲ್ಲೇ ಓಡಾಡಿಕೊಂಡಿದ್ದರೆ ಮುಂದೆ ತಮಗೂ ಏನಾದರೂ ಸರಿಪಾಲು ಸಿಗಬಹುದೂಂತ ಅವರ ನಿರೀಕ್ಷೆ. ಈ ಮಧುಸೂಧನ್‌ಗೂ ತನ್ನನ್ನು ಮುಂದಿಟ್ಟುಕೊಂಡು ಈ ಗ್ಯಾಂಗ್ ಹಾಕಿರುವ ಅಸಲಿ ಸ್ಕೆಚ್ ಏನೆಂದು ಗೊತ್ತಿರುವಂತಿಲ್ಲ. ಈತ ಇಂಜಿನಿಯರಿಂಗ್ ಓದಿದ್ದಾನೆ ಎನ್ನಲಾಗಿದೆ. ಕೆಲ ದಿನ ಆಸ್ಟ್ರೇಲಿಯಾ, ಅಲ್ಲಿ ಇಲ್ಲಿ ಕೆಲಸ ಮಾಡಿಕೊಂಡಿದ್ದು ಜ್ಞಾನ ಬಂದಾಗ ಹಿಮಾಲಯ ಅಂತ ಸುತ್ತುತ್ತಿದ್ದರಂತೆ. ಅದೇ ರೀತಿ ಕೆಲವೊಮ್ಮೆ ಓಂಕಾರಾಶ್ರಮಕ್ಕೂ ಬಂದು ಶಿವಪುರಿ ಸ್ವಾಮಿಯನ್ನು ಭೇಟಿಯಾಗಿ ಹೋಗುವುದೂ ಇತ್ತು. ಇದು ಆಶ್ರಮದ ಭೂಗಳ್ಳರ ಗ್ಯಾಂಗಿಗೂ ಗೊತ್ತಿತ್ತು. ಯಾವಾಗ ಶಿವಪುರಿ ಅಂತ್ಯ ಹತ್ತಿರಾಯಿತೋ ಆಗಲೇ ಪರ್ಯಾಯಗಳನ್ನು ಯೋಚಿಸಿದ್ದ Balu & others ಮಧುಸೂಧನ್ ತಲೆ ಸವರಿ ನಾನೇಳಿದಂತೆ ಕೇಳು, ಆಶ್ರಮ ನಿನ್ನದಾಗುತ್ತೆ ಅಂದಿದೆ. ದಿಕ್ಕಿಲ್ಲದೆ ಪರದೇಶಿಯಂತೆ ಅಂಡಲೆಯುತ್ತಿದ್ದ ಮಧುಸೂಧನ್ ತನಗೂ ಅಂಡೂರಲು ಒಂದು ಜಾಗ ಸಿಕ್ಕಿತಲ್ಲ ಎಂದು ಸುಮ್ಮನಿಸಿದ್ದಾರೆ. ಹೀಗೆ ಅಬ್ರಾಹ್ಮಣ ನೆಲೆಗಟ್ಟಿನ ಆಶ್ರಮಕ್ಕೆ ಬ್ರಾಹ್ಮಣ ಸ್ವಾಮಿಯ ಪ್ರವೇಶವಾಗಿದೆ.

ಈಗ ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲೂ ಬ್ರಾಹ್ಮಣ ಸ್ವಾಮಿಗಳ ಮಿನಿ ಸಾಮ್ರಾಜ್ಯಗಳು ಬಂದಂತಾಯಿತು. ಉತ್ತರದಲ್ಲಿ ಇಸ್ಕಾನ್‌ನ ಮಧು ಪಂಡಿತ ದಾಸ, ದಕ್ಷಿಣದಲ್ಲಿ ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ ಗುರೂಜಿ, ಪಶ್ಚಿಮದ ಓಂಕಾರಾಶ್ರಮದಲ್ಲಿ ಮಧುಸೂಧನ, ಪೂರ್ವದ ಚನ್ನೇನಹಳ್ಳಿಯಲ್ಲಿ ಚಡ್ಡಿಗಳ RSS ಅಡ್ಡೆ.

ಈಗ ಬಾಲಗಂಗಾಧರ ಹಿಡಿತಕ್ಕೆ ಹೋಗಿರುವ ಓಂಕಾರಾಶ್ರಮವನ್ನು ಇನ್ನು ಕೆಲವೇ ವರ್ಷಗಳಲ್ಲಿ ಆದಿ ಚುಂಚನಗಿರಿ ಮಠ ಸ್ವಾಹ ಮಾಡದಿದ್ದರೆ ಕೇಳಿ.

...ಪ್ಪಾರರಿಗೆ ಚೆಡ್ಡಿಗಳ ಮೋಸ



ಪುರುಷೋತ್ತಮಾನಂದಪುರಿ

...ತ್ತಿ ಚತುರ ಅಶೋಕ್ ಇಂಥ ಎಷ್ಟೋ ಕಳ್ಳಾಟ ನಡೆಸಿರುವ ಆಸಾಮಿ!


...ನಾಯಿತೆಂದರೆ ಶಿವಪುರಿ ಸ್ವಾಮಿ ಸತ್ತ ಸುದ್ದಿ ಗೊತ್ತಾದೇಟಿಗೆ ಆಶ್ರಮಕ್ಕೆ ನಾನಾ ...ದ ಜನ ಬಂದು ದಾಳಿ ಇಟ್ಟರು. ಅವರಲ್ಲಿ ಶಿವಪುರಿ ತಮ್ಮ, ನೆಂಟರು, ಲ್ಯಾಂಡ್ ...ಗಳಿಗೆಂದು ಹಣ ಕೊಟ್ಟಿದ್ದವರು, ಉತ್ತರಾಧಿಕಾರಿ ಆಕಾಂಕ್ಷಿಗಳು, ಭೂಗಳ್ಳರು ಹೀಗೆ ...ವೆರೈಟಿ ಜನ ಇದ್ದರು. ಇವರಲ್ಲೇ ಯಾರೋ ಆಶ್ರಮದ ನಗ ನಾಣ್ಯವಿದ್ದ ತಿಜೋರಿ ...ಲು ಯತ್ನಿಸುತ್ತಿದ್ದಾಗ ಚಕ್ಕಂತ ಪ್ರತ್ಯಕ್ಷರಾದ ಅಶೋಕ್ ಎಲ್ಲಾ ರೂಂಗಳಿಗೂ ಬೀಗ ... ಪೊಲೀಸರ ಕೈಗೆ ಕೊಡಿಸಿಬಿಟ್ಟರು. ಉತ್ತರಾಧಿಕಾರಿ ಯಾರೂಂತ ಮೊದಲು ತೀರ್ಮಾನವಾಗಲಿ ಆಮೇಲೆ



ಗಂಗಪ್ಪ

ಅವರಿಗೇ ಬೀಗದ ಕೀ ಕೊಡೋಣ ಎಂದು ನಂಬಿಸಿ ಜನರನ್ನು ಹೊರ ಕಳಿಸಿಬಿಟ್ಟರು. ಈ ಮಧ್ಯೆ ಟ್ರಸ್ಟ್‌ನ ಗಂಗಪ್ಪ ಪುರುಷೋತ್ತಮಾನಂದಪುರಿಗೆ ಒಂದು ಪತ್ರ ಬರೆದು 'ಆಶ್ರಮದ ಉತ್ತರಾಧಿಕಾರಿಯಾಗಿ ಬರಬೇಕು' ಎಂದು ಅಧಿಕೃತವಾಗಿ ಆಹ್ವಾನಿಸಿದ್ದರು. ಅದರಂತೆ ಆಗಸ್ಟ್ 8 ರಂದು ತಮ್ಮ 200 ಬೆಂಬಲಿಗರೊಂದಿಗೆ ಅವರು ಆಶ್ರಮಕ್ಕೆ ಬಂದರು. ಆದರೆ ಅಷ್ಟರಲ್ಲಿ ಬಾಲಗಂಗಾಧರಸ್ವಾಮಿ ಹಾಗೂ ಅಶೋಕ್ ಗ್ಯಾಂಗ್ ಮಧುಸೂಧನರನ್ನು ಪ್ರೊಜೆಕ್ಟ್ ಮಾಡಿತ್ತು. ಹಾಗಾಗಿ ಅಶೋಕ್ ಚಿತಾವಣೆ ಮೇರೆಗೆ ಪೊಲೀಸರು ಆಶ್ರಮಕ್ಕೆ ನುಗ್ಗಿ ಪುರುಷೋತ್ತಮಾನಂದ ಪುರಿಯನ್ನು ಆಚೆ ದೂಡಿಬಿಟ್ಟರು. ಅಲ್ಲಿಗೆ ಶಿವಪುರಿ ಸ್ವಾಮಿಯ ಅಂತಿಮ ಇಚ್ಛೆ ಮಣ್ಣುಪಾಲಾಗಿತ್ತು. ಉಪ್ಪಾರ ಜನಾಂಗದ ಅರ್ಹ ವ್ಯಕ್ತಿ ಪುರುಷೋತ್ತಮಾನಂದರಿಗೂ ಬಿಜೆಪಿಯ ಅಶೋಕ್ ಹಾಗೂ ಒಕ್ಕಲಿಗ ಬಾಲಗಂಗಾಧರಿಂದ ಅನ್ಯಾಯವಾಗಿತ್ತು.

...ಚೆ ಎಂದು ...ತೆಂತವೋ ತಿಕ್ಕಲುಗಳನ್ನು ...ರ್ಜಿಸಿದ್ದ. ಜನ ದಾರಿ ...ದಂತೆ ಅಥವಾ ...ನಿಕ್‌ಗೆ ಹೋಗಿ ...ವಂತೆ ಆಗಾಗ್ಗೆ ...ಕಾರ್ ಹಿಲ್ಸ್‌ಗೆ ಹೋಗಿ ...ತ್ತಿದ್ದರೂ ಶಿವಪುರಿ ...ಮಿ ಮಾತ್ರ ಅಸಲಿ ...ಯಲ್ ಎಸ್ಟೇಟ್ ...ದಗಳನ್ನೇ ...ಂದುವರೆಸಿಕೊಂಡು ...ೀದರು.




ಶಿವಪುರಿಯ ಸಮಾಧಿ

ಅಪರಿಚಿತ ಚಿತ್ರ ವಿಚಿತ್ರ ಹೆಸರುಗಳಿವೆ. ಜೊತೆಗೆ ಶಿವಪುರಿ ಸೋದರ ಡಿ.ವೈ. ನಾಗೇಂದ್ರನೂ ಇದ್ದಾನೆ.

ಅದೇ ವಿಲ್‌ನಲ್ಲಿ ಪುರುಷೋತ್ತಮಾನಂದ ಪುರಿಯೇ ಆಶ್ರಮದ ಉತ್ತರಾಧಿಕಾರಿಯಾಗಬೇಕೆಂತಲೂ, ಈ ಟ್ರಸ್ಟ್ ಅಗತ್ಯ ಬಂದಲ್ಲಿ ತನ್ನ ಬಾಲ್ಯಗೆಳೆಯ ಬಾಲಗಂಗಾಧರ ಸ್ವಾಮಿಯ ಸಲಹೆ ಪಡೆಯಬಹುದೆಂದೂ ಹೇಳಲಾಗಿತ್ತು.

ಆದಿಚುಂಚನಗಿರಿ ಸ್ವಾಮಿಗೆ ಈ ಉತ್ತರಾಧಿಕಾರಿ ವ್ಯವಹಾರದಲ್ಲಿ ತನ್ನ ಬಾಲ ಅಲ್ಲಾಡಿಸಲು ಅವಕಾಶ ಸಿಕ್ಕಿದ್ದೇ ಹೀಗೆ. ಅವರು ಏನೇನು ಲೆಕ್ಕಾಚಾರ ಮಾಡಿದ್ದರೋ ಏನೋ ಯಾರೂ ಕಂಡರಿಯದಿದ್ದ ಮೈಸೂರಿನ ಬ್ರಾಹ್ಮಣ ಮಧುಸೂಧನರನ್ನು ಕರೆತಂದು ಓಂಕಾರಾಶ್ರಮದಲ್ಲಿ ಸ್ಥಾಪಿಸಿದ್ದಾರೆ. ಪ್ರಶ್ನಿಸಿದವರಿಗೆ 'ಶಿವಪುರಿಯ ಒರಿಜಿನಲ್ ವಿಲ್ ಮಧುಸೂಧನರ ಹತ್ತಿರ ಇತ್ತು, ಅದಕ್ಕೆ ಹೀಗೆ ಮಾಡಿದೆ' ಎಂದು ಹಾರಿಕೆಯ ಉತ್ತರ ಕೊಡುತ್ತಿದ್ದಾರೆ. ಓಂಕಾರಾಶ್ರಮದಲ್ಲಿ ತಲೆ ಹಾಕಲು ಬಾಲಗಂಗಾಧರರಿಗೆ ಯಾವ ಹಕ್ಕೂ ಇರಲಿಲ್ಲ. ಈ ಆಶ್ರಮ ಅವರ ಶಾಖಾ ಮಠವೋ ಅಥವಾ ಒಕ್ಕಲಿಗರ ಆಶ್ರಮವೋ ಆಗಿರಲಿಲ್ಲ. ಆದರೆ ನೂರು ಕೋಟಿ ಬೆಲೆಯ ಆಸ್ತಿ ಇದ್ದ, ತಮ್ಮ ಆಸ್ತಿಯ ಪಕ್ಕದಲ್ಲೇ ಇರುವ ಈ ಚಿನ್ನದ ಗಣಿಗೆ ಉಪ್ಪಾರ ಜನಾಂಗದ ಪುರುಷೋತ್ತಮಾನಂದರನ್ನು ತಂದರೆ ಅವರು ತಮ್ಮ ಕಂಟ್ರೋಲ್‌ನಲ್ಲಿ ಇರುವುದಿಲ್ಲ ಎಂಬ ಭೀತಿ ಬಾಲಗಂಗಾಧರರಿಗಿತ್ತು. ಅಶೋಕ್ ಮತ್ತಿತರ ಭೂಗಳ್ಳರಿಗೂ ತಮ್ಮ ಡೀಲ್‌ಗಳಿಗೆ ಮುಂದೆ ಅಡೆತಡೆಯಾಗಬಾರದೆಂಬ ದುರುದ್ದೇಶವೂ ಇತ್ತು. 30 ಲಕ್ಷದಷ್ಟು ಜನಸಂಖ್ಯೆ ಇರುವ ಉಪ್ಪಾರ ಜನಾಂಗದ ಸ್ವಾಮಿಗೆ ಈ ಸಮಸ್ತ ಆಸ್ತಿ, ಆಶ್ರಮ ಬಿಟ್ಟುಕೊಟ್ಟರೆ ಅದು ತಮ್ಮ ಹತೋಟಿಗೆ ಸಿಗಲ್ಲ, ಹಾಗಾಗಿ ಬೇರಿಲ್ಲದ, ಅಲ್ಪಸಂಖ್ಯಾತ ಅಬ್ಬೇಪಾರಿ ಬ್ರಾಹ್ಮಣನೊಬ್ಬನನ್ನು ತಂದು ಉತ್ತರಾಧಿಕಾರಿಯಾಗಿ ಸ್ಥಾಪಿಸಿದರೆ ಎಲ್ಲವೂ ತಮ್ಮ ಕೈಯಳತೆಯಲ್ಲೇ ಇರುತ್ತದೆ ಎಂಬ ದುರಾಲೋಚನೆಯೇ ಈ ಇದೀ ಗಲಾಟೆಗಳಿಗೆ ಕಾರಣವಾಗಿದೆ.

... ಈ ಡೀಲ್‌ಗಳ ನಡುವೆಯೂ ಹಿಂದುಳಿದ ವರ್ಗಗಳ ... ಸ್ವಲ್ಪ ಕಾಳಜಿ ಇದ್ದ ಶಿವಪುರಿ ಕರ್ನಾಟಕದಲ್ಲಿ ...ದಲ ಬಾರಿಗೆ ಉಪ್ಪಾರರಿಗೆ, ದೋಬಿಗಳಿಗೆ, ಕುರುಬ ... ತಮ್ಮ ಮಠಗಳನ್ನು ಸ್ಥಾಪಿಸಿಕೊಳ್ಳಲು ನೆರವಾಗಿದ್ದ ... ಆ ಪ್ರಕ್ರಿಯೆಯಲ್ಲೇ ಹೊಸದುರ್ಗದಲ್ಲಿ ಉಪ್ಪಾರ ...ಾಂಗದವರಿಗೆ ಭಗೀರಥ ...ಠ ಮಾಡಿಸಿಕೊಟ್ಟು ಪುರು...ೋತ್ತಮಾನಂದ ಪುರಿಯ...ನ್ನು ಸ್ವಾಮೀಜಿಯಾಗಿಸಿದ್ದರು. ...ದಿಕ ಆಚರಣೆ, ಆಧ್ಯಾತ್ಮ...ಂದ ದೂರವಿದ್ದ ಅಂತ ...ಪುರಿ ಸ್ವಾಮಿ ಹೋಗಿ ...ೀಗಿ ಬ್ರಾಹ್ಮಣ ಮಧು...ಧನವರನ್ನು ತನ್ನ ಆಶ್ರಮದ ...ತ್ತರಾಧಿಕಾರಿಯಾಗಿ ಆರಿ...ಸು ಹೇಗೆ ಸಾಧ್ಯ ಎಂಬ ...ನುಮಾನ ಬರುವುದು ಈ ...ರಣಗಳಿಗೇನೆ!



OMKAR ASHRAM MAHASAMASTHANA

OMKAR HILLS, SRINIVASAPURA, BANGALORE - 560 060.

PHONE : 86...

DATE: 16-07-07

WILL OF SHIVPURI SWAMY

THIS IS THE LAST WILL AND TESTAMENT of me SHIVPURI SWAMY, aged Sixty years, (Birth name H.Y.NAGARAJ son of Late Shri.R. Yallaiah), Peetadhipathi of Sri Omkar Ashram Mahasamsthana, Omkar Hills, Srinivasapura, Kengeri Hobli, Bangalore, 560 060.

1. I hereby revoke all Wills, codicils and other testamentary dispositions heretofore made by me and declare this to be my last Will and Testament.

2. It is my wish and desire that all my money, both movable properties and immovable properties either in my name or of Omkar Ashram as on the date of my death whatsoever and wheresoever shall be given to and utilized for public good and public charitable purpose. For this purpose a Public Charitable Trust shall be created comprising the below mentioned persons who are all devotees of my Ashrama for completion and maintenance of Sri Dwadasa Jyothirlinga Temple, Sri Lakshmi Temple and other associated temples including the Omkar Hills Ashram after my death by the Executor and Trustee named herunder. The following persons shall be the Trustees for life of the Public Charitable Trust to be created : Sri Sri Sri Purushothamananda puri Swamiji, D.Gangappa, H.C.Neeravari, Gopinath Reddy, D.Y.Nagendra, N.Pathaiah, T.R.Reddy, K.G.Venkataswamy Reddy, M.Hanmaiah, M.Annayappa, Pillaiah Setty, K.Srinivasa Murthy, D.Muniraju all residents of Bangalore.

3. It is my wish that Sri Sri Purushothamananda puri Swamiji of Bhageeratha Peeta, Hosadurga Tq., shall be my religious successor to Omkar Ashram Mahasamsthana and shall head as Honorary Chairman of the Public and Charitable Trust to be created.


4. It is my wish that a statue shall be erected and maintained on my Samadhi after my death.

Sri Shivpuri Swamy

TESTATOR

ಶಿವಪುರಿ ಸ್ವಾಮಿ ಬರೆದಿದ್ದ ವಿಲ್

ಆದರೆ ಶಿವಪುರಿ ಸ್ವಾಮಿ ...ರ್ಮಿಸುವ ಹೊತ್ತಿಗಾಗಲೇ ...ದರ ಪಕ್ಕದಲ್ಲೇ ಆದಿಚುಂಚನ...ಯ BGS Global ...ospital ತಲೆ ಎತ್ತಿತ್ತು. ...ವಪುರಿ ಜೊತೆ ರಿಯಲ್ ...ಸ್ಟೇಟ್ ಬಿಜಿನೆಸ್ ಕೊಡು ...ಕೊಳ್ಳುವಿಕೆ ಇನ್ನಷ್ಟು ವಿಸ್ತರಿಸಿತ್ತು. ...ಗಾಗಿ ಶಿವಪುರಿ ನಿಧನರಾ...ಗ ಆಶ್ರಮದ ಉತ್ತರಾಧಿಕಾರಿ ಯಾರಾಗಬೇಕೆಂಬುದನ್ನು ...ರ್ಧರಿಸಲು ಬಾಲಗಂಗಾಧರಸ್ವಾಮಿ, ಸಚಿವ ಅಶೋಕ್ ...ಮತ್ತಿತರರೇ ಜಾಸ್ತಿ ತಲೆ ಕೆಡಿಸಿಕೊಂಡಿದ್ದಾರೆ. ಶಿವಪುರಿ ...ವು ಸಾಯುವ ಕೇವಲ 10 ದಿನಗಳ ಹಿಂದಷ್ಟೆ ಒಂದು ...ಲ್ ಬರೆದಿಟ್ಟಿದ್ದರು. ಅದರಲ್ಲಿ ಹೊಸದುರ್ಗದ, ಪುರುಷೋ...ಮಾನಂದ ಪುರಿ ಅಧ್ಯಕ್ಷ...ಗಿಯೂ, ನಿವೃತ್ತ ಐಎಎಸ್ ...ಧಿಕಾರಿ ಡಿ. ಗಂಗಪ್ಪ ಸೇರಿ ...ತೆ ಎಂಟತ್ತು ಜನರಿರುವ ...ಸ್ಟ್ ಒಂದನ್ನು ರಚಿಸಿ ಅವರೇ ...ಮುಂದ ವ್ಯವಹಾರ...ಗಳನ್ನು ನೋಡಿಕೊಳ್ಳ...ಬೇಕೆಂದೂ ಸ್ಪಷ್ಟವಾಗಿ ತಿಳಿಸಿ...ದ್ದರು. ಈ ಟ್ರಸ್ಟ್‌ನಲ್ಲಿ ಶಾಸಕ ... [illegible] ... ಕೆ.ಜಿ. ವೆಂಕಟಸ್ವಾಮಿ ರೆಡ್ಡಿ... ಹೀಗೆ ಅನೇಕ ಅವತಾರ ಪುರುಷರಿಂದಲೇ ತಾನೇ!



ಕೂತಕವಾಗಿ ನಿರ್ಮಾಣವಾಗುತ್ತಿರುವ ಭರ್ಜರಿ ದೇವಸ್ಥಾನ

ಕೋಡಗನ ಕೋಳಿಯೇ ನುಂಗುವ ಪವಾಡಗಳು ನಡೆಯುವುದು ಇಂಥ ಅವತಾರ ಪುರುಷರಿಂದಲೇ ತಾನೇ!

ಬಳ್ಳಾರಿ ಜಿಲ್ಲೆ: ಮಾಜಿ ಮಂತ್ರಿಯ ಕುತಂತ್ರಿ ಮಕ್ಕಳು

ಈಗ ಈತನ ವಯಸ್ಸು ತೊಂಭತ್ತು ಇರಬಹುದು. ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲ್ಲೂಕು, ಕೊಟ್ಟೂರು ಕ್ಷೇತ್ರದಿಂದ ಶಾಸಕನಾಗಿ ಗೆದ್ದು ಗುಂಡೂರಾವ್ ಮುಖ್ಯಮಂತ್ರಿಯಾಗಿದ್ದಾಗ ಈತ ಸಾರಿಗೆ ಮಂತ್ರಿಯಾಗಿದ್ದ. ಬೆಂಗಳೂರು ಮಹಾನಗರ ಪಾಲಿಕೆಯ ಬಸ್ ನಿಲ್ದಾಣವನ್ನು ಈತನೇ ಉದ್ಘಾಟಿಸಿದ್ದನಂತೆ(?) ಈತನೇ ಮಾಜಿ ಮಂತ್ರಿ ಸದ್ಯೋಜಾತಪ್ಪ, ಮಂತ್ರಿಯಾಗಿದ್ದಾಗ ಈತ ಗುಡಿಸಿ ಗುಡ್ಡೆಹಾಕಿದ್ದ ಅಕ್ರಮ ಸಂಪತ್ತು ಸದ್ಯೋಜಾತಪ್ಪನ ಐದು ಮಂದಿ ಕೇವಲುಗಾರ ಮಕ್ಕಳಿಂದ ಕರಗಿಹೋಗಿ ಈಗ ಅಲ್ಪಸ್ವಲ್ಪ ಉಳಿದುಕೊಂಡಿದೆ. ಕಂಡವರ ದುಡ್ಡಿನಲ್ಲಿ ಮಜಾ ಉಡಾಯಿಸುವ ಕುತಂತ್ರವನ್ನು ಕಂಡುಕೊಂಡಿರುವ ಮಾಜಿ ಮಂತ್ರಿಯ ಈ ಕಂತ್ರಿಮಕ್ಕಳು ಅವರಿವರ ತಲೆಯ ಮೇಲೆ ಕೈಇಟ್ಟು ಡೀಲಿಂಗ್ ಮಾಡಿಕೊಳ್ಳುವ ಕಸುಬನ್ನು ಆವಿಷ್ಕರಿಸಿಕೊಂಡಿದ್ದಾರೆ.

ಎಂ.ಎಂ.ಜೆ. (ಮಿರಾಳಗಟ್ಟ ಮಠದ ಜಾಗಟಗೇರಿ) ಫ್ಯಾಮಿಲಿ ಎಂದರೆ ಇಲ್ಲಿನ ಜನರು ಬೆಚ್ಚಿ ಬೀಳುತ್ತಾರೆ. ಇದಕ್ಕೆ ಮಾಜಿ ಮಂತ್ರಿ ಸದ್ಯೋಜಾತಪ್ಪನ ಜನಪೀಡಕ ಮಕ್ಕಳೇ ಮೂಲಕಾರಣ. ಕೊಟ್ಟೂರಿನ ಎ.ಪಿ.ಎಂ.ಸಿ. ಮಾರುಕಟ್ಟೆ, ಪಟ್ಟಣ ಪಂಚಾಯ್ತಿ, ರೈತ ಸೇವಾ ಸಹಕಾರ ಸಂಘ, ನಾಟಕ ಕಲಾಕೇಂದ್ರ ಇವುಗಳೆಲ್ಲವೂ ಎಂ.ಎಂ.ಜೆ. ಫ್ಯಾಮಿಲಿಯ ವಸೂಲಿಬಾಜಿಯ ಅಡ್ಡೆಗಳಾಗಿ ಪರಿಣಮಿಸಿವೆ–ಇಲ್ಲಿನ ರಾಜಕೀಯ ಪಕ್ಷಗಳ ಆಧಿಪತ್ಯವೂ ಕೂಡಾ ಎಂ.ಎಂ.ಜೆ. ಫ್ಯಾಮಿಲಿಗೇ ಅಂಕಿತವಾಗಿದೆ. ಎಂ.ಎಂ.ಜೆ. ಹರ್ಷವರ್ಧನ್, ಸತ್ಯಪ್ರಕಾಶ, ಚಿತ್ತರಂಜನ, ಕುಮಾರಸ್ವಾಮಿ ಎಂಬ ಪೀಡಕ ಸಹೋದರರ ಹಾವಳಿಯಿಂದಾಗಿ ಮಾನವಂತರ ಬದುಕುಗಳು ಮೂರಾಬಟ್ಟೆಯಾಗಿ ಹೋಗಿದೆ.

ಎಂ.ಎಂ.ಜೆ. ಕುಟುಂಬದ ಪಂಚ ಪಾಂಡವರು

ಮಾಜಿ ಮಂತ್ರಿ ಸದ್ಯೋಜಾತಪ್ಪನ ಮಕ್ಕಳಲ್ಲಿ ಮೊದಲನೆಯವನು ಸ್ವರೂಪಾನಂದ. ವೃತ್ತಿಯಲ್ಲಿ ಈತ ವಕೀಲ. ಎರಡನೆಯವನು ಸತ್ಯಪ್ರಕಾಶ ಇವನು ಜೆಡಿಎಸ್ ನಾಯಕ ಮತ್ತು ಜೆಡಿಎಸ್ ಯುವ ಘಟಕದ ರಾಜ್ಯ ಕಾರ್ಯದರ್ಶಿ. ಜನ ಬೆಂಬಲವಿಲ್ಲದಿದ್ದರೂ ತನ್ನ ಸೈಲೆಂಟ್ ಪುಢಾರಿಗಿರಿಯಿಂದಾಗಿ ಕುಖ್ಯಾತಿ ಗಳಿಸಿದ್ದಾನೆ. ಈತನ ಭಾಗಕ್ಕೆ ಬಂದಿದ್ದ ಒಂದು ಚಿತ್ರಮಂದಿರವನ್ನು ಲೀಸ್‌ಗೆ ಕೊಟ್ಟು, 'ನಾಟಕ ಕಲಾಕೇಂದ್ರ'ದಿಂದ ಪ್ರತಿಷ್ಠಿತರನ್ನು ವೇದಿಕೆ ಗಳಿಗೆ ಕರೆಸಿ, ಹಣ ಸಂಗ್ರಹಿಸಿ, ಲೆಕ್ಕ ನೀಡದೆ ಖರ್ಚು ಮಾಡುವುದರಲ್ಲಿ ಮಗ್ನನಾಗಿದ್ದಾನೆ. ಮೂರನೆಯವನು ಚಿತ್ತರಂಜನ್ –ಈತ ಕೊಟ್ಟೂರು ಪಟ್ಟಣ ಪಂಚಾಯ್ತಿಯ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಪುಢಾರಿಯಾಗಿದ್ದು ಕೊಂಡೇ ವರ್ತಕ ವೃತ್ತಿಯನ್ನು ಚಾಲ್ತಿಯಲ್ಲಿಟ್ಟುಕೊಂಡಿದ್ದಾನೆ. ನಾಲ್ಕನೆಯವನು ಹಾರ್ಡ್‌ಕೋರ್ ಹರ್ಷವರ್ಧನ–ಇವನು ಮಟ್ಕಾ ದೊರೆಗಳಿಗೆ ಕಿಂಗ್, ಕ್ರಿಕೆಟ್‌ಬುಕ್ಕಿ, ಲಾಭದಾಸೆಗಾಗಿ ಪಕ್ಷದಿಂದ ಪಕ್ಷಕ್ಕೆ ನೆಗೆಯುವ ಚಾಂಪಿಯನ್ ಕೂಡಾ. ಸದ್ಯಕ್ಕೀಗ ಬಿಜೆಪಿಯಲ್ಲಿದ್ದಾನೆ. ಎಂ.ಎಂ.ಜೆ. ಫ್ಯಾಮಿಲಿಗೆ ಅಪಕೀರ್ತಿ ತಂದ ಪ್ರಧಾನ ವ್ಯಕ್ತಿಯಾಗಿದ್ದಾನೆ. ಇವನ ಉಪಟಳಕ್ಕೆ ರೋಸಿಹೋದ ಪೊಲೀಸರು 2004 ರಲ್ಲಿ ಇವನನ್ನು ರೌಡಿ ಲಿಸ್ಟಿಗೆ ಸೇರಿಸಿದ್ದಾರೆ. ಐದನೆಯವನೇ ಕುಮಾರಸ್ವಾಮಿ. ಇವನು ರೇಣುಕಾಚಾರ್ ಅಂಡ್ ರೆಸ್ಟೋರೆಂಟ್ ಮಾಲೀಕ, ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷನಾಗಿದ್ದಾಗ ರೈತರ ಹೆಸರಿನಲ್ಲಿ ಸಾಲ ಎತ್ತಿ ಲಕ್ಷಗಟ್ಟಲೆ ಹಣ ನುಂಗಿದ ಆಪಾದನೆ ಹೊತ್ತಿದ್ದಾನೆ. ಕನ್ನಡ ರಕ್ಷಣಾ ವೇದಿಕೆಯ ಸ್ಥಳೀಯ ಅಧ್ಯಕ್ಷನೂ ಇವನೇ ಆಗಿದ್ದಾನೆ. ಈ ಐದು ಮಂದಿ ಅಣ್ಣತಮ್ಮಂದಿರು ಲಾಭದಾಸೆಗಾಗಿ ಬೇರೆಬೇರೆ ಪಕ್ಷಗಳಲ್ಲಿದ್ದು, ಪರಸ್ಪರ ವಿರೋಧಿಗಳಂತೆ ಜನರಿಗೆ ಕಂಡರೂ ಕೂಡಾ, ಹಂಚಿಕೆ ಹಾಗೂ ವಂಚನೆಯ ವಿಷಯದಲ್ಲಿ ಪರಮ ಐಕ್ಯತೆಯನ್ನು ಕಾಪಾಡಿಕೊಂಡಿದ್ದಾರೆ.

ಹರ್ಷವರ್ಧನನೆಂಬ ಕೆಟ್ಟ ಕ್ರಿಮಿ

ಹರ್ಷವರ್ಧನನ ಪಾತಕಗಳ ಪೋಷಣೆಗಾಗಿ ಇವನ ಸುತ್ತ ಸದಾ ನಾಲ್ಕು ಮಂದಿ ಇರುತ್ತಾರೆ. ಇವರಲ್ಲೊಬ್ಬನ ಅಡ್ಡಹೆಸರು ಡಾನ್ (ಉರುಬಿದರೆ ಬಿದ್ದು ಹೋಗುವಂತಿದ್ದಾನೆ) ಇನ್ನೊಬ್ಬ ಎಂಟಣಿ (ಎಂಟಾಣೆ) ಮತ್ತೊಬ್ಬ ಕಲ್ಡಿ (ಕರಡಿ). ಇವನು ಅಕ್ಕಿ ವ್ಯಾಪಾರಿ, ಮಗದೊಬ್ಬ ಜವಳಿ. ಹೊತ್ತು ಹುಟ್ಟುವುದು ತಡವಾಗಬಹುದೇನೊ? ಆದರೆ ಹರ್ಷವರ್ಧನನ ಪಾತಕಿಕ ಕಾರ್ಯಗಳಿಗೆ ದಿನದ ಪ್ರತಿ ನಿಮಿಷವೂ ಕರಾರುವಾಕ್ಕಾಗಿ ಇವರು ಹಾಜರಿರುತ್ತಾರೆ. ಗಂಡ-ಹೆಂಡತಿ ಜಗಳದಿಂದ ಹಿಡಿದು ಕೊಲೆ, ಸುಲಿಗೆ, ಅತ್ಯಾಚಾರಗಳಂತಹ ಕೇಸುಗಳಲ್ಲಿ ಹರ್ಷವರ್ಧನ ವಸೂಲಿಗಾಗಿ ಪಂಚಾಯ್ತಿ ಮಾಡುವುದಲ್ಲದೆ, ಊರಿನ ನೆಮ್ಮದಿ, ಶಾಂತಿಯನ್ನು ಕಲಕಿ, ಜನಾಂಗೀಯ ಪ್ರಚೋದನೆಗಳನ್ನೂ ಸಹ ಇವನು ವ್ಯವಸ್ಥಿತವಾಗಿ ಮಾಡುತ್ತಾನೆ. ಕೊಟ್ಟೂರಿನ ವರ್ತಕರು, ಸಣ್ಣ ರೈತರು, ಗ್ರಾಮ ಮತ್ತು ಪಟ್ಟಣ ಪಂಚಾಯ್ತಿ ಸದಸ್ಯರು, ಸೀಮೆಎಣ್ಣೆ ಮಾರಾಟಗಾರರು ಕೊನೆಗೆ ದಲ್ಲಾಳಿಗಳೂ ಸಹ ಇವನ ಹಿಂಸೆಗೆ ಬಲಿಯಾಗಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಟಿಕೆಟ್ ವಂಚಿತನಾಗಿ

ಸೊಂಡೂರಿನ ಗಣಿ ಉದ್ಯಮಿ ಕಾರ್ತಿಕೇಯ ಘೋರ್ಪಡೆಯೊಂದಿಗೆ ಹತ್ತಾರು ಲಕ್ಷಗಳ ಹೊಂದಾಣಿಕೆಗಾಗಿ ಪಾಮಿಲಿಯಾದ ಹರ್ಷವರ್ಧನ ಪಕ್ಷೇತರನಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಮಕಾಡೆ ಬಿದ್ದವನು.

ಹರಾಳು ಗ್ರಾಮದ ಜೋಗೇರ ಭರಮಪ್ಪನ ಕೊಲೆ

ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರಿಗೆ ನಾಲ್ಕೈದು ಕಿ.ಮೀ. ದೂರವಿರುವ ಹರಾಳು ಎಂಬ ಗ್ರಾಮದಲ್ಲಿ ಜು. 19 ರಂದು ಜೋಗೇರ ಭರಮಪ್ಪ ಎಂಬ ಹುಡುಗನ ಕೊಲೆಯಾಗಿದೆ. ಜೋಗೇರ ಭರಮಪ್ಪನ ಸೋದರ ಸಂಬಂಧಿ ಜೋಗೇರ ಪ್ರಭು ಎನ್ನುವವನು ಈ ಹತ್ಯೆಯನ್ನು ಮಾಡಿದ್ದಾನೆ. ಪ್ರೀತಿಗೆ ಸಂಬಂಧಿಸಿದ ವಿಷಯದಲ್ಲಿ ತ್ರಿಕೋಣ ಸ್ಪರ್ಧೆ ಏರ್ಪಟ್ಟದ್ದೇ ಈ ಕೊಲೆಗೆ ಕಾರಣವಾಗಿದೆ. ಹರಾಳು ಗ್ರಾಮದ ನಾಗರತ್ನ (ಹೆಸರು ಬದಲಾಯಿಸಿದೆ) ಜೋಗೇರ ಭರಮಪ್ಪನನ್ನು ಪ್ರೀತಿಸುತ್ತಿದ್ದಳು, ಆದರೆ ನಾಗರತ್ನಳನ್ನು ಇಷ್ಟಪಟ್ಟಿದ್ದ ಪ್ರಭು ಆಕೆಯನ್ನು ಬಲವಂತ ಮಾಡಲು ಹೋಗಿ ಮೂತಿಗಿಕ್ಕಿಸಿಕೊಂಡಿದ್ದ. ಇದರಿಂದಾಗಿ ತನ್ನ ಪ್ರೀತಿಗೆ ಅಡ್ಡಿಯಾಗಿರುವ ಭರಮಪ್ಪನನ್ನು ಮುಗಿಸಿಬಿಡಲು ತೀರ್ಮಾನಿಸಿದ ಪ್ರಭು ಜು. 19 ರಂದು ಹೊಲಕ್ಕೆ ಬಿತ್ತಿದ ಬೀಜಗಳನ್ನು ತಿನ್ನಲುಬರುವ ಹಂದಿಗಳನ್ನು ಕಾಯಲು ಭರಮಪ್ಪನೊಂದಿಗೇ ಹೊಲಕ್ಕೆ ಹೋಗಿದ್ದಾನೆ. ಭರಮಪ್ಪನಿಗೆ ಚೆನ್ನಾಗಿ ಮದ್ಯಪಾನ ಮಾಡಿಸಿ ಕರೆದುಕೊಂಡು ಹೋಗಿದ್ದ ಪ್ರಭು, ಭರಮಪ್ಪನ ಪಕ್ಕದಲ್ಲೇ ಮಲಗಿದ್ದು ಸರಿರಾತ್ರಿಯಲ್ಲಿ ಎದ್ದು ಭರಮಪ್ಪನ ಗಂಟಲ ಭಾಗಕ್ಕೆ ಮಚ್ಚಿನಿಂದ ಹೊಡೆದಿದ್ದಾನೆ. ನಂತರ ಸ್ವಲ್ಪ ಹೊತ್ತು ಪಕ್ಕದ ಹೊಲದಲ್ಲಿದ್ದು ಮತ್ತೆ ವಾಪಸ್ ಬಂದು ಭರಮಪ್ಪ ಸತ್ತಿಲ್ಲದಿರಬಹುದೆಂಬ ಅನುಮಾನದಿಂದ, ಗಂಟಲು ಭಾಗವನ್ನು ಮತ್ತೆ ಕೊಯ್ದಿದ್ದಾನೆ.

ಕೊಲೆ ನಡೆದ ದಿನದಿಂದ ತಪ್ಪಿಸಿಕೊಂಡಿದ್ದ ಪ್ರಭು ನಂತರದಲ್ಲಿ ಪೊಲೀಸರಿಗೆ ಸಿಕ್ಕು, ತಾನು ಮಾಡಿದ ತಪ್ಪನ್ನು ಪೊಲೀಸರು ಮತ್ತು ಪತ್ರಕರ್ತರ ಎದಿರು ಸವಿಸ್ತಾರವಾಗಿ ಹೇಳಿ ತಾನೇ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದ. ಸಿ.ಪಿ.ಐ. ಹರೀಶ್ ರೆಡ್ಡಿ ಈ ಬಗ್ಗೆ ಸರಿಯಾಗಿಯೇ ತನಿಖೆ ನಡೆಸಿ ರಕ್ತದ ಕಲೆಗಳಾಗಿದ್ದ ಪ್ರಭುವಿನ ಚಪ್ಪಲಿ ಮತ್ತು ಬಟ್ಟೆಗಳನ್ನು ವಶಪಡಿಸಿಕೊಂಡು ಕೊಲೆ ಕೇಸಿನಲ್ಲಿ ಜೋಗೇರ ಪ್ರಭುವನ್ನು ಜೈಲಿಗೆ ಕಳಿಸಿದ್ದಾರೆ.

ಭರಮಪ್ಪನ ಕೊಲೆ ಕೇಸಿನಲ್ಲಿ ಹರ್ಷವರ್ಧನ್ ಎಂಟ್ರಿ

ಡೀಲಿಂಗ್ ದೊರೆ ಹರ್ಷವರ್ಧನ್ ಈ ಕೊಲೆ ಕೇಸಿನಲ್ಲಿ ತಕ್ಷಣ ಎಂಟ್ರಿ ಪಡೆದುಕೊಂಡಿದ್ದಾನೆ. ಇವನು ಮೊದಲು ಮಾಡಿದ ಕೆಲಸವೇನೆಂದರೆ ಕೊಲೆ ಕೇಸನ್ನು ಮುಚ್ಚಿಹಾಕಿಸುತ್ತೇನೆಂದು ಹೇಳಿ ಕೊಲೆ ಮಾಡಿದ್ದ ಪ್ರಭು ಕುಟುಂಬದೊಂದಿಗೆ ಡೀಲಿಗಿಳಿದಿದ್ದು, ತನ್ನ ಬದ್ಧವೈರಿ, ಹರಾಳು ಗ್ರಾಮದ ಕೂಡ್ಲಿಗಿ ತಾ.ಪಂ. ಮಾಜಿ ಅಧ್ಯಕ್ಷ ಕೊಟ್ರುಗೌಡ ಎಂಬಾತನ ಮಗ ವಾಗೀಶ ಮತ್ತವನ ಸ್ನೇಹಿತ ಅಡಿವೆಪ್ಪ ಎಂಬೀರ್ವರ ಮೇಲೆ ಕೊಲೆ ಕೇಸು ಹೊರಳಿಸಲು ಪೊಲೀಸರ ಮೇಲೆ ಒತ್ತಡ ತಂದ. ಮೂಲತಃ ಪುಂಡರಾಗಿದ್ದ ವಾಗೀಶ ಮತ್ತು ಅಡಿವೆಪ್ಪರನ್ನು ತೀವ್ರವಾಗಿ ವಿಚಾರಣೆ ನಡೆಸಿದ ಪೊಲೀಸರು ಕೊಲೆಯಲ್ಲಿ ಈ ಈರ್ವರು ಭಾಗಿಯಾಗಿಲ್ಲವೆಂಬ ತೀರ್ಮಾನಕ್ಕೆ ಬಂದರು. ಅದೇ ಹೊತ್ತಿಗೆ ಜೋಗೇರ ಪ್ರಭು ತಾನು ಮಾಡಿದ ಕೊಲೆಯನ್ನು ನೇರವಾಗಿ ಒಪ್ಪಿಕೊಂಡಿದ್ದರಿಂದ ಪ್ರಭು ಕುಟುಂಬದಿಂದ ಹರ್ಷವರ್ಧನನಿಗೆ ಸಿಗಬೇಕಾಗಿದ್ದ ಇನಾಮು ಕೈತಪ್ಪಿಹೋಯಿತು. ತಕ್ಷಣ ರಿವರ್ಸ್ ಗೇರಿನಲ್ಲಿ ಬಂದ ಹರ್ಷವರ್ಧನ್ ಕೊಟ್ಟೂರು ಎ.ಪಿ.ಎಂ.ಸಿ. ಚುನಾವಣೆಯಲ್ಲಿ ತನ್ನ ಬದ್ಧ ವಿರೋಧಿಯಾಗಿದ್ದ ಹರಾಳು ಕೊಟ್ರುಗೌಡನನ್ನು ಹಣಿಯಲಾಗದಿದ್ದುದಕ್ಕೆ ಕಂಗಾಲಾಗಿ ಗೃಹ ಮಂತ್ರಿ ಎಂ.ಪಿ. ಪ್ರಕಾಶ್, ಕೊಟ್ರುಗೌಡ ಹಾಗೂ ಪೊಲೀಸರು ಶಾಮೀಲಾಗಿ ಪರಿಶಿಷ್ಟ ಜನಾಂಗದವರಿಗೆ ಅನ್ಯಾಯ ಮಾಡಿದ್ದಾರೆ' ಎನ್ನುವ ಹುಯಿಲೆಬ್ಬಿಸಿದ್ದಾನೆ.

ಪೊಲೀಸರು ಕೊಟ್ರುಗೌಡನೊಂದಿಗೆ ಶಾಮೀಲಾಗಿದ್ದಾರೆಂದು ಪೊಲೀಸರ ವಿರುದ್ಧ ಜು. 26 ರಂದು ಉಗ್ರ ಹೋರಾಟವನ್ನು ಹಮ್ಮಿಕೊಂಡಿರುವುದಾಗಿ ಹರ್ಷವರ್ಧನ್ ಕರಪತ್ರವನ್ನು ಮುದ್ರಿಸಿ ಕೊಟ್ಟೂರಿನ ಪ್ರತಿ ಅಂಗಡಿ ಮನೆಮನೆಗೂ ಇವುಗಳನ್ನು ಹಚ್ಚಿಸಿದ. ಇನ್ನೊಂದು ವಿಶೇಷವೇನೆಂದರೆ ಜು. 26 ರಂದು ಹರ್ಷವರ್ಧನನ್ನು ಸರಿಯಾಗಿ ಹಣಿಯಲು ಪೊಲೀಸರೂ ನಿರ್ಧರಿಸಿದ್ದರು. ಈ ವಿಷಯವನ್ನು ಹೇಗೋ ತಿಳಿದುಕೊಂಡು ಹರ್ಷವರ್ಧನ ಮುಕುಳಿ ಅದುಮಿಕೊಂಡು ಸುಮ್ಮನಾದ. ಆ ದಿನ ಪ್ರತಿಭಟನೆ ನಡೆಯಲಿಲ್ಲ.

ಹರ್ಷವರ್ಧನನ ಪುಡಿ ಗೂಂಡಾಗಿರಿ [illegible] ಜನರು ಹರ್ಷವರ್ಧನನಿಗೆ ಒಮ್ಮೆ ಬುದ್ಧಿ [illegible]

–[illegible]

ಬಿಜೆಪಿಗೆ ಹಾರಲಿದ್ದಾರೆ ಸೊರಕೆ!

ಮಂಗಳೂರು

[illegible] ಮಾಜಿ ಸಂಸದ ವಿನಯಕುಮಾರ್ ಸೊರಕೆ ಬಿಜೆಪಿ ಸೇರುತ್ತಿದ್ದಾರೆ ಅಂದರೆ ನಂಬುತ್ತೀರಾ? ಕರಾವಳಿಯಲ್ಲಿ ಕಾಂಗ್ರೆಸ್‌ನ ದುಃಸ್ಥಿತಿ, ಸೊರಕೆಯ ಮನಸ್ಥಿತಿಯ ದೆಸೆಯಿಂದ ಬಿಜೆಪಿ ಬೇರು ನಿಂತ ರೀತಿ ನೋಡಿದರೆ, ಸೊರಕೆ ಬಿಜೆಪಿ ಸೇರಿದರೂ ತಪ್ಪಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ತನ್ನ ಕಿವಿಗೆ ಹಿತವಲ್ಲದ್ದನ್ನು ಕೇಳದ, ತನ್ನ ರಾಜಕೀಯ ದಾರಿಗೆ ಅಡ್ಡಬಂದವರನ್ನೆಲ್ಲ ಮಟ್ಟ ಹಾಕುವುದರಲ್ಲೇ ಕಾಲಹರಣ ಮಾಡುವ ಜಾಯಮಾನದ ಸೊರಕೆಗೆ ಕಾಂಗ್ರೆಸ್‌ನಲ್ಲಿ ಭವಿಷ್ಯದ ಬಾಗಿಲುಗಳೆಲ್ಲಾ ಮುಚ್ಚಲ್ಪಟ್ಟಿವೆ. ಅವರೀಗ ಭಾವೀ ಭವಿಷ್ಯದ ಬೆಳ್ತಂಗಡಿಯಾಗಿ ಬಿಜೆಪಿ ಗೋಚರಿಸತೊಡಗಿದ್ದು ಅದರತ್ತ ಹಾರಲು ಕಸರತ್ತುಗಳು ಗುಪ್ತವಾಗಿಯೇ ನಡೆಯುತ್ತಿರುವುದು ನಂಬಲರ್ಹ ಮೂಲಗಳಿಂದ ತಿಳಿದುಬಂದಿದೆ.

ರಾಜ್ಯ ರಾಜಕಾರಣದಲ್ಲಿ ಬಿಜೆಪಿ ಒಂದಿಬ್ಬರು ನಾಮಕಾವಸ್ತೆ ಶಾಸಕರನ್ನು ಹೊಂದಿದ್ದ ಕಾಲಘಟ್ಟದಲ್ಲಿ ಈ ಇಬ್ಬರಲ್ಲಿ ಒಬ್ಬರಾಗಿ ರಾಜ್ಯದಲ್ಲಿ ಬಿಜೆಪಿ ಖಾತೆ ತೆರೆಯುವಂತಾದದ್ದು ಪುತ್ತೂರು ವಿಧಾನಸಭಾ ಕ್ಷೇತ್ರದಲ್ಲಿ, ಅನಾದಿಕಾಲದಿಂದಲೂ ಪುತ್ತೂರಿನ ಕಾಂಗ್ರೆಸ್‌ಗೆ ಭಿನ್ನಮತವೆಂಬುದು ಶಾಪವಾಗಿ ಕಾಡುತ್ತಲೇ ಬಂದಿತ್ತು. ಸಂಕಪ್ಪ ರೈ- ಈಶ್ವರಭಟ್ಟ- ಕೆ.ಪಿ. ಅಬ್ದುಲ್ಲಾ ನಡುವೆ ಟಿಕೆಟ್‌ಗಾಗಿ ನಡೆಯುತ್ತಿದ್ದ ಕಾಲೆಳೆದಾಟದಿಂದ ಬಿಜೆಪಿಯ ರಾಮಭಟ್ಟರು ಪಕ್ಷಕ್ಕೆ ಹಳಸಲು ಎನಿಸಿದರೂ ಅನಾಯಾಸವಾಗಿ ಗೆದ್ದು ಬರುತ್ತಿದ್ದರು. ಇಂತಹ ಒಂದು ದಾರಿದ್ರ್ಯ ಸನ್ನಿವೇಶದಲ್ಲಿ ಪುತ್ತೂರು ಕಾಂಗ್ರೆಸ್‌ನಲ್ಲಿ ಧೂಮಕೇತುವಿನಂತೆ ಕಾಣಿಸಿಕೊಂಡ ಹೊಸ ಮುಖವೇ ವಿನಯಕುಮಾರ್ ಸೊರಕೆ ಎಂಬ ಸ್ಫುರದ್ರೂಪಿ ಯುವಕ. 1985ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಪ್ರಥಮವಾಗಿ ಸ್ಪರ್ಧಿಸಿದ ವಿನಯಕುಮಾರ್ ಸೊರಕೆ ಕಟ್ಟಲು ಬತ್ತಿದ ದನದಂತಾಗಿದ್ದ ರಾಮಭಟ್ಟರನ್ನು 22,000 ಮತಗಳ ಅಂತರದಿಂದ ಸೋಲಿಸಿದ್ದರು.




ಈ ಒಂದು ಅಭೂತಪೂರ್ವ ಗೆಲುವಿನ ಗುಂಗಿನಲ್ಲೇ, ಜನರ ನಿರೀಕ್ಷೆಗಳನ್ನು ಹುಸಿ ಮಾಡದೇ ಕ್ಷೇತ್ರದಾದ್ಯಂತ ಓಡಾಡಿ ಜನಪ್ರಿಯರಾದ ಸೊರಕೆಯನ್ನು ಜನ ಕೂಡಾ ನಯ-ವಿನಯಗಳ ಸಾಕಾರ ಮೂರ್ತಿ ಎಂದು ಕೊಂಡಾಡಿದರು. ಕಾಂಗ್ರೆಸ್‌ನ ಈ ದಿಢೀರ್ ಜನಪ್ರಿಯತೆಯಿಂದ ಪುತ್ತೂರಿನಲ್ಲಿ ಬಿಜೆಪಿಯ ಕೋಟೆಯೇ ಅಲುಗಾಡಿದಂತಾಗಿತ್ತು, ಸೊರಕೆಯ ಈ ಕಾಂಗ್ರೆಸ್ ದರಬಾರನ್ನು ಸಮರ್ಥವಾಗಿ ಎದುರಿಸಲು ಬಿಜೆಪಿ ತಲಾಷು ಮಾಡಿದ ನೂತನ ದಂಡ ನಾಯಕನೇ ಸುಳ್ಯದ ಹೈದ ಡಿ.ವಿ. ಸದಾನಂದಗೌಡ. 1990 ರ ಚುನಾವಣೆಯಲ್ಲಿ ಸೊರಕೆ ಡಿ.ವಿ. ಎದುರು ಸ್ಪರ್ಧಿಸಿ ಗೆದ್ದರಾದರೂ ಗೆಲುವಿನ ಅಂತರ ಮಾತ್ರ 1,400 ಕ್ಕೆ ಕುಸಿದಿತ್ತು! ಕಾರಣ ಮಾತಿನ ಚತುರ ಡಿ.ವಿ. ಪುತ್ತೂರಿನ ಬಹುದೊಡ್ಡ ಮತವರ್ಗವಾದ ಗೌಡರ ಪ್ರತಿನಿಧಿಯೆಂದು ಬಿಂಬಿತವಾದದ್ದು.


1994ರ ಚುನಾವಣೆ ಹೊತ್ತಿಗೆ ಕಾಂಗ್ರೆಸ್‌ನಲ್ಲಿ ಮತ್ತೆ 'ಬಣ ರಾಜಕೀಯ'ವೆಂಬ ರೋಗ ಉಲ್ಬಣಿಸಿ ಪೂಜಾರಿ ಬಣದಲ್ಲಿ ಗುರುತಿಸಿಕೊಂಡಿದ್ದ ಸೊರಕೆಗೆ ಮೊಯ್ಲಿ ಬಣದ ಸಂಕಪ್ಪ ರೈ, ಜೀವನ್ ಭಂಡಾರಿಯಂಥವರು ಮಗ್ಗುಲ ಮುಳ್ಳಾಗಿ ಬಂಗಾರಪ್ಪರ ಕೆಸಿಪಿಯಲ್ಲಿ ಸೊರಕೆಯನ್ನು ಸೋಲಿಸಲೆಂದೇ ಸ್ಪರ್ಧಿಸಿದ್ದರ ಪರಿಣಾಮವಾಗಿ ಸೊರಕೆ 400 ಮತಗಳ ಅಂತರದಿಂದ ಡಿ.ವಿ. ಎದುರು ಸೋಲುಣ್ಣಬೇಕಾಯಿತು. ಆನಂತರ ನೇತ್ರಾವತಿ ನದಿಯಲ್ಲಿ ಸಾಕಷ್ಟು ನೀರು ಹರಿದಿದೆ. ಸೊರಕೆ ವಿರೋಧಿ ಬಣದ ಸಿ.ಪಿ. ಜಯರಾಂಗೌಡ, ಜೀವನ್ ಭಂಡಾರಿ, ಹೇಮನಾಥ ಶೆಟ್ಟಿ, ಮಹಮ್ಮದ್ ಆಲಿ ಜನತಾದಳಕ್ಕೆ ವಲಸೆ ಹೋದದ್ದು, ಸೊರಕೆ ಅಚಾನಕ್ ಆಗಿ ಉಡುಪಿ ಎಂಪಿಯಾಗಿದ್ದು ಸೊರಕೆ ಕಾಟ ತಪ್ಪಿತೆಂದರೆ ಭಿನ್ನಮತೀಯರೆಲ್ಲಾ ದಳದಿಂದ ಮತ್ತೆ ಕಾಂಗ್ರೆಸ್‌ಗೆ ಮರಳಿದ್ದು, ಭಿನ್ನಮತೀಯ ಒಳರಾಜಕೀಯದ ಯುಗಾಂತ್ಯವಾಯಿತೆಂದೇ ಎಲ್ಲಾ ತಿಳಿದಿದ್ದರು. ಆದರೆ ಉಡುಪಿಯ ಎಂಪಿಯಾದರೂ ಪುತ್ತೂರಿನ ತನ್ನ ಕಂಟ್ರೋಲನ್ನು ಬಿಟ್ಟು ಕೊಡಲು ಒಪ್ಪದ ಸೊರಕೆಗೆ, ಪುತ್ತೂರಿನಲ್ಲಿ ಆತ್ಮವನ್ನು ಉಡುಪಿಯಲ್ಲಿ ದೇಹವನ್ನು ಇಟ್ಟು ರಾಜಕೀಯ ಮಾಡತೊಡಗಿದರು. ಆದರೇನು ಹಳೆಯದನ್ನೆಲ್ಲಾ ಮರೆತು ಪುತ್ತೂರಿನಲ್ಲಿ ಕಾಂಗ್ರೆಸ್ ಅನ್ನು ಪುನರ್ ಸಂಘಟಿಸಲು ಸಾಧ್ಯವಿದ್ದ ಸೊರಕೆ ತಾನಲ್ಲದೇ ಇನ್ನೋರ್ವ ಪುತ್ತೂರಿನ ಕಾಂಗ್ರೆಸ್‌ನಿಂದ ಶಾಸಕನಾಗಬಾರದು ಎಂಬಂತೆ ವರ್ತಿಸಿದರು. ಸುಧಾಕರ ಶೆಟ್ಟಿ, ಮಹಮ್ಮದ್ ಹಬ್ಬಾನಂತಹ ಬಕೆಟ್ ಗಿರಾಕಿಗಳನ್ನು ಪೋಷಿಸುತ್ತಾ ಭಿನ್ನಮತವನ್ನು ಬೆಳೆಸಿದರು. ಈ ಭಿನ್ನಮತರ ಬೆಂಕಿಯಲ್ಲಿ ಬಿಜೆಪಿ ಚೆನ್ನಾಗಿ ಮೈ ಕಾಯಿಸಿಕೊಂಡಿತು. ಡಿ.ವಿ. ಎರಡನೇ ಬಾರಿ ಗೆದ್ದು ಜನಪ್ರಿಯರಾದರು. ಆನಂತರ ನೋಡುನೋಡುತ್ತಲೇ ವಿಪಕ್ಷ ಉಪನಾಯಕನಾಗಿ, ಮಂಗಳೂರು ಸಂಸದನಾಗಿ, ಇದೀಗ ರಾಜ್ಯ ಬಿಜೆಪಿಯ ಅಧ್ಯಕ್ಷನಾಗಿ ಡಿ.ವಿ. ಸದಾನಂದ ಗೌಡ ಯಶಸ್ಸಿನ ಮೆಟ್ಟಲೇರುತ್ತಲೇ ಹೋದರು. ಡಿ.ವಿ.ಯ ಈ ಜನಪ್ರಿಯತೆಗೆ ಕಾರಣವಾದದ್ದು, ಡಿ.ವಿ.ಗೆ ರಾಜಕೀಯದಲ್ಲಿ ಬ್ರೇಕ್ ಸಿಕ್ಕಿದ್ದು, ಎಲ್ಲವೂ ಸೊರಕೆಯ ಮನೆ ಮುರುಕುತನದ ಫಲ ಎನ್ನುವುದನ್ನು ಸ್ವತಃ ಕಾಂಗ್ರೆಸ್ಸಿಗರೇ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ವಿಚಾರ.

ಇತ್ತ ಅದೇ ಹೊತ್ತಿಗೆ ಉಡುಪಿಯಲ್ಲಿ ಎರಡನೇ ಬಾರಿಗೆ ಎಂಪಿಯಾಗಲು ಹೋಗಿ ಕಾಂಗ್ರೆಸ್ ಮುಗ್ಗರಿಸಲು ಸೊರಕೆ ಸೋಲು ಕಾರಣವಾದದ್ದು, ಸ್ವಜಾತಿ ಬಿಲ್ಲವರು ನನಗಲ್ಲದೇ ಇನ್ಯಾರಿಗೆ ಓಟು ಕೊಡುತ್ತಾರೆ ಎನ್ನುವ ಸೊರಕೆಯ ಅತಿ ಆತ್ಮವಿಶ್ವಾಸ. ಆದರೆ 'ಮಂದಾರ್ತಿ ಯಕ್ಷಗಾನ ಮೇಳ'ದಲ್ಲಿ ಬಿಲ್ಲವರ ತುಚ್ಛೀಕರಣ ಬಗ್ಗೆ ಎದ್ದ ವಿವಾದದಲ್ಲಿ ಬಿಲ್ಲವರ ಪರ ನಿಲ್ಲದೇ ಎಡಬಿಡಂಗಿತನ ತೋರಿದ ಸೊರಕೆಗೆ ಬಿಲ್ಲವರು ಚುನಾವಣೆಯಲ್ಲಿ ಸರಿಯಾಗಿಯೇ ಪಾಠ ಕಲಿಸಿದ್ದರು.

ಸೊರಕೆ ನಯವಂಚನೆ








ಆದಾಗ ದಕ್ಷಿಣ ಕನ್ನಡ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬೆಳ್ತಂಗಡಿಯ ಗಂಗಾಧರಗೌಡ ಸೊರಕೆಯ ರಾಜಕೀಯ ಗಾಡ್‌ಫಾದರ್. ಪೂಜಾರಿಯ ರಾಜಕೀಯ ಹಿತಶತ್ರುವಾದ ಗಂಗಾಧರಗೌಡರಲ್ಲಿದ್ದು, ಗುಪ್ತ ಮಾಹಿತಿದಾರನಾಗಿ ಸಹಕರಿಸುತ್ತಿದ್ದ ಸೊರಕೆ ಕಾಲಾಂತರದಲ್ಲಿ ಪುತ್ತೂರು ಎಂಎಲ್‌ಎ ಆದದ್ದೇ ಸ್ವಜಾತಿಯ ಬಂಧು ಪೂಜಾರಿಯ ಆಪ್ತರಾದರು. ಆನಂತರ ಉಡುಪಿಯ ಎಂಪಿಯಾದದ್ದೇ ಪೂಜಾರಿಯ ಬೆನ್ನಿಗಿರಿದು ಮೊಯ್ಲಿ ಬಣದಲ್ಲಿ ಗುರುತಿಸಿಕೊಂಡರು. ಅದರ ಫಲವಾಗಿ ಅಲ್ಲೀತನಕ ಹಾವು-ಮುಂಗಸಿಯಂತಿದ್ದ ರಮಾನಾಥ್ ರೈ-ಸೊರಕೆ ನಾವು ಲವ-ಕುಶರಂತೆ ಎಂದು ಬಿಗಿದಪ್ಪಿ ಮತದಾರರಿಗೆ ಪೋಸು ಕೊಟ್ಟರು. ಗುಳ್ಳೇನರಿ ಸ್ವಭಾವದ ಮೊಯ್ಲಿಗೂ ಸೊರಕೆಯ ಉದ್ಧಾರ ಬೇಕಾಗಿರಲಿಲ್ಲ. ಆದರೆ ತನ್ನ ರಾಜಕೀಯ ಪ್ರತಿಸ್ಪರ್ಧಿ ಜನಾರ್ದನ ಪೂಜಾರಿಯನ್ನು ಮಣಿಸಲು ಅವರಿಗೊಬ್ಬ ಬಿಲ್ಲವ ಬೇಕಾಗಿತ್ತು. ಇದೀಗ ಮೊಯ್ಲಿ ಸೊರಕೆಗೂ ಲಾತ್ ಕೊಟ್ಟು ಬಿಟ್ಟಿದ್ದಾರೆ. ತನ್ನನ್ನು ಪುತ್ತೂರಲ್ಲಿ ಸೋಲಿಸಿದ ಹೇಮನಾಥ್ ಶೆಟ್ಟಿಯನ್ನು ಮೊಯ್ಲಿ ಬ್ಲಾಕ್ ಕಾಂಗ್ರೆಸ್‌ನ ಅಧ್ಯಕ್ಷ ಮಾಡಿದ್ದು ಸೊರಕೆಗೆ ಬಿಸಿತುಪ್ಪವಾಗಿ ಪರಿಣಮಿಸಿದೆ. ಪುತ್ತೂರಲ್ಲಿ ಸೊರಕೆ ಹಿಡಿತ ಸಡಿಲಗೊಳ್ಳುತ್ತಿರುವುದರ ಮುನ್ಸೂಚನೆಯಾಗಿ ಇದೀಗ ನಗರ ಕಾಂಗ್ರೆಸ್ ಅಧ್ಯಕ್ಷನಾಗಿಯೂ ಸೊರಕೆ ಶಿಷ್ಯ ಡೋಲ್ಫಿ ರೇಗೋನನ್ನು ಕಿತ್ತು ಇನ್ನೊಂದು ಬಣದ ಲ್ಯಾನ್ಸಿ ಎಂಬಾತನ ಆಯ್ಕೆ ನಡೆದಿದೆ. ಹಾಗಂತ ಉಡುಪಿಯಲ್ಲಿಯಾದರೂ ಅಸ್ತಿತ್ವವಿದೆಯೇ ಎಂದರೆ ಅದೂ ಇಲ್ಲ, ತಾನು ಎಂ.ಪಿ.ಯಾಗಿದ್ದಾ[...] ಸ್ವಜಾತಿಯ ವಸಂತ ಸಾಲ್ಯಾನ್ ಮಿಂಚದಂತೆ ಎತ್ತಿಕಟ್ಟಿದ್ದ[...] ಉಡುಪಿಯ ಸಭಾಪತಿ, ಮಂಜುನಾಥ ಉದ್ಯಾವರ ಎಂದೇ[...] ಬಿಡಾ ರಾಜಕೀಯ ಸೃಷ್ಟಿಯಾದದ್ದು ಇದು ಗೊತ್ತಾಗಿರು[...] ಆಪ್ಕರಣ್ಣನೇ ಸೊರಕೆ ವಿರುದ್ಧ ಕಿಡಿಕಿಡಿಯಾಗಿದ್ದಾ[...] ಪುತ್ತೂರಿನ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡದಂ[...] ವಾರ್ನಿಂಗ್ ಕೂಡಾ ಮಾಡಿರುವುದು ತಿಳಿದುಬಂದಿದೆ[...] ಪೂಜಾರಿಯಂತೂ ಯಾವ ಕಾಲಕ್ಕೂ ತನ್ನ ಬೆನ್ನಿಗಿರಿ[...] ಸೊರಕೆಯನ್ನು ಹತ್ತಿರ ಸೇರಿಸುವ ಜಾಯಮಾನದವರಲ್ಲ[...]

ಹಾಗೆ ನೋಡಿದರೆ ಸೊರಕೆಗೂ ಎಲ್ಲರೊಂದಿ[...] ಸರಿಯಿದ್ದು, ಕಾಂಗ್ರೆಸ್‌ನಲ್ಲಿ ಉಳಿಯುವ ಉತ್ಸುಕ[...] ಇದ್ದಂತಿಲ್ಲ. ಉಡುಪಿಯ ರಾಜಕೀಯವೇನೇ ಇರಲಿ[...] ಪುತ್ತೂರಲ್ಲಿ ತೆರೆದ ಮನಸ್ಸಿನ ರಾಜಕೀಯ ಮಾಡಿದ್ದ[...] ಸೊರಕೆಗೆ ಉಜ್ವಲ ರಾಜಕೀಯ ಭವಿಷ್ಯವಿತ್ತು. ಅಂದು[...] ಪುತ್ತೂರಲ್ಲಿ ತನ್ನ ಸೋಲಿಗೆ ಕಾರಣನಾದ ಹೇಮನಾ[...] ಶೆಟ್ಟಿಯನ್ನು ಮತ್ತೆ ಕಾಂಗ್ರೆಸ್‌ಗೆ ಕರೆದು ತಂದದ್ದೇ ಈ[...] ಸೊರಕೆ. ಹೇಮನಾಥ ಶೆಟ್ಟಿ ಸೇರಿದಂತೆ ಹಳೆಯ ರಾಜಕೀಯ[...] ಹಿತ ಶತ್ರುಗಳೆಲ್ಲ ಹಳೆಯದನ್ನೆಲ್ಲಾ ಮರೆತು ಸೊರಕೆಯನ್ನು[...] ನಮ್ಮ ಲೀಡರ್ ಎಂದು ಒಪ್ಪಿಕೊಳ್ಳಲು[...] ಈಗಲೂ ತಯಾರಿದ್ದಾರೆ. ಪುತ್ತೂರ[...] ಕಾಂಗ್ರೆಸ್ ಪಕ್ಷವನ್ನು ಕೊಲ್ಲುತ್ತಿರುವ ಬಣ[...] ರಾಜಕೀಯವೆಂಬ ರೋಗದ ಉಪಶಮನ[...] ಸೊರಕೆಗೆ ಬೇಕಾಗಿರುವ ಕಾಲಾವಕಾ[...] ಕೇವಲ ಹತ್ತು ನಿಮಿಷ! ಆದರೆ ತನ[...] ಸ್ವಂತ ಹಿತಾಸಕ್ತಿಯಿಂದ ಹಳೆಯ ಗಾಯವನ್ನ[...] ನೆಕ್ಕಿ ವ್ರಣವಾಗಿಸುತ್ತಿರುವ ಸೊರಕೆ[...] ಪುತ್ತೂರಲ್ಲಿ ಕಾಂಗ್ರೆಸ್ ಸರಿಯಾಗುವುದು[...] ಬೇಕಾಗಿಲ್ಲ. ಬಿಜೆಪಿಯ ಏಜೆಂಟ್ ಥ[...] ವರ್ತಿಸುತ್ತಿರುವ ಸೊರಕೆ ಪುತ್ತೂರ[...] ಇತ್ತೀಚೆಗೆ ಬಿಜೆಪಿಯವರ ಆಟಾಟೋಪ[...] ಮುಗಿಲು ಮುಟ್ಟಿದಾಗಲೂ ಬಂದು[...] ಪ್ರತಿಭಟನೆಗೆ ನಾಯಕತ್ವ ನೀಡುವುದಿರಲಿ[...] ಪತ್ರಿಕಾ ಹೇಳಿಕೆ ಕೊಟ್ಟೂ ಟೀಕಿಸಿದ್ದಿಲ್ಲ[...] ಉದಾಹರಣೆಗೆ ರಾಜ್ಯದ ಗಮನ ಸೆಳೆ[...] ಶ್ರೀರಾಮ ಸೇನೆಯವರ ಶನಿಪೂಜ[...] ಪ್ರಕರಣದಲ್ಲಿ ಡಿ.ವಿ. ಸದಾನಂದ ಗೌಡ[...] ಫರ್ಮಾನಿನಂತೆ ಪೊಲೀಸರು ಹುಚ[...] ನಾಯಿಗಳಂತೆ ವರ್ತಿಸಿದರು. ಹುಡು[...] ಯರಿಗೆ ಬಸ್ಸಿನಲ್ಲಿ ಕೀಟಲೆ ಮಾಡಿದ[...] ಪ್ರಕರಣವೊಂದರಲ್ಲಿ ನೆಹರೂ ನಗರದ[...] ಅಮಾಯಕರ ಮನೆಗಳಿಗೆ ರಾತ್ರೋರಾ[...] ದರೋಡೆಕೋರರಂತೆ ನುಗ್ಗಿದ ಪೊಲೀಸರು[...] ದಾಂಧಲೆ ಎಬ್ಬಿಸಿದರು. ಕೋರ್ಟಿನ ಆದೇ[...] ಪಡೆದು ದನ ಸಾಗಾಟ ಮಾಡುತ್ತಿದ್ದವ[...] ಮೇಲೆ ಭಜರಂಗಿ ಪುಂಡರ ದಾಳಿಯ[...] ಯಿತು. ಇದನ್ನೆಲ್ಲಾ ನಾಯಕ ಸೊರಕೆ[...] ಮುಂದೆ ಉಸುರಿದರೆ ಕಿವಿಗೇ ಹಾಕಿಕೊ[...] ಲಿಲ್ಲ. ಸೊರಕೆಯವರ ಇತ್ತೀಚಿನ ವರ್ತನೆ ನೋಡಿದ[...] ಕಾಂಗ್ರೆಸ ಅನ್ನು ಮುಗಿಸಿಯೇ ಸಿದ್ಧ ಎಂದು ಪಣತೊಟ್ಟಂ[...] ಭಾಸವಾಗುತ್ತಿದೆ.

-ವರದಿಗಾರ


ಇದು ಯಡ್ಡಿ ಷಡ್ಯಂತ್ರ!



ದಕ್ಷಿಣ ಜಿಲ್ಲೆಯಲ್ಲಿ ತನ್ನ ಸಾರ್ವಭೌಮತೆಯನ್ನು ಮೆರೆಯುತ್ತಿರುವ ಬಿಜೆಪಿಗೆ ಅದರಲ್ಲೂ ಯಡ್ಡಿ ಬಣಕ್ಕೆ ಮಗ್ಗುಲ ಮುಳ್ಳಾಗಿರುವವನು ಕಾರ್ಕಳದ ಸುನಿಲ್‌ಕುಮಾರ್ ಎಂಬ ಅನಂತ್‌ಕುಮಾರ್ ಶಿಷ್ಯ. ಕಳೆದ ಉಳ್ಳಾಲ ಉಪಚುನಾವಣೆಯಲ್ಲಿ ಯಡ್ಡಿ ಬಳಗವೇ ಮಿಂಚಿದ್ದು ಚುನಾವಣೆಯ ಸಾರಥ್ಯ ವಹಿಸಿದವರಂತೆ ಉಳ್ಳಾಲದ ಗಲ್ಲಿಗಳಲ್ಲಿ ಶೋಭಾ ಕರಂದ್ಲಾಜೆಯೇ ಸೆರಗು ಬಿಗಿದು ಓಡಾಡಿದ್ದನ್ನು ಸಹಿಸದ ಸುನಿಲ್ ತಲೆಮರೆಸಿಕೊಂಡು ಅಸಮಾಧಾನ ವ್ಯಕ್ತಪಡಿಸಿದ್ದ. ಉಳ್ಳಾಲ ಸೋಲು ಯಡ್ಡಿ ಬಣಕ್ಕೆ ತೀವ್ರ ಮುಖಭಂಗಕ್ಕೆ ಕಾರಣವಾದರೆ, ಕಾರ್ಕಳದಲ್ಲಿ ಉಗ್ರ ಭಾಷಣ ಪ್ರವೀಣ ಸುನೀಲ್ ವರ್ಚಸ್ಸು ದಿನದಿಂದ ದಿನಕ್ಕೆ ಏರತೊಡಗಿದೆ. ಕಾರ್ಕಳದ ಸ್ಥಳೀಯಾಡಳಿತ ಸಹಕಾರಿ ರಂಗವೆಲ್ಲಾ ಕೇಸರಿಮಯವಾಗಿದೆ. ಆದಾಗ್ಯೂ ಮುಂದಿನ ಸಲ ಕಾರ್ಕಳದಲ್ಲಿ ಸೀಟು ಇಲ[...] ಎಂಬ ರೂಮರ್ ಈಗಾಗಲೇ ಎದ್ದಿದೆ. ಉಡುಪಿಯ ಹಾಲಿ ಎಂ.ಪಿ. ಮನೋರಮ ಪಕ್ಷವಿರೋಧಿಯಾಗಿ ನಡೆದುಕೊಳ್ಳುತ್ತಿದ್ದು, ಆಕೆಗೆ ಪಕ್ಷದಿಂದ ಗೇಟ್‌ಪಾಸ್ ಪೂರ್ವ ನಿರ್ಧರಿತವಾಗಿ ಕೇಂದ್ರದಲ್ಲಿ ಸಾಕಷ್ಟು ಹಿಡಿತ ಸಾಧಿಸಿರುವ ಗಾಡ್‌ಫಾದರ್ ಅನಂತ್‌ಕುಮಾರ್ ಮೂಲಕ ಸುನಿಲ್‌ಗೆ ಉಡುಪಿ ಎಂ.ಪಿ. ಸೀಟು ಗಿಟ್ಟಿಸಿಕೊಳ್ಳುವುದು ಇದೀಗ ಸುಲಭವಾಗಿದೆ. ಅಂತೆಯೇ ಕ್ಷೇತ್ರ ಪುನರ್‌ವಿಂಗಡಣೆಯಲ್ಲಿ ಚಿಕ್ಕಮಗಳೂರು ಉಡುಪಿ ಜತೆ ವಿಲೀನವಾಗಿದ್ದು ಚಿಕ್ಕಮಗಳೂರು ಮೂಲದ ಭಜರಂಗಿ ಸುನೀಲನಿಗೆ ಅನುಕೂಲಕರವಾಗಿಯೇ ಇದೆ. ಹೀಗಿರುವಾಗ ಯಡ್ಡಿಯ ವಿರೋಧಿ ಬಣದಲ್ಲಿ ಪ್ರಬಲನಾಗುತ್ತಿರುವ ಸುನಿಲ್ ಕುಮಾರನನ್ನು ಬಗ್ಗುಬಡಿಯಲು ಕರಾವಳಿಯಲ್ಲಿ ಇನ್ನೋರ್ವ ಪ್ರಭಾವಿ ಬಿಲ್ಲವ ಲೀಡರ್‌ನ ಅಗತ್ಯ ಬಿಜೆಪಿಗಿದೆ. ಅದೇ ಹೊತ್ತಿಗೆ ಜೆಡಿಎಸ್ ತೊರೆದು ಬೇಲಿ ಮೇಲೆ ಕೂತಿರುವ ವಸಂತ ಬಂಗೇರಾ ಕೂಡಾ ಕಾಂಗ್ರೆಸ್ ಸೇರಲು ಕಾಯುತ್ತಿರುವುದು ಕೂಡಾ ಬಿಜೆಪಿಯನ್ನು ಜಿಲ್ಲೆಯಲ್ಲಿ ವೀಕ್ ಮಾಡಲಿದೆ. ಈ ಎಲ್ಲಾ ಲೆಕ್ಕಾಚಾರದ ಫಲವೇ ತೆರೆಮರೆಯಲ್ಲಿ ನಡೆಯುತ್ತಿರುವ ಸೊರಕೆ ಬಿಜೆಪಿ ಸೇರುವ ಕಸರತ್ತು. ಸೊರಕೆಗೆ ಕೂಡಾ ಐ.ಎಂ. ಜಯರಾಂ ಶೆಟ್ಟಿ ಆಸ್ಕರಣ್ಣ ಮೂಲಕ ಕಾಂಗ್ರೆಸ್‌ಗೆ ಸೇರ್ಪಡೆಗೊಂಡದ್ದು ಉಡುಪಿಯಲ್ಲಿ ರಾಜಕೀಯ ಭವಿಷ್ಯತ್ತಿಗೆ ಕಲ್ಲು ಬಿದ್ದಿದೆ. ಈ ಒಂದು ವೈರುಧ್ಯದ, ಕಾಲಘಟ್ಟದಲ್ಲಿ ಸೊರಕೆಯನ್ನು ಬಿಜೆಪಿಗೆ ಸೆಳೆದು[...] ಒಂದೇ ಕಲ್ಲಲ್ಲಿ ಮೂರು ಹಕ್ಕಿಗಳನ್ನು ಹೊಡೆಯುವ ಕುತಂತ್ರ ಯಡ್ಡಿಯದ್ದು!



ವೀರೇಂದ್ರ ಹೆಗ್ಗಡೆಯೇ ಸಾರಥಿ?



ಸೊರಕೆ ಬಿಜೆಪಿ ಸೇರುವ ಈ ಒಂದು ಘನಕಾರ್ಯದ ಸಂಧಾನಕಾರರು ಯಾರು? ಎನ್ನುವ ಪ್ರಶ್ನೆಗೆ ಧರ್ಮಸ್ಥಳದ ಖಾವಂದರು ಎನ್ನುವ ಉತ್ತರ ಕೇಳಿಬರುತ್ತಿದೆ. ಬಿಲ್ಲವರೆಂದರೆ ಮಾನ್ಯ ಖಾವಂದರಿಗೆ ಅದೇನೋ ಅಲರ್ಜಿ. ಜನಾರ್ದನ ಪೂಜಾರಿ ಉಜಿರೆಯಲ್ಲೇ ಚುನಾವಣಾ ಭಾಷಣವೊಂದರಲ್ಲಿ ಧರ್ಮಸ್ಥಳದ ದೊರೆಗಳ ದಬ್ಬಾಳಿಕೆಯನ್ನು ತೆಗಳಿ ಕಲ್ಲಿನ ಅಭಿಷೇಕಕ್ಕೆ ಈಡಾಗಿದ್ದರು. ಅದೆಲ್ಲಾ ಹಳತಾಗಿ ಸ್ವತಃ ಪೂಜಾರಿ ಮುಂದೊಂದು ದಿನ ಧರ್ಮಸ್ಥಳ ದೊರೆಗಳ ಪಾದತಳದಲ್ಲಿ ಕುಸಿದು ಕೂತಾಗ ಹಳೆಯದ್ದೆಲ್ಲಾ ಮರೆತುಹೋಗಿತ್ತು. ಆದರೆ ಯಾವಾಗ ಧರ್ಮಸ್ಥಳದ ಬುಡದಲ್ಲೇ ಇರುವ ಕನ್ಯಾಡಿಯಲ್ಲಿ ಬಿಲ್ಲವರ ಆತ್ಮಾನಂದ ಸರಸ್ವತಿ ಎಂಬ ಹಠಮಾರಿ ಸ್ವಾಮಿ ಗಗನಚುಂಬಿ ಶ್ರೀರಾಮಕ್ಷೇತ್ರವನ್ನೇ ಕಟ್ಟಿ, ಪದ್ಮಾಸನ ಹಾಕಿ ಕುಳಿತರೋ, ಧರ್ಮಸ್ಥಳಕ್ಕೆ ಬರುವ ಭಕ್ತರು ಶ್ರೀರಾಮಕ್ಷೇತ್ರಕ್ಕೂ ಆಕರ್ಷಿತರಾಗಲು ತೊಡಗಿ, ಎರಡನೇ ಬಾರಿ ಧರ್ಮಸ್ಥಳದ ದೊರೆಗಳು ಬಿಲ್ಲವರೆಂದರೆ ಮೂಗು ಮುರಿದುಕೊಳ್ಳುವಂತಾಯಿತು. ಇದೀಗ ಕನ್ಯಾಡಿಯ ಸ್ವಾಮಿಗಳು ಸಮಸ್ತ ಈಡಿಗರ/ಬಿಲ್ಲವರ ಕುಲಗುರು ಎಂದು ಘೋಷಣೆಯಾಗಿದ್ದು, ಸದರಿ ಕನ್ಯಾಡಿ ಶ್ರೀರಾಮ ಕ್ಷೇತ್ರದ ಹಿಂದುಳಿದ ಉಪಜಾತಿಗಳ ಶಕ್ತಿಕೇಂದ್ರವಾಗುವ ನಿಟ್ಟಿನಲ್ಲಿ ಕೆಲಸಗಳು ಆಗುತ್ತಿವೆ. ಹೀಗೆ ಕನ್ಯಾಡಿಯಲ್ಲಿ ಬಿಲ್ಲವರ ಸ್ವಾಮೀಜಿ ಒಂದು ಶಕ್ತಿಯಾಗೋದು ಯಾವತ್ತಾದರೂ ಧರ್ಮಸ್ಥಳದ ದೃಷ್ಟಿಯಲ್ಲಿ ಮಾರಕವೇ. ಅಂದು ಶ್ರೀರಾಮ ಕ್ಷೇತ್ರದ ಉದ್ಘಾಟನಾ ಸಮಾರಂಭಕ್ಕೆ ಶ್ರೀ ಹೆಗ್ಗಡೆಯವರನ್ನು ಖುದ್ದು ಕನ್ಯಾಡಿ ಸ್ವಾಮೀಜಿಗಳೇ ಹೋಗಿ ಆಹ್ವಾನಿಸಿದರೆ, ಒಲ್ಲೆ ಅಂದರು. ಅಂತಹುದರಲ್ಲಿ ಧರ್ಮಸ್ಥಳಕ್ಕೆ ಪದೇಪದೇ ಭೇಟಿ ಕೊಟ್ಟು ಖಾವಂದರ ಪಾದಸೇವೆಯಿಂದ ಪುನೀತರಾಗಿರುವ ವಿನಯಕುಮಾರ್ ಸೊರಕೆ ಬಿಜೆಪಿ ಸೇರುವುದಕ್ಕೆ ಮಾನ್ಯ ಖಾವಂದರೇ ಮಧ್ಯಸ್ಥಿಕೆ ವಹಿಸುತ್ತಾರೆಂದರೆ ಒಲ್ಲೆ ಅನ್ನುತ್ತಾರಾ? ಸೊರಕೆ ಬಿಜೆಪಿಗೆ ಬರುವುದಕ್ಕೆ ಅಡ್ಡಿಯಾಗಬಹುದಾದ ಡಿವಿಯೇ (N.O.C.) ಎಸ್ ಅಂದಿದ್ದಾರೆಂದರೆ ಇನ್ನೇಕೆ ತಡ? ಎನ್ನುವ ಪ್ರಶ್ನೆಗಳಷ್ಟೇ ಉಳಿದಿವೆ.



ಉಡುಪಿ: ವಿಧವೆಗೆ ಏಡ್ಸ್ ಪಟ್ಟ! ಮೇಲ್ಜಾತಿ ಜನರ ಕುತಂತ್ರ!!

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ತೊಂಬಟ್ಟು ಗ್ರಾಮ ಮತ್ತೆ ಸುದ್ದಿಯಾಗಿದೆ. ಇಲ್ಲಿನ ಕುಮಾರಿ ಲಕ್ಷ್ಮಿ ಪೂಜಾರಿ ಎಂಬಾಕೆ ಕಳೆದ ವರ್ಷದ ಮಾರ್ಚ್‌ನಲ್ಲಿ ಮನೆಬಿಟ್ಟು ಹೋದವಳು, ನಕ್ಸಲ್ ದಳದಲ್ಲಿ ಕಾಣಿಸಿಕೊಂಡಾಗ ತೊಂಬಟ್ಟು ಮೊದಲ ಬಾರಿಗೆ ಸುದ್ದಿಯಾಗಿತ್ತು. ಈದೀಗ ಗ್ರಾಮದ ಮೇಲ್ವರ್ಗದ ಜನರು ಅಮಾಯಕ ದಲಿತ ಮಹಿಳೆಗೆ ಏಡ್ಸ್ ಪಟ್ಟ ಕಟ್ಟುವುದರೊಂದಿಗೆ ಮತ್ತೆ ಸುದ್ದಿಯಾಗಿದೆ.

ಜಯಲಕ್ಷ್ಮಿ ಹಿನ್ನೆಲೆ

ಅಮಾಸೆಬೈಲು ಗ್ರಾಮ ಪಂಚಾಯತ್ ವ್ಯಾಪ್ತಿಯ ತೊಂಬಟ್ಟು ಗ್ರಾಮದ ಕಾಯಂವಾಸಿಯಾಗಿರುವ ಜಯಲಕ್ಷ್ಮಿ ಸುಬ್ಬಬೋವಿ ಎಂಬವರ ಪುತ್ರಿ. ಈಕೆಯ ಗಂಡ ಐದು ವರ್ಷಗಳ ಹಿಂದೆ ಕ್ಯಾನ್ಸರ್‌ನಿಂದ ಸಾವಿಗೀಡಾಗಿದ್ದರು.

ಅನಾರೋಗ್ಯ ಪೀಡಿತರಾಗಿರುವ ವೃದ್ಧ ತಂದೆ-ತಾಯಿಯವರನ್ನು ಹಾಗೂ ನಾಲ್ವರು ಅವಿವಾಹಿತರಾಗಿಯೇ ಉಳಿದಿರುವ ತಂಗಿಯಂದಿರನ್ನು ಮತ್ತು ಒಬ್ಬ ಮಗನನ್ನು ಸಾಕುವ ಜವಾಬ್ದಾರಿ ಜಯಲಕ್ಷ್ಮಿಯದಾಗಿದೆ.

ಅಲ್ಲಿ, ಇಲ್ಲಿ ಕೂಲಿ-ನಾಲಿ ಮಾಡಿ ಕುಟುಂಬವನ್ನು ಸಲಹುತ್ತಿದ್ದ ಜಯಲಕ್ಷ್ಮಿ ದಲಿತಳಾಗಿ ಹುಟ್ಟಿ ವಿಧವೆಯಾದ ಕಾರಣಕ್ಕಾಗಿ ಮೇಲ್ವರ್ಗದ ಜನರ ರಾಜಕೀಯ ಕುತಂತ್ರಕ್ಕೆ ಬಲಿಯಾಗಿದ್ದಾಳೆ.

ತೊಂಬಟ್ಟು ಗ್ರಾಮದಲ್ಲೇ ವಾಸವಾಗಿರುವ ಉಡುಪ ಎಂಬುವರ ಮನೆಯಲ್ಲಿ ಜಯಲಕ್ಷ್ಮಿ ಮೊದಲು ಅತೀ ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಿದ್ದಳು.

ಬ್ರಾಹ್ಮಣ ಜಾತಿಗೆ ಸೇರಿದ ಉಡುಪನ ಮನೆಯಲ್ಲಿ ಜೀತದಾಳುವಿನಂತೆ ದುಡಿದು ಹೈರಾಣಳಾದ ಜಯಲಕ್ಷ್ಮಿ ಸಹಜವಾಗಿಯೇ ಹೆಚ್ಚು ಸಂಬಳದ ಕೆಲಸ ಕೈ ಬೀಸಿ ಕರೆದಾಗ ನಿರಾಕರಿಸಲಾಗದೆ ಸ್ಥಳೀಯ ಹಿರಿಯ ಪ್ರಾಥಮಿಕ ಶಾಲೆಗೆ ಅಡುಗೆ ಸಹಾಯಕಿಯಾಗಿ ಸೇರಿದ್ದಳು.

ತೊಂಬಟ್ಟು ಸ್ವಾತಿ ಸ್ತ್ರೀಶಕ್ತಿ ಗುಂಪಿನ ಶಿಫಾರಸ್ಸಿನ ಮೂಲಕ ಅಕ್ಷರದಾಸೋಹ ಯೋಜನೆಗೆ ಇತರ ಇಬ್ಬರು ಮಹಿಳೆಯರ ಜತೆಗೆ ಅಡುಗೆ ಸಹಾಯಕಿಯಾಗಿ ಜುಲೈ ಎರಡರಂದು ಜಯಲಕ್ಷ್ಮಿ ಸೇರ್ಪಡೆಗೊಂಡಿದ್ದಳು.

ಹೀಗೆ ಅಡುಗೆ ಸಹಾಯಕಿಯಾಗಿ ತೊಂಬಟ್ಟು ಶಾಲೆಗೆ ಸೇರ್ಪಡೆಗೊಂಡ ಮರುದಿನದಿಂದಲೇ ವಿವಾದ ಆರಂಭಗೊಂಡಿತು.

ಏಡ್ಸ್ ರೋಗಿಯ ಪಟ್ಟ!

ಜಯಲಕ್ಷ್ಮಿಗೆ ಏಡ್ಸ್ ರೋಗವಿದೆ. ಆಕೆಯ ಗಂಡ ಕೂಡಾ ಐದು ವರ್ಷದ ಹಿಂದೆ ಏಡ್ಸ್ ರೋಗದಿಂದಲೇ ಮೃತಪಟ್ಟದ್ದಾನೆ. ಜಯಲಕ್ಷ್ಮಿ ಮಾಡಿದ ಅಡುಗೆ ತಿಂದರೆ, ಮಕ್ಕಳಿಗೂ ಏಡ್ಸ್ ರೋಗ ಹರಡಿಬಿಡುತ್ತೆ ಎಂಬ ವದಂತಿಯನ್ನು ತೊಂಬಟ್ಟು ಗ್ರಾಮದಾದ್ಯಂತ ಅತ್ಯಂತ ವ್ಯವಸ್ಥಿತವಾಗಿ ಹಬ್ಬಿಸಲಾಯಿತು.

ಶಾಲಾ ಎಸ್‌ಡಿಎಂಸಿಯಲ್ಲಿರುವ ಮೇಲ್ವರ್ಗಕ್ಕೆ ಸೇರಿದ ಸದಸ್ಯರು, ಕೆಲವು ಮಂದಿ ಶಾಲಾ ಶಿಕ್ಷಕರು ಹಾಗೂ ಗ್ರಾಮದ ಮೇಲ್ಜಾತಿಗೆ ಸೇರಿದ ಮೂರ್‍ನಾಲ್ಕು ಪಾಳೇಗಾರರು ಜಯಲಕ್ಷ್ಮಿ ವಿರುದ್ಧ ಅಪಪ್ರಚಾರ ನಡೆಸಿದ ಕುಖ್ಯಾತರು.

ಎಚ್‌ಐವಿ ಬಗ್ಗೆಯಾಗಲಿ, ಏಡ್ಸ್ ಕುರಿತಾಗಲಿ ಕಿಂಚಿತ್ತೂ ತಿಳಿವಳಿಕೆಯಿಲ್ಲದ ಊರವರು ತಮ್ಮ ಮಕ್ಕಳಿಗೆ ಶಾಲೆಯ ಊಟ ಮಾಡದಂತೆ ಸ್ಪಷ್ಟ ಎಚ್ಚರಿಕೆ ಕೊಟ್ಟು ಜಯಲಕ್ಷ್ಮಿ ಮಾಡುವ ಅಡುಗೆ ಬಗ್ಗೆ ಭಯ ಹುಟ್ಟಿಸುವಲ್ಲಿ ಯಶಸ್ವಿಯಾದರು.

ಒಂದರಿಂದ ಆರರವರೆಗಿನ ತರಗತಿಗಳಿರುವ ಈ ಸರ್ಕಾರಿ ಶಾಲೆಯಲ್ಲಿ 111 ಮಂದಿ ವಿದ್ಯಾರ್ಥಿಗಳಿದ್ದಾರೆ. ಕೇವಲ ಮೂವರು ವಿದ್ಯಾರ್ಥಿಗಳನ್ನು ಹೊರತುಪಡಿಸಿದರೆ ಇನ್ನುಳಿದ 108 ವಿದ್ಯಾರ್ಥಿಗಳು ಜುಲೈ ಮೂರರಿಂದ ಜಯಲಕ್ಷ್ಮಿ ಮಾಡಿದ ಅಡುಗೆ ಊಟವನ್ನು ತಿರಸ್ಕರಿಸಿದರು.

ಅರ್ಧಕ್ಕರ್ಧ ಮಕ್ಕಳು ಮಧ್ಯಾಹ್ನ ಊಟಕ್ಕಾಗಿ ಮನೆಗೆ ಹೋಗಿ ಬರಲಾರಂಭಿಸಿದರು. ಇನ್ನುಳಿದ ಮಕ್ಕಳು ಮನೆಯಿಂದ ಬುತ್ತಿ ತಂದು ಶಾಲೆಯಲ್ಲಿ ಊಟ ಮಾಡತೊಡಗಿದರು.

'ರೋಗಿ ಬಯಸಿದ್ದು ಹಾಲು ವೈದ್ಯ ಕೊಟ್ಟಿದ್ದು ಹಾಲು-ಹಣ್ಣು' ಎಂಬಂತೆ ಜಯಲಕ್ಷ್ಮಿ ವಿರುದ್ಧ ವದಂತಿ ಹಬ್ಬಿಸಿದ ಮನುವಾದಿಗಳ ಆಶಯ ಸಂಪೂರ್ಣವಾಗಿ ಈಡೇರಿಬಿಟ್ಟಿತು.

ಸಾಮಾಜಿಕ ಬಹಿಷ್ಕಾರ

ಈ ಬೆಳವಣಿಗೆಯ ಬೆನ್ನಿಗೆ ಎಸ್‌ಡಿಎಂಸಿ ಜಯಲಕ್ಷ್ಮಿಯನ್ನು ಅಡುಗೆ ಸಹಾಯಕಿಯ ಹುದ್ದೆಯಿಂದ ತೆಗೆದು ಹಾಕಿತು. ಪರಿಣಾಮವಾಗಿ ದಲಿತ ಸಮುದಾಯದ ವಿಧವೆ ಜಯಲಕ್ಷ್ಮಿ ಸಾಮಾಜಿಕ ಬಹಿಷ್ಕಾರವೆಂಬ ಭಯಾನಕ ಶಿಕ್ಷೆಕೆಗೆ ಗುರಿಯಾದಳು.

ಪ್ರಕರಣ ಮಾಧ್ಯಮಗಳ ಮೂಲಕ ಬೆಳಕಿಗೆ ಬರುತ್ತಲೇ ಪ್ರಗತಿಪರ ಚಿಂತಕರ ವೇದಿಕೆಯ ಕೇಶವ ಕೋಟೇಶ್ವರ ಜಯಲಕ್ಷ್ಮಿ ಪರವಾಗಿ ಧ್ವನಿ ಎತ್ತಿದರು. ಬಿಜೆಪಿಯಲ್ಲಿದ್ದರೂ ಇಲ್ಲದಂತಿರುವ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಮುಂತಾದವರು ಧ್ವನಿಗೆ ಧ್ವನಿಗೂಡಿಸಿದರು.

ವಿಷಯ ವಿವಾದಕ್ಕೀಡಾಗುತ್ತಲೇ ಶಿಕ್ಷಣ ಇಲಾಖೆ ಜಯಲಕ್ಷ್ಮಿಯನ್ನು ಅಡುಗೆ ಸಹಾಯಕಿಯನ್ನಾಗಿ ಮರು ನೇಮಕ ಮಾಡುವಂತೆ ಆದೇಶಿಸಿತು.

ನಿರ್ವಾಹವೇ ಇಲ್ಲದೆ ಶಾಲಾ ಮುಖ್ಯೋಪಾಧ್ಯಾಯರು ಜಯಲಕ್ಷ್ಮಿಯನ್ನು ಕೆಲಸಕ್ಕೆ ಸೇರ್ಪಡೆಗೊಳಿಸಿದರು. ಇದನ್ನು ಸಹಿಸದೆ ಒಂದಿಬ್ಬರು ಎಸ್‌ಡಿಎಂಸಿ ಸದಸ್ಯರು ಸಮಿತಿಗೆ ರಾಜೀನಾಮೆಯನ್ನೂ ನೀಡಿ, ಇಡೀ ಪ್ರಕರಣದಲ್ಲಿ ತಮ್ಮ ಪಾತ್ರ ಏನು ಎಂಬುದನ್ನು ಬಹಿರಂಗಪಡಿಸಿದರು.

ಶಾಲಾ ಶಿಕ್ಷಕ ವೃಂದ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದರೆ ಈ ವಿವಾದ ತಾರಕಕ್ಕೇರುತ್ತಿರಲಿಲ್ಲ, ತರಗತಿಯಲ್ಲಿ ಮಕ್ಕಳಿಗೂ, ಸಭೆ ಕರೆದು ಹೆತ್ತವರಿಗೂ ವಿಚಾರವನ್ನು ಮನದಟ್ಟು ಮಾಡುತ್ತಿದ್ದರೆ ಇದು ಇಷ್ಟು ಉದ್ದ ಎಳೆಯುತ್ತಿರಲಿಲ್ಲ.

ಒಂದಿಬ್ಬರು ಜಯಲಕ್ಷ್ಮಿಗೆ "ನೀನು ಏಡ್ಸ್ ರೋಗಿ" ಎಂದು ಬಹಿರಂಗವಾಗಿಯೇ ದಬಾಯಿಸಿದ ಘಟನೆಯೂ ಸಭೆಯೊಂದರಲ್ಲಿ ನಡೆದಿತ್ತು. ಇದಕ್ಕೆ ಪ್ರತಿಯಾಗಿ ಜಯಲಕ್ಷ್ಮಿ ತಾನು ಏಡ್ಸ್ ರೋಗಿಯಲ್ಲ ಎಂಬ ಕುರಿತು ವೈದ್ಯರಿಂದ ಪ್ರಮಾಣಪತ್ರವನ್ನು ತಂದು ತೋರಿಸಿದ್ದಳು. ಆದರೆ ಇದಾವುದೂ ಫಲ ಕೊಡಲಿಲ್ಲ. ಜಯಲಕ್ಷ್ಮಿ ತೊಂಬಟ್ಟು ಗ್ರಾಮದಲ್ಲಿ ಅಸ್ಪೃಶ್ಯಳಾಗಿಯೇ ಮುಂದುವರಿದಳು.

ಜಿಲ್ಲಾಡಳಿತ ನಿರ್ಲಕ್ಷ್ಯ

ಈ ನಡುವೆ ಜಯಲಕ್ಷ್ಮಿ ನಾಲ್ಕೈದು ಮಂದಿಯ ಹೆಸರನ್ನು ಉಲ್ಲೇಖಿಸಿ ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಎ. ಸುಬ್ರಹ್ಮಣ್ಯೇಶ್ವರ ರಾವ್ ಹಾಗೂ ಕುಂದಾಪುರ ಪೊಲೀಸ್ ಠಾಣೆಗೆ ದೂರು ನೀಡಿದರೆ, ಪೊಲೀಸರು ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸದೆ ಪಕ್ಷಪಾತ ಮೆರೆದರು. ಎಸ್.ಪಿ. ಡಾ. ... ರಾವ್ ತೊಂಬಟ್ಟು ಗ್ರಾಮಕ್ಕೆ ಭೇಟಿ ನೀಡಿ ಜಯಲಕ್ಷ್ಮಿ ಜತೆ ಮಾತುಕತೆ ನಡೆಸಿದರಾದರೂ ಆರೋಪಿಗಳನ್ನು ಬಂಧಿಸಿ ಜೈಲಿಗಟ್ಟುವ ದಿಟ್ಟತನ ಪ್ರದರ್ಶಿಸದೆ ಹೋದರು.


ಜಿಲ್ಲಾ ಪಂಚಾಯತ್ ಅಧ್ಯಕ್ಷ ಬಿ.ಎನ್. ಶಂಕರ ಪೂಜಾರಿ ನೇತೃತ್ವದಲ್ಲಿ ಜಿ.ಪಂ. ಸದಸ್ಯರು, ಶಿಕ್ಷಣ ಮತ್ತು ಆರೋಗ್ಯ ಇಲಾಖೆಯ ಕೆಲವು ಅಧಿಕಾರಿಗಳು ಹಾಗೂ ಪತ್ರಕರ್ತರು ತೊಂಬಟ್ಟು ಶಾಲೆಗೆ ಭೇಟಿ ಕೊಟ್ಟು ಜಯಲಕ್ಷ್ಮಿ ಮಾಡಿದ ಅಡುಗೆ ಊಟ ಉಂಡು ಪರಿಸ್ಥಿತಿಯನ್ನು ಬದಲಾಯಿಸಲು ಪ್ರಯತ್ನಿಸಿದರಾದರೂ, ಏನೇನೂ ಪ್ರಯೋಜನವಾಗಲಿಲ್ಲ.

ಈ ಹಿಂದೆ ಜಯಲಕ್ಷ್ಮಿ ಪರವಾಗಿ ಸ್ವಯಂ ಸೇವಾ ಸಂಸ್ಥೆಯೊಂದರ ವೀಣಾ ಶೆಟ್ಟಿ ಎಂಬುವರು ಏಡ್ಸ್ ಕುರಿತು ಮಾಹಿತಿ ನೀಡಲು ಶಾಲೆಗೆ ಹೋದಾಗ ಕೆಲವರು ಇವರ ಮೇಲೆ ಹಲ್ಲೆ ನಡೆಸಲು ಯತ್ನಿಸಿದ ಪ್ರಕರಣ ನಡೆದಿತ್ತು.

ಮನುಷ್ಯತ್ವವನ್ನೇ ಕಳೆದುಕೊಂಡಿರುವ ಈ ಮೇಲ್ಜಾತಿ ಜನರು ಇತ್ತೀಚೆಗೆ ಶಿಕ್ಷಣ ಇಲಾಖೆ ಮೂಲಕ ಶಾಲೆಯಲ್ಲಿ ಕರೆದ ಪೋಷಕರ ಸಭೆಗೆ ಹಾಜರಾಗದೆ ತಮ್ಮ ಮೊಂಡುತನವನ್ನು ಮುಂದುವರಿಸಿದರು.

ಕಡುಬಡ ದಲಿತ ಕುಟುಂಬದ ವಿಧವೆ ಜಯಲಕ್ಷ್ಮಿಗೆ ಮೇಲ್ಜಾತಿ ರಾಕ್ಷಸರು ತಮ್ಮ ಸ್ವಾರ್ಥ ಸಾಧನೆಗಾಗಿ ಏಡ್ಸ್ ಹಣೆಪಟ್ಟಿ ಹಚ್ಚಿ ಹಿಂಸಿಸುತ್ತಿದ್ದರೆ, ಜಿಲ್ಲಾಧಿಕಾರಿ ವಿ. ಪೊನ್ನುರಾಜ್ 'ಬಗ್ ಬಜಾರ್' ಸೇವೆಯಲ್ಲಿ ನಿರತರಾಗಿದ್ದಾರೆ. ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಿ.ಹೇಮಲತಾ ತಮಗೂ ಇದಕ್ಕೂ ಸಂಬಂಧವೇ ಇಲ್ಲ ಎಂಬಂತೆ ಮೌನಕ್ಕೆ ಶರಣು ಹೋಗಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ. ವಿ.ಎಸ್. ಆಚಾರ್ಯರು ರಸ್ತೆ ಅಗಲೀಕರಣದ ನೆಪ ಮುಂದಿಟ್ಟುಕೊಂಡು ಕಮಿಷನ್ ಹೊಡೆಯುವ ಸಂಚಿನಲ್ಲಿ ಮಗ್ನರಾಗಿದ್ದಾರೆ.

-ಶ್ರೀರಾಮ ದಿವಾಣ



ಕುಷ್ಟಗಿ : ಸಹಕಾರಿ ಬ್ಯಾಂಕನ್ನು ಮುಳುಗಿಸಿದ ದುಷ್ಟರು

ಭ್ರಷ್ಟ ವ್ಯವಸ್ಥೆ ದುಷ್ಟ ಅಧಿಕಾರಶಾಹಿ ಕೈ ಮಿಲಾಯಿಸಿ ಬ್ಯಾಂಕೊಂದನ್ನು ಹಳ್ಳ ಹಿಡಿಸಿದ ಕೆಲ ನಿರ್ದೇಶಕರನ್ನು ಬಚಾವ್ ಮಾಡಲು ಬ್ಯಾಂಕಿನ ಇಡೀ ಆಡಳಿತ ಮಂಡಳಿಯನ್ನೇ ಸೂಪರ್ ಸಿಡ್ ಮಾಡಿದ್ದು ಕುಷ್ಟಗಿ ತಲ್ಲಣಗೊಂಡಿದೆ. ಜೊತೆಗೆ ನಿಯತ್ತಿನವರ ಮೇಲೂ ಸಾಮಾನ್ಯ ಜನ, ಶೇರುದಾರರು ಅನುಮಾನಪಡುವಂತಾಗಿದೆ. ಆದರೆ ಉಮೇಶ್ ಮಂಗಳೂರು, ಕಿಶೋರ್ ಹಿರೇಮಠ, ಶಶಿಧರ ಕವಲಿ, ಮ್ಯಾನೇಜರ್ ಉಮಾ ಬಳ್ಳೊಳ್ಳಿ ಮುಖದ ಮೇಲೆ ಕೊನೆಗೂ ಬಚಾವ್ ಆದೇವು ಎಂಬ ನೆಮ್ಮದಿ.

ವರ್ಷವೊಂದಕ್ಕೆ ಮೂರು ಕೋಟಿ ಟರ್ನ್‌ಓವರ್ ಮಾಡುತ್ತಿದ್ದ ಪುಟ್ಟ ಊರು ಕುಷ್ಟಗಿಯ 'ಕುಷ್ಟಗಿಯ ಕೋ-ಆಪ್ ಬ್ಯಾಂಕ್' ಈಗ ಸಾಯುವ ಸ್ಥಿತಿಗೆ ಬಂದಿದೆ. ಸೂಪರ್‌ಸೀಡ್ ಮಾಡಿ ತಿಂಗಳಾದರೂ ಲೆಕ್ಕ ನೋಡಬೇಕಾದ ಸಹಕಾರ ಇಲಾಖೆಯ ಡಿ.ಆರ್. ಜಬ್ಬಾರ್ ಬೇಗ್ 'ಕುಷ್ಟಗಿ ಯಾವ ದಿಕ್ಕಿಗೆ ಐತಿ' ಅಂತ ಕೇಳುತ್ತಾನೆ ಹೊರತು ಒಂದ್ಹೆಜ್ಜೆ ಮುಂದಿಡುತ್ತಿಲ್ಲ. ಮ್ಯಾನೇಜರ್ ಉಮಾ ಬಳ್ಳೊಳ್ಳಿಯಂತು ಅತ್ತ ಹುನಗುಂದ ಬ್ಯಾಂಕಿನಲ್ಲಿ ಕೆಲಸ ಮಾಡುತ್ತ ಇತ್ತ ಕೊಪ್ಪಳದಲ್ಲಿ ಎಲ್‌ಎಲ್‌ಬಿ ಓದುತ್ತ ಎರಡನ್ನೂ ಸಾಹಸಮಯವಾಗಿ ನಿಭಾಯಿಸುತ್ತಿದ್ದಾಳೆ.

ಬಹುತೇಕ ಬಡಜನರ ಹಣದಿಂದಲೇ ಮೇಲೆದ್ದ ಕುಷ್ಟಗಿ ಕೋ-ಆಪ್ ಬ್ಯಾಂಕ್ ಪಂಚಯ್ಯ ಮಳೀಮಠ, ಶರಣಪ್ಪ ಕರಡಿಯವರ ಮುಂದಾಳತ್ವದಲ್ಲಿ ಆರಂಭವಾಯಿತಾದರೂ, ಅವರ ಸಂಬಂಧಿಕರೇ ಸಿಬ್ಬಂದಿಯಾದಾಗ ಏನು ಆಗಬೇಕಿತ್ತೋ ಅದು ಆಗತೊಡಗಿತ್ತು. ಎರಡು ಸಾವಿರಕ್ಕೂ ಹೆಚ್ಚಿರುವ ಶೇರುದಾರರ ಅಂದಾಜು 20 ಲಕ್ಷ ಠೇವಣಿ ಹಣ, ಉಳಿತಾಯದ 15 ಲಕ್ಷ, ಎಫ್.ಡಿ.ಯ 40 ಲಕ್ಷ ಒಟ್ಟು ಹತ್ತಿರ ಕೋಟಿಯಷ್ಟು ಹಣ ಬ್ಯಾಂಕ್ ವಾಪಸ್ಸು ಮಾಡಬೇಕಾಗಿದೆ. ಲೆಕ್ಕಪತ್ರ ನೋಡಿ ಶೇರುದಾರರಿಗೆ ಕೊಡಬೇಕಾದ್ದನ್ನು ಕೊಟ್ಟು, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕಾದ ಬೇಗ್ ಕುರ್ಚಿ ... ಬಿಟ್ಟಿಲ್ಲ.

ಈ ಬ್ಯಾಂಕಿನ ಒಂದು ವಿಶೇಷತೆ ಅಂದ್ರೆ ಅಸಲಿಗೆ ದುಡ್ಡು, ಬಡ್ಡಿ ... ಅಕ್ಕ-ತಂಗಿ, ರೊಕ್ಕ ಕಟ್ರಿ ಅಂತ ಯಾರೂ ಕೇಳೋಲ್ಲ. ಏನಾದರೂ ... ಹೋದ ನಿರ್ದೇಶಕ ಬಸವನಗೌಡ ಪಾಟೀಲ್‌ರ ಮೇಲೆ ಉಮೇಶ ... ಖದೀಮರು ಹಲ್ಲೆ ಮಾಡಿ, ಕೇಸ್ ಮೈಮೇಲೆ ಎಳೆದುಕೊಂಡು, ಜಾಮೀನು ತಗೊಂಡು ವೀರನಂತೆ ಓಡಾಡುತ್ತಾರೆ.

ಒಂದು ಲಕ್ಷ ಸಾಲಕ್ಕೆ 70 ಸಾವಿರ ಬೆಲೆ ಆಸ್ತಿ ಜಾಮೀನು ಕೊಟ್ರೂ ನಡೆಯುತ್ತೆ ಇಲ್ಲಿ. ಇಂತಹ ಬ್ಯಾಂಕಿನಲ್ಲಿ ಕಳೆದ ಮಾರ್ಚ್‌ನಲ್ಲಿ ಆಡಿಟ್ ಆದಾಗ ಬ್ಯಾಂಕಿಗೆ 5 ಲಕ್ಷ ಲಾಭ ಎಂದು ಹೇಳಿಕೊಂಡು ತಿರುಗಿದರು. ನಂತರ ನಿರ್ದೇಶಕ ಬಸವನಗೌಡ ಪಾಟೀಲ್‌ರ ಮನವಿಯಂತೆ ಲೆಕ್ಕ ಪರಿಶೋಧನಾ ಇಲಾಖೆ ತನಿಖೆ ಮಾಡಿದಾಗ 44 ಲಕ್ಷಗಳ ಅಪರಾತಪರಾ ಪತ್ತೆ.

ಕುಷ್ಟಗಿಯಲ್ಲಿ ಸಾಲ ಪಡೆದ ಸಾಮಾನ್ಯರಿಗಿಂತ ಬ್ಯಾಂಕಿನವರೇ ರೊಕ್ಕ ಎತ್ತಿದ್ದೇ ದೊಡ್ಡ ಲಿಸ್ಟು. ಅಧ್ಯಕ್ಷನಾಗಿದ್ದ ಉಮೇಶ ಮಂಗಳೂರು ತನ್ನ ಮಾವನ ಹೆಸರಲ್ಲಿ 1 ಲಕ್ಷ, ಚಿಕ್ಕಪ್ಪನ ಮಗನ ಹೆಸರಲ್ಲಿ 2 ಲಕ್ಷ, ಮಾಜಿ ಅಧ್ಯಕ್ಷ ಶಶಿಧರ್ ತನ್ನ ಮಾವನ ಹೆಸರಲ್ಲಿ 3 ಲಕ್ಷ, ನಿರ್ದೇಶಕ ಕಿಶೋರ್ ಹಿರೇಮಠ ತನ್ನ ತಮ್ಮನ ಹೆಸರಲ್ಲಿ 60 ಸಾವಿರ, ಶಶಿಧರ್ ಕವಲಿ ತನ್ನ ಮಾವನ ಹೆಸರಲ್ಲಿ 3 ಲಕ್ಷ, ಮ್ಯಾನೇಜರ್ ಉಮಾ ಬಳ್ಳೊಳ್ಳಿ ತನ್ನ ಹೆಸರಲ್ಲಿ 1 ಲಕ್ಷ.... ಹೀಗೆ ಹೇಗೆಂದರೆ ಹಾಗೆ ಎತ್ತಿದ್ದು ಅಲ್ಲದೇ ಬೇಕಾದವರಿಗೂ ಬೇಕಾಬಿಟ್ಟಿ ಸಾಲ ಹಂಚಿಬಿಟ್ಟಿದ್ದಾರೆ.







ಉಮಾ ಬಳ್ಳೊಳ್ಳಿ
ಉಮೇಶ್,
ಶಶಿಧರ್

ಇನ್ನೊಂದು ಮಜಾ ಏನೆಂದರೆ ಮ್ಯಾನೇಜರ್ ಉಮಾ ಬಳ್ಳೊಳ್ಳಿ ಸಂಬಂಧಿಕ ಅಶೋಕ ಬಳ್ಳೊಳ್ಳಿಗೆ ಯಲ್ಬುರ್ಗಾದ ಎಲ್.ಐ.ಸಿ. ಏಜೆಂಟ್ ಮೇರೆಸಾಬ ನೂರಬಾಷಾ ಎಂಬಾತ ಸಾಲವಾಗಿ ಪಡೆದಿದ್ದ 1 ಲಕ್ಷ ಕೊಡಬೇಕಿತ್ತು, ಅದನ್ನು ವಸೂಲಿ ಮಾಡಲು ಇವರು ಮಾಡಿದ್ದೇನು ಗೊತ್ತೇ? ನೂರಬಾಷಾನ ಹೆಸರಲ್ಲಿ ಬ್ಯಾಂಕಿನಲ್ಲಿ 2 ಲಕ್ಷ ಸಾಲ ಎತ್ತಿ ತಮ್ಮ 1 ಲಕ್ಷ ಮುರಕೊಂಡು, ಉಳಿದ 1 ಲಕ್ಷ ನೂರಬಾಷಾಗೆ ಕೊಟ್ಟಿದ್ದಾರೆ. ಬ್ಯಾಂಕಿನ ಮೂವರು ಸಿಬ್ಬಂದಿಗಳೇ 6 ಲಕ್ಷ ಸಾಲ ಎತ್ತಿದ್ದರೆ, 3 ನಿರ್ದೇಶಕರು ಆನ್‌ಲೈನ್ ಲಾಟರಿ ಸೆಂಟರ್ ಮಾಡಿ ಕಂಗಾಲೆದ್ದು ಹೋದರು.

ಇಡೀ ಬ್ಯಾಂಕಿನ ಹಗರಣ ಬಯಲಾಗಿ, ಇವರೆಲ್ಲ ಬ್ಯಾಂಕಿನಲ್ಲಿ ಮಾಡಿರುವ ಹೊಲಸು ಕುಷ್ಟಗಿ ತುಂಬ ನಾರತೊಡಗಿದಾಗ, ಬ್ಯಾಂಕಿಗೆ ಬೀಗ ಹಾಕಿ ತೋಟವೊಂದರಲ್ಲಿ ಮೀಟಿಂಗ್ ಮಾಡಿ ಉಮೇಶನನ್ನು ಅಧ್ಯಕ್ಷಸ್ಥಾನದಿಂದ ಕೆಳಗಿಳಿಸಿ ಪ್ರಭಾಕರ ಕಂದಕೂರನನ್ನು ಕೂಡ್ರಿಸಿದರೂ ಬ್ಯಾಂಕನ್ನು ಉದ್ಧಾರ ಮಾಡಲಾಗಲಿಲ್ಲ.

ಯಾವಾಗ ಎತ್ತಿರುವ ಸಾಲವೆಲ್ಲ ಕಕ್ಕಬೇಕಾದೀತು ಅಂತ ಅನ್ನಿಸತೊಡಗಿತೋ, ಆ ಬ್ಯಾಂಕಿನ ಆಡಳಿತ ಮಂಡಳಿಯ ಕೆಲ ದುಷ್ಟ ನಿರ್ದೇಶಕರು ಮಾಡಿಕೊಂಡ ಮನವಿ ಮೇಲೆ ಸಹಕಾರ ಇಲಾಖೆ ಯಾವುಯಾವುದೋ ಕಾಯ್ದೆ-ಕಲಂ ಬರೆದು ನಿಮ್ಮ ಆಡಳಿತ ಮಂಡಳಿಯನ್ನು ಯಾಕೆ ರದ್ದು ಮಾಡಬಾರದು ಅಂತ ಎಲ್ಲ 11 ಜನ ಸದಸ್ಯರಿಗೆ ನೋಟಿಸ್ ಕೊಟ್ಟಿದ್ದಾರೆ. ಆದರೆ ಉಪಾಧ್ಯಕ್ಷ ಅಶೋಕ ಸ್ವಾಮಿ, ನಿರ್ದೇಶಕರಾದ ಬಸವನಗೌಡ ಪಾಟೀಲ್, ಶಾರದಾ ಹಿರೇಮಠ ಬಿಟ್ರೆ ಉಳಿದವರೆಲ್ಲ ರದ್ದು ಮಾಡಿಕೋ ಹೋಗಿ ಅಂತ ನೋಟೀಸನ್ನು ಅಂದಿನ ಬುಡಕ್ಕಿಟ್ಟುಕೊಂಡಿದ್ದಾರೆ. ಇಷ್ಟಂದದ್ದೇ ತಡ, ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಖದೀಮರನ್ನು ಬಚಾವ್ ಮಾಡುತ್ತಿದ್ದಾರೆ.

ಇದಕ್ಕೂ ಮುನ್ನ ಇದೇ ಬ್ಯಾಂಕನ್ನು ಬೇರೊಂದು ಬ್ಯಾಂಕಿನಲ್ಲಿ ಮರ್ಜ್ ಮಾಡುವ ಪ್ರಯತ್ನವೂ ನಡೆಯಿತು. ಆದರೆ ಅದು ತಮ್ಮ ಬುಡಕ್ಕೆ ನೀರು ಬಿಟ್ಟುಕೊಂಡಂಗೆ ಅಂದುಕೊಂಡು ಬ್ಯಾಂಕನ್ನು ಸೂಪರ್ ಸೀಡ್ ಮಾಡಿಸಿ, ಈಗ ಒಂದು ತಿಂಗಳಾದರೂ ಲೆಕ್ಕಪತ್ರಗಳ ತಪಾಸಣೆ ನಡೆಯುತ್ತಿಲ್ಲ. ಅಲ್ಲಿ ಏನೇನು ದಾಖಲೆಗಳು ನಾಪತ್ತೆಯಾಗುತ್ತಿದ್ದಾವೋ ಬಲ್ಲವರಾರು?


ವಿಪರ್ಯಾಸವೆಂದರೆ ಕುಷ್ಟಗಿ ಕೋ-ಆಪ್ ಬ್ಯಾಂಕ್ ಸದ್ದಿಲ್ಲದೇ ಸಾಯುತ್ತಿರುವ ಹೊತ್ತಿನಲ್ಲಿ ಜಿಲ್ಲೆಯ ಮೂವರು ಸಹಕಾರಿ ರತ್ನ ಪ್ರಶಸ್ತಿ ಹೊಡಕೊಂಡು, ನಿತ್ಯ ಪತ್ರಿಕೆಗಳಲ್ಲಿ ಜಾಹೀರಾತುಗಳ ಮೂಲಕ ಮಿಂಚುತ್ತಿದ್ದಾರೆ. ಈ ಮೂವರೂ ರಾಜಕಾರಣಿಗಳೇ. ಇವರಿಗೆ ಪ್ರಚಾರ ಅನಿವಾರ್ಯ. ಬ್ಯಾಂಕು ಉಳಿಯುವುದು ಅವರಿಗೆ ಬೇಕಿಲ್ಲ. ಏಕೆಂದರೆ ಕುಷ್ಟಗಿ ಬ್ಯಾಂಕ್‌ನ್ನು ಇಂತಹದ್ದೇ ರಾಜಕೀಯ ತಾನೇ ಮುಳುಗಿಸಿದ್ದು? ಇವರಲ್ಲಿ ಕೆಲವರು ಮುಂಬರುವ ಪುರಸಭೆ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ. ಕುಷ್ಟಗಿ ಜನ ಹುಷಾರಾಗಿರುವುದು ಒಳ್ಳೆಯದು. ಇಂದು ಗೆದ್ದರೆ ನಾಳೆ ಪುರಸಭೆಯನ್ನು ಮಾರುವುದಿಲ್ಲ ಅಂತ ಏನು ಗ್ಯಾರಂಟಿ?

-ವಿದ್ಯಾಸಾಗರ

ರಾಜನು ಖಂಡಿತ ಬರುವನೆಂದೇ ನಾನು ದೃಢವಾಗಿ ನಂಬಿದ್ದೆ. ರಾತ್ರಿ ಯಾವಾಗಲೂ ಒಂದು ಎಲೆ ಊಟವನ್ನು ತೆಗೆದಿಡಲು ನನ್ನ ಹೆಂಡತಿಗೆ ಹೇಳುತ್ತಿದ್ದೆ. ಅವನು ಯಾವ ಹೊತ್ತಿಗಾದರೂ ಬರಬಹುದು, ಉಪವಾಸವಿದ್ದು ಹಸಿದ ಹೊಟ್ಟೆಯೊಡನೆ, ದುರ್ಬಲ ದೇಹದೊಡನೆ ಆತನು ಬರುವಾಗ ಆತನಿಗಾಗಿ ಊಟ ತೆಗೆದಿಡಬೇಕು. ಆತನಿಂದ ಬರದಿರಲಾಗುವುದಿಲ್ಲ. ನಾಯಿಗಳು ನಿಷ್ಕಾರಣವಾಗಿ ಬೊಗಳುತ್ತಾ ಶಬ್ದ ಮಾಡುವ ರಾತ್ರಿಗಳಲ್ಲಿ ತಲೆ ಬಾಗಿಲು ತೆರೆದು, 'ಅಪ್ಪಾ' ಎಂಬ ಕರೆ ಕೇಳಿ ಬರುತ್ತಿದೆಯೇ ಎಂದು ನಾನು ಕಿವಿಗೊಟ್ಟು ಆಲಿಸುತ್ತಾ ನಿಲ್ಲುತ್ತಿದ್ದೆ. ಬಳಿಕ ಬಾಗಿಲು ಮುಚ್ಚದೆ ಹಾಸಿಗೆಯ ಮೇಲೆ ಬೀಳುತ್ತಿದ್ದೆ. 'ಮಗೂ.....' ಎಂಬ ಅಳು ನನ್ನೆದೆಯಲ್ಲಿ ಗದ್ಗದವಾಗಿ ಹೊರಬರಲು ತವಕಿಸುತ್ತಿತ್ತು. ■


ಆತನಿಗಾಗಿ ಕಾಯುತ್ತಿರುವ ಎಲೆ ಊಟ

ತಂದೆಯ ನೆನಪುಗಳು



■ ಈಚಾರ ವಾರಿಯರ್

ಕನ್ನಡಕ್ಕೆ: ಸಾರಾ ಅಬೂಬಕರ್



1976 ಮಾರ್ಚ್ 10. ತುರ್ತು ಪರಿ ಸ್ಥಿತಿಯ ನಿಗೂಢವಾದ ಸ್ಪರ್ಶವೊಂದು ಆ ಕಟ್ಟಡಕ್ಕೂ ತಗುಲಿ ಕೊಂಡಂತೆ ತಿರುವನಂತಪುರದ ಮನಮೋಹನ ಅರಮನೆ ಗಲಭೆಗಳಿಲ್ಲದೆ ಶಾಂತವಾಗಿತ್ತು. ಗೃಹಮಂತ್ರಿ ವಾಸಿಸುತ್ತಿದ್ದ ಆ ಕಟ್ಟಡದಲ್ಲಿ ಖಾದಿಧಾರಿಗಳ ಓಡಾಟ ಕೂಡಾ ಇಲ್ಲದೆ ನಿಶ್ಶಬ್ದವಾಗಿತ್ತು.

ಗೃಹ ಮಂತ್ರಿ ಕರುಣಾಕರರ ಕೋಣೆ ಪ್ರವೇಶಿಸಲು ಬಹಳ ಹೊತ್ತು ಕಾಯಬೇಕಾಗಿರಲಿಲ್ಲ. ಕೋಝಿಕೋಡ್ ರೀಜನಲ್ ಇಂಜಿನಿಯರಿಂಗ್ ಕಾಲೇಜು ಹಾಸ್ಟೆಲಿನ ಅಂಗಳದಿಂದ ಪೊಲೀಸರು ಹಿಡಿದುಕೊಂಡು ಹೋದ ನನ್ನ ಮಗನ ಅನ್ವೇಷಣೆಗಾಗಿ ನಾನು ತಟ್ಟುತ್ತಿರುವ ಕೊನೆಯ ಬಾಗಿಲುಗಳಲ್ಲಿ ಒಂದಾಗಿತ್ತು ಅದು; ಕೇರಳ ಗೃಹಮಂತ್ರಿ ಕರುಣಾಕರರ ಮನೆ. ಆರ್. ಸುರೇಂದ್ರನ್ ಎಂಬ ಓರ್ವ ಹಳೆಯ ವಿದ್ಯಾರ್ಥಿ ಹಾಗೂ ಸ್ನೇಹಿತರಾದ ಎರ್ನಾಕುಲಂನ ವೆಣ್ಣಲದ ಓರ್ವ ಪ್ರೊಫೆಸರ್ ನನ್ನೊಡನಿದ್ದರು. ಪ್ರೊಫೆಸರ್ ಕರುಣಾಕರರ ನಿಕಟ ಸ್ನೇಹಿತರಾಗಿದ್ದರು. ಕೋಝಿಕೋಡಿನಿಂದ ಬೇಗನೆ ಹೊರಟ ನಾನು ಮತ್ತು ಸುರೇಂದ್ರ ಬೆಳಗಾಗುವ ಮೊದಲೇ ಎರ್ನಾಕುಲಂ ಉತ್ತರ ರೈಲುನಿಲ್ದಾಣ ತಲುಪಿದೆವು. ಬೆಳಗಾಗುವವರೆಗೆ ಸೊಳ್ಳೆಗಳ ಕಾಟ ಹಾಗೂ ಮಂಜನ್ನು ಸಹಿಸಿಕೊಂಡು ಸಿಮೆಂಟು ಬೆಂಚಿನಲ್ಲಿ ಮಲಗಿದೆ. ಮನಸ್ಸು ಉರಿಯುತ್ತಿತ್ತು. ಮೂರು ನಾಲ್ಕು ಕಿಲೋಮೀಟರ್ ದೂರದಲ್ಲಿ ಪೆಹ್ಕದ ನಿಲಯದಲ್ಲಿ ರಾಜನ ಅಮ್ಮ ಮತ್ತು ಸಹೋದರಿಯರು ಈ ಬೆಂಕಿಯ ಶಾಖದ ಅರಿವಿಲ್ಲದೆ ನಿದ್ರಿಸುತ್ತಿರಬಹುದು. ಬೆಳಗಾಗುತ್ತಿದ್ದಂತೆ ವೆಣ್ಣಲ ತಲುಪಿ ಪ್ರೊಫೆಸರನ್ನು ಕಂಡು ವಿಷಯ ತಿಳಿಸಿದೆ. ಕೂಡಲೇ ಅವರು ನನ್ನೊಡನೆ ಹೊರಟರು. ರಾಜನ ಕಣ್ಮರೆ ಆತನನ್ನೂ ತಳಮಳಗೊಳ್ಳುವಂತೆ ಮಾಡಿದಂತಿತ್ತು. ಕರುಣಾಕರರ ಮನೆಯ ಅಡುಗೆಮನೆಯವರೆಗೆ ಪ್ರವೇಶವಿದ್ದವರಾಗಿದ್ದರು ಪ್ರೊಫೆಸರ್. ಕರುಣಾಕರರ ಪತ್ನಿ ಕಲ್ಯಾಣಿ ಕುಟ್ಟಿಗೆ ಕೂಡಾ ಪ್ರೊಫೆಸರರಲ್ಲಿ ಆತ್ಮೀಯತೆ ಇತ್ತು.

ತಿರುವನಂತಪುರಕ್ಕೆ ತಲುಪಿದೊಡನೆ ಪ್ರೊಫೆಸರ್, ಮನಮೋಹನ ಅರಮನೆಗೆ ಹೋಗಿ ಕರುಣಾಕರರೊಡನೆ ಭೇಟಿಯಾಗಲು ಮರುದಿನ ಬೆಳಿಗ್ಗೆ ಹತ್ತು ಗಂಟೆ ವೇಳೆ ನಿಗದಿಪಡಿಸಿಕೊಂಡು ಬಂದಿದರು.

ಕರುಣಾಕರನ್ ಮನಮೋಹನ ಅರಮನೆಯ ಒಳಭಾಗದಿಂದ ನಗುನಗುತ್ತಾ ಹೊರಬಂದರು. ನನ್ನನ್ನು ಕಂಡೊಡನೆ ಆತನ ಮುಖದಲ್ಲಿ ಒಂದು ವಿಷಾದದ ಛಾಯೆ ಹರಡಿತೇ? ನನಗೆ ಅನ್ನಿಸಿದ್ದಿರಬಹುದು. ನಾನು ಮನವನ್ನು ಸಂತೈಸಲೆತ್ನಿಸಿದೆ. ಆತನು ಆಕ್ಷೇಪಣೆಯ ಧ್ವನಿಯಲ್ಲಿ ನನ್ನೊಡನೆ,

'ಮೇಷ್ಟ್ರು ಈ ವಿಷಯ ಮೊದಲೇ ಯಾಕೆ ತಿಳಿಸಲಿಲ್ಲ? ಗೊತ್ತಿದ್ದಿದ್ದರೆ ನಾನು ಮೊದಲೇ ಎಲ್ಲವನ್ನೂ ಸರಿಪಡಿಸುತ್ತಿದ್ದೆನಲ್ಲಾ?....' ಕರುಣಾಕರನ್ ಒಂದು ನಿಮಿಷ ನಿಲ್ಲಿಸಿದರು. ನನ್ನೆದೆಯಲ್ಲಿ ಒಂದು ಮಿಂಚು.


'ಮತ್ತೇ..... ರಾಜನೆಂಬ ಹೆಸರು ಕೇಳುವಾಗ ತುಂಬಾ ಪರಿಚಯವಿರುವವರಂತಿದೆ. ಗಂಭೀರವಾದ ಯಾವುದೋ ಮೊಕದ್ದಮೆಯಲ್ಲಿ ಆತ ಸಿಲುಕಿಕೊಂಡಂತೆ.'

ನಾನು ಕರುಣಾಕರನಿಗೆ ಕೈಮುಗಿದೆ. ನನ್ನ ಧ್ವನಿ ನಡುಗಿ ವಿಕಾರವಾಯಿತು. 'ಇಲ್ಲ, ಅವನಿಗೆ ಅದೆಲ್ಲ ಸಾಧ್ಯವಿಲ್ಲ. ಕಾಯಣ್ಣ ಪೊಲೀಸ್ ಸ್ಟೇಷನ್ ಮೇಲೆ ಆಕ್ರಮಣವಾದಾಗ ನನ್ನ ಮಗನು ಫರೂಕ್ ಕಾಲೇಜಿನಲ್ಲಿ ಯುವಜನೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದನು. ರಾಜನು ಇಂಜಿನಿಯರಿಂಗ್ ಕಾಲೇಜಿನ ಕಲಾ ಸಂಘದ ಕಾರ್ಯದರ್ಶಿಯಾಗಿದ್ದನು.'

ಕರುಣಾಕರನು ನನ್ನ ಬೆನ್ನನ್ನು ಮುಟ್ಟಿದನು. ಆತನ ಧ್ವನಿ ಬಹಳ ಮೃದುವಾಗಿತ್ತು. 'ನಾನು ಎಲ್ಲವನ್ನೂ ಕಂಡುಹಿಡಿದು ಕೂಡಲೇ ವಿವರ ತಿಳಿಸುವೆ. ನನ್ನಿಂದಾದಷ್ಟು ಪ್ರಯತ್ನಿಸುವೆ. ಮೇಷ್ಟ್ರು ಮತ್ತು ನನ್ನೊಳಗಿರುವ ಸಂಬಂಧ ಅಂತಹುದಲ್ಲವಾ?' ಎಂದರವರು ನಾನು ಮತ್ತೊಮ್ಮೆ ಆತನಿಗೆ ಕೈಮುಗಿದೆ.

ಮನಮೋಹನ ಅರಮನೆಯ ಅಂಗಳದ ಬಿಸಿಲಲ್ಲಿ ನನ್ನ ಕಣ್ಣುಗಳು ಹಳದಿಯಾದುವು. ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಸುತ್ತಿರುವ ನನ್ನ ಹಳೆಯ ವಿದ್ಯಾರ್ಥಿ ಸುರೇಂದ್ರನ ಕೈಗಳು ನನ್ನನ್ನು ಬಿಗಿದಪ್ಪಿಕೊಂಡವು. ನಿರೀಕ್ಷೆಯ ಕೊನೆಯ ಎಳೆ ಕೂಡಾ ಕಡಿಯುತ್ತಿದೆಯೇ?

1976 ಫೆಬ್ರವರಿ ದಿನಾಂಕ 24 ರಂದು ನಾನು ನನ್ನ ಮಗ ರಾಜನನ್ನು ಕೊನೆಯ ಬಾರಿಗೆ ನೋಡಿದೆ. ಆತನಾಗ ಕೋಝಿಕೋಡಿನಿಂದ 13ಕಿ.ಮೀ. ದೂರವಿರುವ ಜಾತಮಂಗಲದ ರೀಜನಲ್ ಇಂಜನಿಯರಿಂಗ್ ಕಾಲೇಜಿನಲ್ಲಿ ಕೊನೆಯ ವರ್ಷದ ವಿದ್ಯಾರ್ಥಿಯಾಗಿದ್ದನು. ನಾನು ಕೋಝಿಕೋಡ್ ಸರಕಾರೀ ಆರ್ಟ್ಸ್ ಕಾಲೇಜಿನಲ್ಲಿ ಹಿಂದಿ ಪ್ರೊಫೆಸರ್ ಆಗಿದ್ದೆ. ಮುತಲಕ್ಕೊಳದ ಬಳಿ ಇರುವ ಜನರಲ್ ಆಸ್ಪತ್ರೆಯ ಎದುರುಭಾಗದಲ್ಲಿರುವ ಕೇರಳ ಭವನ ಲಾಡ್ಜ್‌ನಲ್ಲಿ ನಾನು ವಾಸಿಸುತ್ತಿದ್ದೆ. ರಾಜನು ಆಗಾಗ ಬಂದು ನನ್ನನ್ನು ಭೇಟಿಯಾಗುತ್ತಿದ್ದನು.



ರಾಜನ್

ಸ್ವಲ್ಪ ಹಣ ತೆಗೆದುಕೊಳ್ಳಲು ಆತನು ಕೊನೆಯ ಬಾರಿ ಬಂದಿದ್ದನು. ಫೆಬ್ರವರಿ 26 ರಂದು ರಾತ್ರಿ 7 ಗಂಟೆಗೆ ನಾನು ಅವನನ್ನು ಬೀಳ್ಕೊಂಡೆ. ಪರೀಕ್ಷೆ ತಯಾರಿಯ ರಜೆ ದೊರೆತಾಗ ಊರಿಗೆ ಬರಬೇಕೆಂದು ಹೇಳಿದ್ದಕ್ಕೆ ತಲೆಯಾಡಿಸಿ ಹೊರಟುಹೋದನು.

ಚೇರ್ಪಿನ ತಿರುವಳ್ಳಕ್ಕಾವು ವಾರಿಯತ್ತಿನಲ್ಲಿ ನನ್ನ ಜನನವಾಗಿತ್ತು. ಮನೆತನದ ಆಸ್ತಿ ಪಾಲಾದ ಬಳಿಕ ಎರ್ನಾಕುಲಂನ ಪರಂಬತ್ತರ ರಸ್ತೆಯಲ್ಲಿ ಸೌಹಾರ್ದ ನಿಲಯವೆಂಬ ಹೆಸರಿನ ಮನೆ ಕಟ್ಟಿಸಿ ಅಲ್ಲಿರತೊಡಗಿದೆ. ನನ್ನ ಹೆಂಡತಿ ರಾಧಾ ವಾರಸ್ಯಾರ್ ಮತ್ತು ನನ್ನ ಮೂರು ಮಕ್ಕಳಲ್ಲದೆ ನನ್ನ ಸಹೋದರಿ ಕೊಚ್ಚಮ್ಮಿಣಿ ವಾರಸ್ಯಾರ್, ಆಕೆಯ ಗಂಡ, ರೈಲ್ವೆಯಲ್ಲಿ ಉದ್ಯೋಗದಲ್ಲಿರುವ ರಾಧಾಳ ಸಹೋದರ ಅಚ್ಯುತ ವಾರಿಯರ್ ಇವರೆಲ್ಲರೂ ನನ್ನೊಡನಿದ್ದರು.

1976 ಮಾರ್ಚ್ 1 ರಂದು ಸೋಮವಾರ ನಾನು ಕಾಲೇಜು ತಲುಪಿದಾಗಲಷ್ಟೆ ರಾಜನನ್ನು ಪೊಲೀಸರು ಹಿಡಿದುಕೊಂಡು ಹೋದ ವಿವರ ನನಗೆ ಲಭಿಸಿತು. ಈಗ ಡಿ.ಆರ್.ಡಿ.ಯಲ್ಲಿ ಎಂಜಿನಿಯರ್ ಆಗಿರುವ, ರಾಜನ ಸ್ನೇಹಿತ ಕರ್ಮ ಚಂದ್ರನೆಂಬುವನು ನನ್ನನ್ನು ಕರೆದು ವಿಷಯ ತಿಳಿಸಿದನು. ಆಗ ಸಮಯ 10 ಗಂಟೆಯಾಗಿರಲಿಲ್ಲ. ಪ್ರಿನ್ಸಿಪಾಲರ ಅನುಮತಿ ಪಡೆದು ನಾನು ಚೌತ್ತಮಂಗಲಕ್ಕೆ ಹೊರಟೆ.

ಕಾಲೇಜು ಪರಿಸರ ಸ್ಮಶಾನಸದೃಶವಾಗಿತ್ತು. 29ರ ಬೆಳಿಗ್ಗೆ ರಾಜನನ್ನು ಬಂಧಿಸಲಾಗಿತ್ತು. ಅದರ ಹಿಂದಿನ ದಿನ ಫಾರೂಕ್ ಕಾಲೇಜಿನ ಉತ್ಸವದಲ್ಲಿ ಭಾಗವಹಿಸಿ ಬೆಳಿಗ್ಗೆ ಹಾಸ್ಟೆಲಿನ ಮುಂದುಗಡೆ ಬಸ್ಸಿನಿಂದ ಇಳಿಯುತ್ತಿದ್ದಾಗ ಆತನನ್ನು ಬಂಧಿಸಲಾಗಿತ್ತು. ಆತನನ್ನು ಕೋಝಿಕೋಡಿಗೆ ಕರೆದೊಯ್ದು, ಬಳಿಕ ಕಾಯಣ್ಣ ಪೊಲೀಸ್ ಸ್ಟೇಷನ್ ಆಕ್ರಮಣದ ಅನ್ವೇಷಣೆಗಾಗಿ ಸ್ಥಾಪಿತವಾದ ಕಕ್ಕಯಂ ಕ್ಯಾಂಪಿಗೆ ಕರೆದೊಯ್ದರೆಂದು ತಿಳಿಯಿತು. ಕಕ್ಕಯಂ ಕ್ಯಾಂಪಿಗೆ ಹೋಗಿ ಹೋಗಿ ಪ್ರಯೋಜನವಿಲ್ಲವೆಂದು ತಿಳಿದರೂ ರಾಜನನ್ನು ಹುಡುಕಿಕೊಂಡು ನಾನು ಅಲ್ಲಿಗೆ ಹೋದೆ.

ಎಲೆಕ್ಟ್ರಿಸಿಟಿ ಬೋರ್ಡಿನ, ಆಸ್‌ಬಸ್ಟೋಸ್ ಹೊದಿಸಿದ ಹಳೆಯ ಕಟ್ಟಡದಲ್ಲಿ ಕಕ್ಕಯಂ ಕ್ಯಾಂಪ್ ಕಾರ್ಯ ನಿರ್ವಹಿಸುತ್ತಿತ್ತು. ಕ್ಯಾಂಪಿನ ಮುಂಭಾಗದಲ್ಲಿ ಕೆರೆಯಂತಹ ಒಂದು ಜಲಾಶಯವಿತ್ತು. ಈ ಜಲಾಶಯದ ಮೇಲ್ಭಾಗದಲ್ಲಿ ಒಂದು ಮರದ ಸೇತುವೆ ಹಾಕಿ ಕ್ಯಾಂಪ್ ತೀರಕ್ಕೆ ಸಂಪರ್ಕ ಕಲ್ಪಿಸಲಾಗಿತ್ತು. ಕೋವಿಯನ್ನು ಮೇಲಕ್ಕೆತ್ತಿ ಓರ್ವ ಪೊಲೀಸ್ ಪೇದೆ ಇಲ್ಲಿ ಸದಾ ಜಾಗರೂಕನಾಗಿ ನಿಂತಿರುತ್ತಿದ್ದನು.

ನಾನು ನೇರವಾಗಿ ಆತನ ಬಳಿಗೆ ಹೋಗಿ ನಾನು ಬಂದ ಉದ್ದೇಶ ತಿಳಿಸಿದೆ. ಆತನು ಬಹಳ ಗಂಭೀರವಾಗಿದ್ದನು. ಆದರೆ ನನ್ನೊಡನೆ ಕೆಟ್ಟದಾಗಿ ಒಂದು ಮಾತೂ ಆಡಲಿಲ್ಲ. ಆತನು ನೇರವಾಗಿ ಕ್ಯಾಂಪಿನ ಒಳಗಡೆ ಹೋದನು. ಜಯರಾಮ ಪಡಿಕ್ಕಲ್ ಎಂಬಾತನು ಕ್ಯಾಂಪಿನ ಸರ್ವಾಧಿಕಾರಿಯಾಗಿದ್ದನು. ಹಿಂತಿರುಗಿದ ಪೊಲೀಸ್ ಪೇದೆ, ಕ್ಯಾಂಪಿನೊಳಗೆ ಹೋಗಲು ನನಗೆ ಅನುಮತಿ ಇಲ್ಲವೆಂದೂ, ನನ್ನ ಮಗ ರಾಜನು ಕ್ಯಾಂಪಿನಲ್ಲಿ ಸುಖವಾಗಿದ್ದಾನೆಂದೂ ನನಗೆ ತಿಳಿಸಿದನು. ಕೂಡಲೇ ಮನ ತಂಪಾಯಿತು. ಕೂಡಲೇ ನಾನು, 'ನನಗೆ ನನ್ನ ಮಗನನ್ನು ನೋಡಬೇಕು' ಎಂದೆನು. ಆತನು ಪರ್ವ[...] ದಂತೆ ಮುಂದೆ ನಿಂತಿದ್ದನು. ನಾನು ಏಕಾಂಗಿಯಾಗಿ ನಿಂತು ಧ್ವನಿ ಎತ್ತಿದೆ. ನನ್ನ ಧ್ವನಿ ಬಹಳ ಜೋರಾಗಿತ್ತು.

'ನಾನೇನೂ ಮಾಡಲು ಸಾಧ್ಯವಿಲ್ಲ' ಗಾರ್ಡ್ ಹೇಳಿ[...] ನುಡಿದನು. ಆತನ ಮುಖ ಯಾಕೊ ವಿವರ್ಣವಾಗಿತ್ತು ಎಂದು ನನಗೆ ಭಾಸವಾಯಿತು. 'ಹಾಗಾದರೆ ಜಯರಾಮ ಪಡಿಕ್ಕಲ್‌ನ್ನು ಕಾಣಲು ನನಗೆ ಅನುಮತಿ ನೀಡಿ' ಎಂದು ನಾನು ಹಟ ಮಾಡಿದೆ. ಮಗುವಿನಂತೆ ಮಾಡಿದ ನನ್ನ ಹಟ ಜಲಾಶಯದ ಆಳದಲ್ಲಿಳಿದು ದುರ್ಬಲವಾಗಿ ಪ್ರತಿಧ್ವನಿಸಿತು. ಬಹಳ ಹೊತ್ತು ನಾನು ಆ ಪೇದೆಯ ಮುಂದೆ ನಿಶ್ಚೇಷ್ಟಿತನಾಗಿ ನಿಂತೆ. ಮೇಲಕ್ಕೆ ಎದ್ದ ಆತನ ಕೋವಿ ಮಾತ್ರ ಅಲುಗಾಡುತ್ತಿತ್ತು. ನಾನು ಹೇಳುವುದರತ್ತ ಗಮನ ಹರಿಸದಿರಲು ಆತನು ಪ್ರಯತ್ನಿಸುತ್ತಿದ್ದನು. ಏಕಾಂಗಿಯಾಗಿ ಕಾಯುವಿಕೆಯ ಮಧ್ಯೆ ಒಂದು ಅಳು ನನ್ನ ಗಂಟಲಲ್ಲಿ ಸಿಲುಕಿಕೊಂಡಿತು. ಕಕ್ಕಯಂ ಕ್ಯಾಂಪಿನ ಒಳಭಾಗದ ಬಂಧಿತ ಕೊಠಡಿಯೊಳಗಿನಿಂದ ಮಗನ 'ಅಪ್ಪಾ' ಎಂಬ ಕರೆ ಹೊರಬರುತ್ತಿದೆ ಎಂದು ನಾನು ಸಂದೇಹ ಪಟ್ಟೆ. ಬಹಳ ಹೊತ್ತಿನ ಬಳಿಕ ನಾನು ನಿಶ್ಶಕ್ತನಾಗಿ ಹಿಂತಿರುಗಿ ನಡೆಯಲಾರಂಭಿಸಿದೆ. ಕ್ಯಾಂಪಿನೆಡೆಗೆ ಮತ್ತೊಮ್ಮೆ ತಿರುಗಿ ನೋಡಿದೆ. ಆ[...] ಪೊಲೀಸ್ ನನ್ನನ್ನೇ ನೋಡುತ್ತಾ ನಿಂತಿದ್ದನು. ಕೂಡಲೇ ಆತನು ಗುಡ್ಡೆಯ ಹಸಿರಿನೆಡೆಗೆ ಕಣ್ಣು ತಿರುಗಿಸಿದನು.

ಕರುಣಾಕರನನ್ನು ಭೇಟಿ ಮಾಡಿದ ಬಳಿಕ ಮಾತೃ[...] ಭೂಮಿ ಪತ್ರಿಕೆಯ ಕೋಝಿಕೋಡ್ ವರದಿಗಾರ[...] ಸಾದಿರಿಕ್ಕೋಯ ನನ್ನನ್ನು ಕರೆದರು. ಅವರು ಕರುಣಾಕರನ[...] ಪ್ರೀತಿಯ ಮಿತ್ರರಲ್ಲಿ ಓರ್ವರಾಗಿದ್ದರು. ತುರ್ತು[...] ಪರಿಸ್ಥಿತಿಯ ಉತ್ತರ ಕೇರಳದ ಗೃಹಮಂತ್ರಿ. ರಾಜನ[...] ಕುರಿತ ವಿವರಗಳಿಗಾಗಿ ಮೂರು ಬಾರಿ ನಾನು ಆತನ ಬಳಿಗೆ ಹೋಗಿದ್ದೆ. 'ನಾನು ಪ್ರಯತ್ನಿಸುತ್ತಿದ್ದೇನೆ' ಎಂದು ಮಾತ್ರವಾಗಿತ್ತು ಆತನ ಉತ್ತರ. ಆದರೆ ಈ[...] ಬಾರಿ ಆತ ನೀಡಿದ್ದು ಬೇರೆಯದೇ ಆದ ಒಂದು ವಿವರವಾಗಿತ್ತು. ಒಂದು ನಕ್ಸಲ್ ನೆಲೆಯನ್ನು ತೋರಿಸಲು ಕೊಂಡೊಯ್ಯುತ್ತಿದ್ದಾಗ ರಾಜನು ಜೀಪಿನಿಂದ ಹೊರ[...] ಹಾರಿ ಪಲಾಯನಗೈದನೆಂಬ ವಿವರಣೆ ಅದಾಗಿತ್ತು.

'ನಿಮಗೆ ಈ ವಿವರ ಎಲ್ಲಿಂದ ದೊರೆಯಿತು?' ನಾನು ಆತನನ್ನು ಪ್ರಶ್ನಿಸಿದೆ. 'ಒಂದು ವಿಶ್ವಾಸಾರ್ಹವಾದ ಕೇಂದ್ರದಿಂದ ಎಂದು ಮಾತ್ರ ತಿಳಿದುಕೊಂಡರೆ ಸಾಕು' ಎಂಬುದಾಗಿತ್ತು ಸಾದಿರಿಕೋಯಾರ ಉತ್ತರ. ಆ[...] ವಿಶ್ವಾಸಾರ್ಹವಾದ ಕೇಂದ್ರ ಕರುಣಾಕರನೇ ಎಂಬುದು ನನಗೆ ಮನವರಿಕೆಯಾಯಿತು.


ಸಾದಿರಿಕೋಯಾನ ವಿವರ ನನ್ನಲ್ಲಿ ಮತ್ತಷ್ಟು ನಿರೀಕ್ಷೆಯನ್ನು ಹುಟ್ಟಿಸಿತು. ಅದೇ ಹೊತ್ತಿನಲ್ಲಿ ಸಂದೇಹದ ಕಪ್ಪು ಮೋಡಗಳು ನನ್ನ ಸುತ್ತಲೂ ಕವಿಯತೊಡಗಿತು. [...] ಮಗನೆಲ್ಲಿ ಎಂಬ ಅನ್ವೇಷಣೆಯನ್ನು ನಾನು ಮುಂದುವರಿಸುತ್ತಲೇ ಇದ್ದೆ.

ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಬಹಾವುದ್ದೀನ್ ಮತ್ತು ಇನ್ನೋರ್ವ ಪ್ರೊಫೆಸರ್ ಕಕ್ಕಯಂ ಕ್ಯಾಂಪಿಗೆ ಭೇಟಿ ನೀಡಿದ್ದರು. ಈ ಸ್ನೇಹನಿಧಿಗಳಾದ ಅಧ್ಯಾಪಕರೊಡನೆ ಜಯರಾಮ ಪಡಿಕ್ಕಲ್ ಬಹಳ ನೀಚತನದಿಂದ ವರ್ತಿಸಿದನು. ತಮ್ಮ ಪ್ರಾಂಶುಪಾಲರು ಬಂದಿರುವರೆಂದು ಕಸ್ಟಡಿಯಲ್ಲಿರುವ ವಿದ್ಯಾರ್ಥಿಗಳು ಕಿಟಕಿಗೆ ಮುಖವಿಟ್ಟು ನೋಡಿದರು. ಆದರೆ ರಾಜನ ಮುಖ ಮಾತ್ರ ಅವರಿಗೆ ಗೋಚರಿಸಲಿಲ್ಲ.

ರಾಜನು ಖಂಡಿತ ಬರುವನೆಂದೇ ನಾನು ದೃಢವಾಗಿ ನಂಬಿದ್ದೆ. ರಾತ್ರಿ ಯಾವಾಗಲೂ ಒಂದು ಎಲೆ ಊಟವನ್ನು ತೆಗೆದಿಡಲು ನನ್ನ ಹೆಂಡತಿಗೆ ಹೇಳುತ್ತಿದ್ದೆ. ಅವನು ಯಾವ ಹೊತ್ತಿಗಾದರೂ ಬರಬಹುದು, ಉಪವಾಸವಿದ್ದು ಹಸಿದ ಹೊಟ್ಟೆಯೊಡನೆ, ದುರ್ಬಲ ದೇಹದೊಡನೆ ಆತನು ಬರುವಾಗ ಆತನಿಗಾಗಿ ಊಟ ತೆಗೆದಿಡಬೇಕು. ಆತನಿಂದ ಬರದಿರಲಾಗುವುದಿಲ್ಲ.

ನಾಯಿಗಳು ನಿಷ್ಕಾರಣವಾಗಿ ಬೊಗಳುತ್ತಾ ಶಬ್ದ ಮಾಡುವ ರಾತ್ರಿಗಳಲ್ಲಿ ತಲೆ ಬಾಗಿಲು ತೆರೆದು, 'ಅಪ್ಪಾ' ಎಂಬ ಕರೆ ಕೇಳಿಬರುತ್ತಿದೆಯೇ ಎಂದು ನಾನು ಕಿವಿಗೊಟ್ಟು ಆಲಿಸುತ್ತಾ ನಿಲ್ಲುತ್ತಿದ್ದೆ. ಬಳಿಕ ಬಾಗಿಲು ಮುಚ್ಚದೆ ಹಾಸಿಗೆಯ ಮೇಲೆ ಬೀಳುತ್ತಿದ್ದೆ. 'ಮಗೂ....' ಎಂಬ ಅಳು ನನ್ನೆದೆಯಲ್ಲಿ ಗದ್ಗದವಾಗಿ ಹೊರಬರಲು ತವಕಿಸುತ್ತಿತ್ತು, ನನ್ನ ಕಣ್ಣಿನಿಂದ ಹೊರ ಬರುವ ಕಣ್ಣೀರನ್ನು ನಾನು ತಡೆದುಕೊಳ್ಳಬೇಕಾಗಿತ್ತು. ಆತನ ಅಮ್ಮ ರಾಧಾಗೆ ಇದೊಂದೂ ತಿಳಿಯಬಾರದು.....

(ಮುಂದುವರೆಯುತ್ತದೆ)



ನಾವು ಈ ನೆಲದಲ್ಲಿ ಹುಟ್ಟಿದ್ದೇ ತಪ್ಪಾ?

ಮಾನ್ಯರೆ,

ಕುದುರೆಮುಖ ರಾಷ್ಟ್ರೀಯ ಉದ್ಯಾನ ಮತ್ತು ನಕ್ಸಲರು– ಈ ಎರಡು ವಿಚಾರಗಳು ಈಗ ರಾಜ್ಯದಲ್ಲಿ ಚರ್ಚೆಯಲ್ಲಿರುವುದರಿಂದ ಇವೆರಡರ ಮಧ್ಯೆ ಬಳಲುತ್ತಿರುವ ನಮ್ಮ ಜನಾಂಗದ (ಆದಿವಾಸಿ ಗಿರಿಜನರು) ಮತ್ತು ರೈತರ ಪರಿಸ್ಥಿತಿ ಹೇಗಿದೆ ಎನ್ನುವುದರ ಬಗ್ಗೆ ನಾನೊಬ್ಬ ಆದಿವಾಸಿ ಯುವಕನಾಗಿ ನನಗನ್ನಿಸಿದ್ದನ್ನು ಬರೆಯಬೇಕೆನಿಸುತ್ತಿದೆ.

ಕಳೆದ ಎಂಟು-ಹತ್ತು ವರ್ಷಗಳಿಂದ ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಹೋರಾಟದಲ್ಲಿ ನಾವೆಲ್ಲರು - ಅಂದರೆ ಗಿರಿಜನರು, ರೈತರು ಮತ್ತು ಇತರರು - ನಮ್ಮ ಬದುಕನ್ನೇ ನಾಶ ಮಾಡಲು ಬಂದಿರುವ ಆ ಯೋಜನೆಯ ವಿರುದ್ಧ ಸಕ್ರಿಯವಾಗಿ ಭಾಗವಹಿಸುತ್ತಿದ್ದೆವು. ಇನ್ನು ಮುಂದೆಯೂ ನಮ್ಮ ಅಳಿವು-ಉಳಿವಿನ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತೇವೆ. ಆದರೆ ಆದಿವಾಸಿ ರೈತ-ಗಿರಿಜನರು ಕಾನೂನಿನಡಿ ನಡೆಸಿದ ಹೋರಾಟದಲ್ಲಿ ಇಟ್ಟಿದ್ದ ಬೇಡಿಕೆಗಳನ್ನೇ ನಕ್ಸಲೀಯ ಸಂಘಟನೆಯು ಮುಂದಿಟ್ಟಿದ್ದರಿಂದ ಉದ್ಯಾನ ವಿರೋಧಿ ಹೋರಾಟದಲ್ಲಿ ತೊಡಗಿರುವವರೆಲ್ಲ ನಕ್ಸಲೀಯರು, ಆದಿವಾಸಿಗಳ ಪರ ದನಿ ಎತ್ತಿದವರೆಲ್ಲ ನಕ್ಸಲ್ ಬೆಂಬಲಿಗರು ಎಂದೇ ಪೊಲೀಸ್ ಇಲಾಖೆ ಮತ್ತು ಸರ್ಕಾರ ಬಿಂಬಿಸಲು ಪ್ರಾರಂಭಿಸಿದೆ. ಅಷ್ಟೇ ಅಲ್ಲದೆ, ನಮ್ಮ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಎಲ್ಲಾ ಯುವಕ-ಯುವತಿಯರ ಮೇಲೆ ಈಗ ಸುಳ್ಳು ಕೇಸುಗಳನ್ನು ಹಾಕಿ ಬಂಧಿಸುವ ಹಂತಕ್ಕೆ ಬಂದಿರುವುದು ದುರಂತವೇ ಸರಿ.

ಇದೆಲ್ಲದರ ನಡುವೆ ನಕ್ಸಲ್ ವಿರುದ್ಧದ ಕಾರ್ಯಾಚರಣೆಯ ಹೆಸರಲ್ಲಿ ಪೊಲೀಸರು ಆದಿವಾಸಿಗಳ ಮೇಲೆ ನಡೆಸುತ್ತಿರುವ ದೌರ್ಜನ್ಯದಿಂದ ನಕ್ಸಲ್ ಮತ್ತು ಪೊಲೀಸರ ವಿಚಾರಗಳು ಎಲ್ಲೆಡೆ ಚರ್ಚೆಯಾಗುತ್ತಿದೆಯೇ ಹೊರತು ನಮ್ಮ ಪ್ರದೇಶದ ಜನರ ಮೂಲಭೂತ ಸಮಸ್ಯೆಗಳತ್ತ ಯಾರೂ ಗಮನ ಹರಿಸುತ್ತಿಲ್ಲ.

ನಮ್ಮ ಬದುಕನ್ನೇ ನುಂಗುವ ರಾಷ್ಟ್ರೀಯ ಉದ್ಯಾನ ಎಂಬ ಸಮಸ್ಯೆ ಭೀಕರವಾಗಿರುವಾಗ ನಾಗರಿಕ ಸಮಾಜ ನಮಗೆ ಯಾವ ರೀತಿಯ ಸಹಕಾರ ನೀಡಿತು? ನಮ್ಮ ಉಳಿವಿನ ಹೋರಾಟದಲ್ಲಿ ಯಾವ ರೀತಿಯ ಪಾತ್ರ ವಹಿಸಿತು? ನಮ್ಮನ್ನೆಲ್ಲ ನಕ್ಸಲೀಯ ಬೆಂಬಲಿಗರೆಂದು ಪೊಲೀಸರು ಬೆರಳು ಮಾಡಿ ತೋರಿಸುತ್ತಿರುವಾಗ, ನಮ್ಮ ವಿರುದ್ಧ ಸುಳ್ಳು ಸಾಕ್ಷಿ ನೀಡಲು ಮುಂದಾಗುವ ಭಜರಂಗದಳದವರು ಇರುವಾಗ, ಬಿಜೆಪಿಯವರಾಗಲಿ, ರೈತರ ಅಭಿವೃದ್ಧಿ ಮಾಡುತ್ತೇವೆ ಅಂತ ಹೇಳುವ ಕಾಂಗ್ರೆಸ್‌ನವರಾಗಲಿ, ಜಾತ್ಯತೀತ ರಾಜ್ಯವನ್ನೇ ತರುತ್ತೇವೆನ್ನುವ ಜನತಾ ದಳದವರಾಗಲಿ ಯಾರೂ ನಮ್ಮ ಸಮಸ್ಯೆಯ ಬಗ್ಗೆ ಚಕಾರವೆತ್ತುತ್ತಿಲ್ಲ. ಬದಲಿಗೆ ಕೆಲವರನ್ನು ಎತ್ತಿಕಟ್ಟಿ ನಮ್ಮನ್ನು ಎರಡು ಭಾಗ ಮಾಡಲು ಪ್ರಯತ್ನಿಸುತ್ತಿದ್ದಾರೆಯೇ ಹೊರತು ನಮ್ಮ ಮೂಲ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ, ತಿಳಿಯಲು ಕನಿಷ್ಠ ಪ್ರಯತ್ನವನ್ನೂ ಮಾಡುತ್ತಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ನಕ್ಸಲೀಯರು ನಮ್ಮ ಸಮಸ್ಯೆಯನ್ನರಿತು "ನಿಮ್ಮನ್ನು ಒಕ್ಕಲೆಬ್ಬಿಸಲು ನಾವು ಬಿಡೋದಿಲ್ಲ, ನಿಮ್ಮ ಜೊತೆ ನಾವಿದ್ದೇವೆ" ಅಂತ ಹೇಳಿದರೆ ಯಾರು ತಾನೇ ಬೇಡ ಅಂತಾರೆ? ಇವತ್ತು ನಕ್ಸಲೀಯರನ್ನು ದಮನ ಮಾಡಿರಿ ಅನ್ನುತ್ತಿರುವ ಭಜರಂಗಿಗಳಾಗಲಿ ಅಥವಾ ಇನ್ಯಾವುದೋ ಸಂಘ-ಸಂಸ್ಥೆಯಾಗಲಿ ನಮ್ಮ ಪರವಾಗಿ ನಿಂತು, ನಮ್ಮೊಂದಿಗೆ ಉದ್ಯಾನದ ವಿರುದ್ಧ ಹೋರಾಟ ಮಾಡಿದ್ದರೆ ನಾವು ಅವರನ್ನೇ ಬೆಂಬಲಿಸುತ್ತಿದ್ದೆವು. ಯಾಕೆಂದರೆ ನೀರಲ್ಲಿ ಮುಳುಗುತ್ತಿರುವ ಮನುಷ್ಯನ ಸಹಾಯಕ್ಕೆ ಯಾರು ಬರುತ್ತಾರೋ ಅವರನ್ನೇ ಆತ ನಂಬುತ್ತಾನೆಯೇ ಹೊರತು 'ನೀನು ಬೇಡ, ಇನ್ನೊಬ್ಬ ಬರಬೇಕು' ಅನ್ನುವುದಿಲ್ಲ.

ಆದ್ದರಿಂದ ಆ ಸಮಯದಲ್ಲಿ ನಮಗೆ ನಮ್ಮ ಬದುಕು ಮುಖ್ಯವಾಯಿತೇ ಹೊರತು ಹಿಂಸೆ-ಅಹಿಂಸೆಯ ಬಗೆಗಿನ ಜಿಜ್ಞಾಸೆಯಲ್ಲ. ಇಲ್ಲಿ ಇವತ್ತು ಸ್ಥಿತಿ ಹೇಗಿದೆ ಎಂದರೆ ಬೆರಳೆಣಿಕೆಯಷ್ಟು ಜನರನ್ನು ಹೊರತುಪಡಿಸಿದರೆ ನೂರಕ್ಕೆ ತೊಂಭತ್ತೈದು ಜನರಿಗೆ ಜಮೀನಿಗೆ ಹಕ್ಕುಪತ್ರಗಳಿಲ್ಲ. ಹಾಗಾಗಿ ಸರ್ಕಾರದ ಲೆಕ್ಕದಲ್ಲಿ ನಾವೆಲ್ಲ ಅದೃಶ್ಯರು. ಆದರೆ ನಾವು ಈ ಜಾಗದಲ್ಲಿ ತಲೆತಲಾಂತರದಿಂದ ಅಧಿಕೃತವಾಗಿ ವಾಸಿಸುತ್ತಿರುವವರು ಎಂದು ಸರಕಾರಕ್ಕೆ ಸಾಬೀತುಪಡಿಸಲು ನಮ್ಮ ಬಳಿ ಯಾವುದೇ ಆಧಾರವಿಲ್ಲ.

ನಮ್ಮ ಜನಾಂಗದಲ್ಲಿ ಆರ್ಥಿಕ ಸಮಸ್ಯೆ ಹೆಚ್ಚಾಗಿರುವುದರಿಂದ ಕಾಡಿನ ಉತ್ಪನ್ನವನ್ನು — ಮುರುಗನ ಹುಳಿ, ಸಿಗೇಕಾಯಿ, ಇತ್ಯಾದಿ — ಕೊಯ್ಕೊಂಡು ಅದರಿಂದ ಬಂದ ಆದಾಯದಿಂದ ಹೇಗೋ ಜೀವನ ಸಾಗಿಸುತ್ತಿದ್ದೆವು. ಆದರೆ ಇಂದು ನಾವೆಲ್ಲ ಕಾಡಲ್ಲೇ ವಾಸಿಸುತ್ತಿದ್ದರೂ ನಮ್ಮ ಮನೆಬಿಟ್ಟು ಹೊರಗೆ ಬರುವ ಹಾಗಿಲ್ಲ. ಹಾಗೊಮ್ಮೆ ಬಂದರೆ ಎಲ್ಲಿ ನಕ್ಸಲೈಟ್ ಅಂತ ಗುಂಡಿಟ್ಟು ಕೊಂದಾರು ಎಂಬ ಭಯ. ಹಾಗಂತ ಸುಮ್ಮನೆ ಮನೆಯಲ್ಲಿ ಕೂತಿರುವ ಹಾಗೂ ಇಲ್ಲ. ಮನೆಯಲ್ಲಿ ಕೂತಿದ್ದರೂ ಮೆಣಸಿನಹಾಡ್ಯದಲ್ಲಿ ಮಾಡಿದಂತೆ ಎಲ್ಲಿ ಮನೆಯ ಮೇಲೆ ಗುಂಡಿನ ದಾಳಿ ನಡೆಸುತ್ತಾರೋ ಎಂಬ ಆತಂಕ.

ಒಂದು ಪತ್ರ

ಈ ಭಯ ಮತ್ತು ಆತಂಕದ ನಡುವೆಯೂ ಹೊಟ್ಟೆಪಾಡಿಗೆ ನಾಲ್ಕು ಕಾಸು ಸಂಪಾದನೆ ಮಾಡ್ಕೊಂಡು ಬರೋಣ ಅಂತ ಹೊರಟರೆ ಹೊರಗಿನ ಜನ ನಮ್ಮನ್ನು ಅನುಮಾನದಿಂದ ನೋಡುತ್ತಾರೆ. ಅದೊಂದು ಮಾನಸಿಕ ಹಿಂಸೆ. ನಾವು ನಕ್ಸಲ್ ಬೆಂಬಲಿಗರೆಂದು ಎಲ್ಲಿ ಯಾರು ಸುಳ್ಳು ಹೇಳಿ ಪೊಲೀಸರು ಹಿಡಕೊಂಡು ಹೋಗಿ ಏನು ಮಾಡುತ್ತಾರೋ ಅನ್ನೋ ಹೆದರಿಕೆ. ಈಗಾಗಲೇ ಕೆಲವರನ್ನು ಹಿಡಕೊಂಡು ಹೋಗಿ ನಕ್ಸಲೈಟರ ಯಾವುದೋ ಘಟನೆಗೆ ಸಂಬಂಧಿಸಿದಂತೆ ಸುಳ್ಳು ಕೇಸ್ ಹಾಕಿದ್ದಾರೆ. ಇದೆಲ್ಲದರಿಂದಾಗಿ ಇವತ್ತು ನಮ್ಮ ಬದುಕೇ ಅತಂತ್ರ ಸ್ಥಿತಿಯಲ್ಲಿದೆ.

ನಾವು ಹೇಗೆ ಬದುಕಬೇಕು? ನಾವು ಈ ಜಾಗದಲ್ಲಿ ಹುಟ್ಟಿದ್ದೇ ತಪ್ಪೇ? ಈ ನಾಗರಿಕ ಸಮಾಜದಲ್ಲಿ ನಮಗೆ ಬದುಕಲು ಯಾವ ಹಕ್ಕೂ ಇಲ್ಲವೇ? ಎಂಬ ಪ್ರಶ್ನೆಗಳು ನಮ್ಮನ್ನು ಕಾಡುತ್ತಿವೆ. ಈ ಪ್ರಶ್ನೆಗಳನ್ನು ನಾವು ಸರ್ಕಾರದ ಮುಂದೆ ಕೇಳಿದರೆ 'ಇವನು ನಕ್ಸಲೈಟರ ಪರವಾಗಿದ್ದಾನೆ. ಇವನಿಗೆ ಅವರ ಸಂಪರ್ಕ ಇದೆ. ಹಾಗಾಗಿ ಹೀಗೆಲ್ಲ ಮಾತಾಡುತ್ತಾನೆ' ಅಂತ ಹೇಳಿ 'ನಿನ್ನ ಹೆಸರೂ ಇದೆ ನಮ್ಮ ಲಿಸ್ಟ್‌ನಲ್ಲಿ'' ಅಂತ ಪೊಲೀಸ್‌ನವರು ಹೆದರಿಸಿ, ಬೆದರಿಸಿ ನಾವೆಲ್ಲ ದನಿ ಎತ್ತದಂತೆ ಮಾಡುತ್ತಾರೆ. ಅಷ್ಟೂ ಸಾಲದೆಂಬಂತೆ 'ನೀವೆಲ್ಲ ಮಾತಾಡಿದ್ರೆ ಪರಮೇಶ್ವರನಿಗೆ ಆದ ಗತಿ ನಿಮಗೂ ಆಗುತ್ತೆ' ಅಂತ ಹೇಳಿ ಎನ್‌ಕೌಂಟರ್‌ನಲ್ಲಿ ಮಡಿದ ಪರಮೇಶ್ವರನ ಬಗ್ಗೆ ಹೇಳುತ್ತಾರೆ.

ಇಷ್ಟೆಲ್ಲಾ ಆಗಿಯೂ ನಿರ್ಬಂಧಗಳನ್ನು ಬೇರೆ ಹೇರುತ್ತಿದ್ದಾರೆ. ಯಾರೂ ಮಳೆಗೆ ಕಂಬಳಿ ಬದಲು ಉಪಯೋಗಿಸುತ್ತಿದ್ದ ಪ್ಲಾಸ್ಟಿಕ್ ಕೊಪ್ಪೆಯನ್ನು ಬಳಸಬಾರದು, ಆರು ಗಂಟೆಯ ನಂತರ ಓಡಾಡಬಾರದು, ಲೈಟರ್ ಉಪಯೋಗಿಸಬಾರದು. ಪೆನ್‌ಟಾರ್ಚ್ ಉಪಯೋಗಿಸಬಾರದು ಅಂತೆಲ್ಲ ಹೊಸ 'ಕಾನೂನು'ಗಳನ್ನು ಇಲ್ಲಿ ಜಾರಿಗೊಳಿಸಿದ್ದಾರೆ.

ಪೇಟೆಯಿಂದ ನಮ್ಮ ಹಳ್ಳಿ ತುಂಬಾ ದೂರವಿರುವುದರಿಂದ ಪೇಟೆಯಿಂದ ಬರೋ ಒಂದೇ ಒಂದು ಬಸ್ಸು ಬರುವುದೇ ಸಂಜೆ ಆರು ಗಂಟೆಗೆ. ಅದರಲ್ಲಿ ಬಂದರೆ 'ಆರು ಗಂಟೆಯ ನಂತರ ಓಡಾಡಬಾರದು' ಎಂಬ ನಿರ್ಬಂಧ ಇರುವುದರಿಂದ ನಾವು ಹೇಗೆ ಮನೆ ಸೇರುವುದು? ಎಲ್ಲಿ ಉಳಿದುಕೊಳ್ಳುವುದು? ದಾರಿಯಲ್ಲಿ ಯಾರ ಮನೆಯಲ್ಲಾದರು ಇರುವುದೂ ಇವತ್ತು ಅಸಾಧ್ಯವಾಗಿದೆ. ಏಕೆಂದರೆ ಅದಕ್ಕೂ ಪೊಲೀಸರ ಕಿರುಕುಳ. 'ನೀವ್ಯಾಕೆ ಇಲ್ಲಿದ್ದೀರಿ' ಅಂತ ಕೇಳುತ್ತಾರೆ. ಅದಕ್ಕೆಲ್ಲ ನಾವು ಉತ್ತರ ಕೊಡಬೇಕಾಗಿಲ್ಲ, ಅವರೇ ರೆಡಿ ಮಾಡಿಕೊಂಡು ಬಂದಿರುತ್ತಾರೆ. ಏಕೆಂದರೆ ನಮ್ಮನ್ನೆಲ್ಲ ಮಟ್ಟ ಹಾಕಬೇಕು ಅನ್ನೋದೇ ಅದರ ಉದ್ದೇಶ ಆಗಿದೆ.

ನಮ್ಮ ಕಡೆ ಹಳೆ ಕಾಲದಿಂದಲೂ ರೂಢಿಗತವಾಗಿರುವ ಒಂದು ಪದ್ಧತಿಯೆಂದರೆ ಒಬ್ಬರ ಮನೆಯಿಂದ ಇನ್ನೊಬ್ಬರ ಮನೆಗೆ ಉಳಿದುಕೊಳ್ಳಲು ಹೋಗುವುದು. ಆದರೆ ಇನ್ನು ಮುಂದೆ ಅದು ಅಸಾಧ್ಯವಾಗಲಿದೆ. ಹಾಗೆಯೇ ಮಳೆಗಾಲದ ಸಮಯ ಗದ್ದೆ ನಾಟಿಕಾರ್ಯ ಪ್ರಾರಂಭವಾದಾಗ ಕೆಲಸಕ್ಕೆಂದು 40-50 ಜನ ಸೇರುತ್ತಿದ್ದರಾದ್ದರಿಂದ ದಿನಕ್ಕೊಂದು ಮನೆಯಲ್ಲಿ ಹಬ್ಬದ ವಾತಾವರಣವಿರುತ್ತಿತ್ತು. ಅದಕ್ಕೆಂದು ಹಿಂದಿನ ದಿನವೇ ತಯಾರಿಗಳು ನಡೆಯುತ್ತಿದ್ದವು. ಬೆಳಗ್ಗೆಯೇ ಎಲ್ಲರಿಗೂ ಅಡುಗೆ ರೆಡಿಯಾಗಿರುತ್ತಿತ್ತು. ಈಗ ಅದೆಲ್ಲ ಬದಲಾಗುತ್ತಿದೆ. ಏಕೆಂದರೆ ಅದೇ ದಿನ ಪೊಲೀಸರು ಆ ಮನೆಗೆ ಬಂದರೆ ಮತ್ತದೇ ರಾಮಾಯಣ ಶುರುವಾಗುತ್ತೆ. 'ನಿಮ್ಮ ಮನೇಲಿರೋದು ಬರೀ ನಾಲ್ಕು ಜನ, ಆದ್ರೆ ಇಷ್ಟೊಂದು ಜನರಿಗೆ ಅಡುಗೆ ಮಾಡಿದ್ದೀರಲ್ಲ? ಇದು ನಕ್ಸಲೀಯರಿಗೆ ಮಾಡಿದ ಅಡುಗೆಯೇ' ಎಂದು ಕೇಸು ಜಡಿಯುತ್ತಾರೆ.

ಇವೆಲ್ಲ ಬೆಳವಣಿಗೆ ನೋಡಿದರೆ ನಮಗೆ ಮುಂದಿನ ದಿನಗಳಲ್ಲಿ ಬದುಕುವುದೇ ತುಂಬಾ ಕಷ್ಟವಾಗಲಿದೆ. ಈಗಾಗಲೇ ನಮ್ಮ ಜೀವನ ಹೀಗೇಕೆ ಅನ್ನಿಸಲು ಶುರುವಾಗಿದೆ. ನಕ್ಸಲೀಯ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಹೇಳುತ್ತಾ ಸರ್ಕಾರ ನಮ್ಮಂಥ ಗಿರಿಜನರನ್ನು, ಬಡ ರೈತರನ್ನು ಹತ್ಯೆ ಮಾಡಿ 'ಅವರೆಲ್ಲ ನಕ್ಸಲೀಯರು' ಎಂದು ಬೊಬ್ಬೆ ಹಾಕುತ್ತದೆಯೇ ಹೊರತು ನಮ್ಮ ಮೂಲಭೂತ ಸಮಸ್ಯೆಗಳ ಬಗ್ಗೆಯಾಗಲಿ, ನಮ್ಮ ಬದುಕಿನ ಬಗ್ಗೆಯಾಗಲಿ ಕನಿಷ್ಠ ಕಾಳಜಿಯನ್ನೂ ತೋರಿಸುವುದಿಲ್ಲ, ಅದೇ ನಮ್ಮೆಲ್ಲರ ನೋವಾಗಿದೆ.

ಹಲವಾರು ತಲೆಮಾರುಗಳಿಂದ ಇಲ್ಲಿಯೇ ನೆಲೆಸಿದ್ದರೂ ಕೂಡ ನಮ್ಮ ಮೂಲಭೂತ ಅಗತ್ಯತೆಗಳನ್ನು ಪೂರೈಸದಿದ್ದ ಸರ್ಕಾರ ನಕ್ಸಲೀಯರು ಬಂದ ನಂತರ 'ನಿಮ್ಮ ಹಳ್ಳಿಯ ಮೂಲಭೂತ ಸಮಸ್ಯೆಯನ್ನೆಲ್ಲ ಬಗೆಹರಿಸುತ್ತೇವೆ' ಅಂತ ಹೇಳುತ್ತಿದೆ. ಆದರೆ ಮೊದಲೇ ಇದನ್ನೆಲ್ಲ ಬಗೆಹರಿಸಿದ್ದರೆ ಇವತ್ತಿನ ಪರಿಸ್ಥಿತಿ ನಿರ್ಮಾಣವಾಗುತ್ತಲೇ ಇರಲಿಲ್ಲ.


ಹೀಗೆ ಸರ್ಕಾರ ಮತ್ತು ಪೊಲೀಸರು ನಮ್ಮನ್ನೆಲ್ಲ ಆತಂಕ, ಭಯ ಮತ್ತು ನೋವಿನ ಸರಪಳಿಯಲ್ಲಿ ಸಿಲುಕಿಸಿರುವಾಗ ನಾಗರಿಕ ಸಮಾಜ ನಮ್ಮ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲಿ ಎಂದು ಈ ಪತ್ರ ಬರೆದಿದ್ದೇನೆ.....

-ತಿಮ್ಮಪ್ಪ
ನೊಂದ ಆದಿವಾಸಿ ಯುವಕ,
ಕುದುರೆಮುಖ ರಾಷ್ಟ್ರೀಯ ಉದ್ಯಾನ

ಮನದ, ಮನೆಯ ಸೂರ್ಯನೇ
ಜೋಡಿ ಕಂಗಳ ಕುಲದೀಪವೇ
ಆಕಾಶದ ತುಂಬಾ ಆಷಾಢದ
ಮೋಡಗಳು
ನನ್ನ ಅಂಗಳದಲಿ ನೆತ್ತರೊಸರುವ
ಹೆಜ್ಜೆಗಳು

ತೊಯ್ದ ಉಸುಕು, ಬಂಜೆನೆಲ ಬಟ್ಟ
ಬಯಲುಗಳಲಿ, ದರಿ ಕಂದರಗಳ
ನೆಲ-ಮುಗಿಲುಗಳ ಎತ್ತರ ಬಿತ್ತರ
ಗಳಲಿ ಜಾಗರವಾಡಿದ ನವಿಲೇ

ಕಂಬನಿಯೊರೆಸುವ ಕೈಯಾಗುವೆನೆಂದೆ
ಪ್ರಾರ್ಥನೆಯ ಅಲೆಯಾಗುವೆನೆಂದೆ
ವಿಶ್ವದ ಬಯಲಿನ ಬಾನಾಡಿ ಹಕ್ಕಿ
ಹೀಗೇಕೆ ಉರಿದು ಬಿದ್ದೆಕರಕಲಾಗಿ



ಆಕೆ ಅತ್ತಿದ್ದು...

ತಿಂಗಳ ಬೆಳಕಿನಲಿ ಹೃದಯದ
ಬಟ್ಟಲಿನಲಿ
ಹಾಲನ್ನದ ಬುತ್ತಿ, ನನ್ನ ಬಂಗಾರವೇ
ಆಯಿತೆಲ್ಲಿ ಕೊರತೆ
ಸಾಕಾಗಲಿಲ್ಲವೇ ಜೀವದ ಒರತೆ?

ಮಡಿಲಿನ ಮಾತಿರಲಿ ಎದೆಗೂಡು
ಸಂಕುಚಿತವಾಗಿ ಮೂಳೆಗಳು ಸರಿದು
ಗರ್ಭ ನೆತ್ತರ ಸ್ರವಿಸಿ ಯಾರೂ
ನನ್ನಂತೆ ಮೇಣದ ಬತ್ತಿಯಾಗೋಲ್ಲ

ಈ ಜಗವು ಮಾತೆಯ ಒಡಲಲ್ಲ
ಈ ಒಡಲೇ ನಿನಗೆ ಜಗವಲ್ಲ
ನೋವನು ಮಾರಿಕೊಳ್ಳುವವರಿಂದ
ಜೀವವ ತೆತ್ತು
ಯಾತನೆಯನೇಕೆ ಖರೀದಿಸಿದೆ ಕಂದ

ಯಾಕೆ ಸಿಡಿದೆ ನನ್ನ ಪಟಾಕಿಯೆ
ಯಾಕೆ ಬೆಂಕಿ ಇಕ್ಕಿದೆ ಈ ಒಡಲಿಗೆ
ಕಲಿಸಲಿಲ್ಲ ನಾನೀ ವಿದ್ಯೆ
ಯಾರಿತ್ತರು ನಿನಗೀ ದೀಕ್ಷೆ

ನನ್ನೆದೆ ಹಾಲು ಹೇಗೆ ವಿಷವಾಯಿತು
ಕಾವೇರಿ ಹೇಮೆಯ ದಡದಲಿ
ಚಿರನಿದ್ರೆಯಲಿರುವ ಅನೇಕ
ತಲೆಮಾರುಗಳ
ಪ್ರಾರ್ಥನೆ ಎಲ್ಲಿ ಹೋಯಿತು

ನನ್ನದಲ್ಲದ ಇನ್ನಾವ ಸೆಳೆತ
ನಿನಗೆ ಆಪ್ತವಾಯಿತು
ಯಾರ್‍ಯಾರಿಗೆ ಉತ್ತರಿಸಲಿ?
ನನ್ನೊಳಗೂ ಉತ್ತರವಿಲ್ಲ.

■ ಬಾನು ಮುಷ್ತಾಕ್

ಡೆಲ್ಲಿ ಬ್ರಾಮುಣ್ರು ದಲಿತರಂಗಾಗಿದ್ದರಂತೆ

ಕುಮುಕೊಂತ ಮೋಡದಿಂದ ಭಾರಿ ಮಳೆಗೆ ಬದಲು ಕೋಣೆ ಮಳೆ ಆಗ್ಗಾಗ್ಗೆ ಬಂದು ಎರಚ ಹೋಗುತ್ತಿತ್ತು. ನೆಲದ ತವ ನೋಡಿ ಬಿತ್ತನೆ ಕಾರ್ಯ ಮುಗಿಸಿದ್ದ ಕಾಳ ಮಾವನ ಟೀಮು. ಒಂದು ಹಂತದ ತಮ್ಮ ಕರ್ತವ್ಯ ಮುಗಿಸಿ ದೇವರ ಮೇಲೆ ಭಾರ ಹಾಕಿದಂತೆ ಕುಳಿತು ಬಿಟ್ಟಿದ್ದರು.

ಕೈಲೊಂದು ಪೇಪರ್ ಹಿಡಿದು ಅದನ್ನೇ ತಿರುಗಾ ಮುರುಗ ಓದುತ್ತಿದ್ದ ವಾಟಿಸ್ಸೆ ಇದ್ದಕ್ಕಿದ್ದಂತೆ ಪಕಾರೆಂದು ನಗಾಡಿದ.

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಯಾಕ್ಲ ಅಂಗೆ ನಗತಿ?" ಎಂದಳು ಜುಮ್ಮಿ.

"ನಗಾಡೋ ಅಂತ ಮ್ಯಾಟ್ರುತ್ತು ಕಣಕ್ಕ ಅದ್ಕೆ ನಗಾಡಿದೆ" ಎಂದ ವಾಟಿಸ್ಸೆ.

"ಅದೇನು ನನಿಗೂ ಹೇಳ್ಳ?"

"ಬ್ರಾಂಬ್ರು ದಲಿತರಂಗಾಗಿದ್ದರಂತೆ!"

"ಎಲ್ಲೀ?"

"ಯಲ್ಲಾ ಕಡೆಲೂ ಆಗಿದ್ದರಂತೆ. ಡೆಲ್ಲಿಲಿ ಕಕ್ಸ್ ತ್ವಳದರಂತೆ, ರೈಲವೇ ಟೇಸನ್ನಲ್ಲಿ ಕೂಲಿ ಮಾಡ್ತರಂತೆ, ರಿಕ್ಷಾ ಯಳದರಂತೆ ಅಂತ ಇವುನ್ಯಾರೋ ಗೋಳಾಡ್ಯವುನೆ ಕಣಕ್ಕ."

"ಬ್ರಾಂಬ್ರು ಕಕ್ಸ್ ತೊಳತರೆ ಅನ್ನದು ಸುಳ್ಳು ಕಣೊ ವಾಟಿಸ್ಸೆ" ಎಂದ ಉಗ್ರಿ.

"ನನಿಗೂ ದವುಟು ಕಣೊ. ಬಹುಶಃ ಅವುರು ಸುಲಭ ಶೌಚಾಲಯದ ಓನರ್ರಾಗಿರತರೆ. ಅದೇನಂತ ಅವುಮಾನಲ್ಲ, ಹೆಚ್ಚುಕಮ್ಮಿ ಲೆಟರಿನ್ ಬಿಜಿನೆಸ್ಸಿದ್ದಂಗೆ. ಅದಕ್ಯಾಕಪ್ಪ ಗೋಳಾಡಬೇಕು?"

"ಯಾರು ಗೋಳಾಡಿದ್ದರ್ಲ?"

"ಇವುನ್ಯಾವನೊ ಫ್ರೂಲಿಸ್ ಫೆಲೊ ಕಣಕ್ಕ. ಮೀಸಲಾತಿ ಅಂತ ಬಂದು ದಲಿತ್ರು ಯಲ್ಲಾ ಕ್ಯಲಸನೂ ವಡಕಂಡು ಸುಖವಾಗಿದ್ದರಂತೆ, ಬೇಕಾದಂಗೆ ಮಕ್ಳುಟ್ಟುಸ್ತರಂತೆ."

"ಆ ಸೂಳೆಮಗನೂ ಹುಟ್ಟುಸಲೇಳು" ಎಂದ ಸೀರ.

"ಆದರಲವೆ ಹುಟ್ಟಸದು? ಇವುನಿಗಾಗ್ಲೆ ನಲವತ್ತು ನಲವತ್ತೈದು ವರ್ಸಾದಾಗ ಮದಿವಾಯ್ತನೆ. ಹೆಡತಿ ಜ್ವತೆ ಮನಿಕಳದು ಏನೋ ಕ್ಯಟ್ಟ ಕ್ಯಲಸ ಅನ್ನಂಗೆ ಒಂದಿಷ್ಟು ಸತಿ ಮಾಡ್ತನೆ. ಒಂದೊ ಯರಡೂ ಮಕ್ಕಳಾಯ್ತವೆ. ಅಷ್ಟೇ ನೋಡವುರ ದಾಸತ್ತು" ಎಂದ ಉಗ್ರಿ.


"ಮಕ್ಕಳ ಹುಟ್ಟಸದು ದಾಸತ್ತಲ್ಲ ಕಂಢ್ಯ ಸಾಕಬೇಕು. ಸಾಕಕ್ಕೆ ಸಗತಿ ಇರೋನು ಹುಟ್ಟುಸ್ತನೆ" ಎಂದ ಕಾಳಮಾವ.

"ಸಾಕದೆಯಿದ್ರೂ ಅವೇ ಬದಿಕತ್ತವೆ ದ್ವಡಪ್ಪ. ಎಷ್ಟೇ ಆದ್ರು ದಲಿತ್ರ ಮಕ್ಕಳಲವೇ, ಮರದಕ್ಯಳಗಿದ್ರು ಬ್ಯಳಕತ್ತವೆ. ಅದೇ ಬ್ರಾಂಬ್ರು ಹುಡುಗ್ರು ಬ್ಯಳದವೆ, ಬತ್ತೋಯ್ತವೆ" ಎಂದ ವಾಟಿಸ್ಸೆ.

"ಬ್ರಾಂಬ್ರು ಅಂತ ಕ್ಯಲಸನ್ನಲ್ಲ ಮಾಡ್ತಾ ಅವುರೆ ಅಂದ್ರೆ ಇತಿಹಾಸದ ಚಕ್ರ ತಿರುಗ್ತಾ ಅದೆ ಅಂದಂಗಾಯ್ತು" ಎಂದ ಉಗ್ರಿ.

"ಯಂತ ಚಕ್ರನ್ಲ?" ಎಂದಳು ಜುಮ್ಮಿ.

"ಹಿಂದೂ ಧರ್ಮದ ಚಕ್ರ ಕಣೇ. ಮೊದ್ಲು ಇಂತಿಂತ ಜನ ಇಂತ ಕ್ಯಲಸನೇ ಮಾಡಬೇಕು, ಅದು ಬುಟ್ಟು ಬೇರೆ ಕ್ಯಲಸ ಮಾಡಂಗಿಲ್ಲ ಅಂತ ಕಾನೂನು ಮಾಡಿ, ಓದಕ್ಕೆ ಅಂತ ಕುತಗಂಡೋರು ಬ್ರಾಂಬ್ರು. ಕುಂತಿದ್ದು ಅಂದ್ರೇನು ಅವುರೆ ಹೇಳೊ ಪ್ರಕಾರ ನಾಕೈದು ಸವುರ ವರಸ ಕುಂತಿದ್ರು. ಆಗ ನಮ್ಮ ದಲಿತ್ರ ಅವುರೇಲ ಬಾಚದ್ರು. ಈಗ ಡೆಲ್ಲಿಲಿ ಅವುರೆ ಬಾಚತರೆ ಅಂದ್ರೆ ಬಾಚಲೇಳು" ಎಂದ ಉಗ್ರಿ.



"ಈಗ ಬಾಚದರಿಂದ ದುಡ್ಡು ಬತ್ತದೆ ಕಣೊ ಉಗ್ರಿ. ಆಗ ಬಾಚತಿದ್ದ ದಲಿತ್ರಿಗೆ ಏನು ಕೊಡತಿದ್ರು? ಅವುರ ಮಕ ಕೂಡ ನೋಡತಿರಲಿಲ್ಲ, ಅವುರ ಹತ್ರಕೂ ಬುಟಕ ತಿರಲಿಲ್ಲ, ಅವುರ ಗಾಳಿ ಸೋಕದಂಗಿದ್ರು."

"ಬ್ರಾಂಬ್ರು ಕಕ್ಸ್ ತಗಂಡೋಗಕ್ಕೆ ಬಂದಾಗ ನೋಡತಿರಲಿಲ್ವೆ?" ಎಂದಳು ಜುಮ್ಮಿ.

"ಇಲ್ಲ ಕಣಕ್ಕ, ಕಕ್ಸ್ ಮನೆ ಕ್ಯಳಗಡೆಯಿಂದ ಬಂ... ದಬ್ಬ ತಗಂಡು ವಂಟೋಗರಂತೆ. ಅದ್ರು ಕ್ಯಳಗಲಿ... ನೋಡಿದ್ರೆ, ಯರಡುಕ್ಕೊಯ್ತಾಯಿರೋರು ಗಂಡಸ... ಹೆಂಗಸೋ ಅಂತ ಗೊತ್ತಾಗದಂತೆ."

"ಆಹಹ ಅದ್ಯಂಗೋತ್ತಾಗದ್ದ?" ಎಂದು ಜು... ನಕ್ಕಳು.

"ಈಗ ನೀನು ಅಟ್ಟದ ಮ... ಕೂತಗಂಡು ಯರಡುಕ್ಕೋದ್ರೆ ... ಕ್ಯಳಗಳಿಂದ ನೋಡಬವುದಲವೇ... ಎಂದ ವಾಟಿಸ್ಸೆ ಹೇಳುತ್ತಿದ್ದಂತೆ ಬೆ... ಮೇಲೆ ಒಂದು ಬಿಗಿದ ಜುಮ್ಮಿ...

"ನಾನ್ಯಾವತ್ತು ಅಟ್ಟುದ ಮ್ಯಾ... ಹೋಗಿದ್ದೆ?" ಎಂದಳು.

"ನೋಡಕ್ಕ ನಮ್ಮ ಅನ... ಮೂರ್ತಿಯವರ ಹೆಸುರು ಕೇಳ... ಏನಕ್ಕ?"

"ಊಕಣೇಳ್ಳ. ಒಂದು ಸತಿ ಯಲಕ್ಸನ್ನಿಗೆ ನಿಂತಿದ್ರು."

"ಅವುರು ಒಂದು ಕಾದಂಬ... ಬರದವುರೆ. ಅದರಲ್ಲಿ ಒಬ್ಬ ಮ... ರಾಣಿ ಬಂದು ಯರಡುಕ್ಕೋಯ... ದಲಿತರೋನು ಕ್ಯಳಗಾಸಿ ಬಂ... ಲ್ಯಟರಿನ್ ಡಬ್ಬ ತಗಂಡೋಯ... ಹಿಂಗಿರುವಾಗ ಒಂದು ಸತಿ ಬಂದು ನೋಡ್ತನೆ ಮಾರಾ... ಯರಡುಕ್ಕೋಯ್ತಾ ಅವುಳೇ."

"ಅಮ್ಯಾಲೆ?"


"ಅಮ್ಯಾಲೇನು, ನೋಡಿದ ಇವುನು, ನೋ... ನೋಡಿದ. ಆಹಾ ಈ ಹೆಣ್ಣುಮಗಳ ಮಲಮೂತ...

ಅಮೆರಿಕಾಗೆ ಹೋದರೂ 'ಬೆನ್ ಟೆಸ್ಟ್' ತಪ್ಪಲ್ಲ!

'ಅನುದೇವ ಹೊರಗಣವನು' ಕೃತಿ ಆಸಕ್ತರೆಲ್ಲರ ಮನೆ ಮನಗಳನ್ನು ತುಂಬ ವೈಬ್‌ಸೈಟನಲ್ಲಿ ವಿಶ್ವದ ಮೂಲೆಮೂಲೆಗಳಲ್ಲೂ ದೊರೆಯುತ್ತಿರುವಾಗ ಘನ ಸರ್ಕಾರ ಅದನ್ನು ಮುಟ್ಟುಗೋಲು ಹಾಕಿಕೊಂಡಿತು! ಸರ್ಕಾರದ ಮೂಲ ಉದ್ದೇಶ ಫಲಿಸದಿದ್ದರೂ ಜಾತಿ ರಾಜಕಾರಣಿಗಳ ಮನಸ್ಸನ್ನು ತೃಪ್ತಿಗೊಳಿಸಲಾಯಿತಲ್ಲ, ಅಂತಹವರ ಮತ ತಮ್ಮ ಪಕ್ಷಕ್ಕೆ ಖಚಿತ ಎಂಬುದಾಗಿ ಬೀಗಿತು. ಇತ್ತ ಮುಟ್ಟುಗೋಲಿಗೆ ಬೇದಿಗಿಳಿದು ತಮ್ಮ ಧಾರ್ಮಿಕ, ಆಧ್ಯಾತ್ಮಕ ಕರ್ತವ್ಯ ಪೂರೈಸಿದ ಮಠಾಧೀಶರುಗಳು, ಇದಕ್ಕೆ ಬೆಂಬಲವಾಗಿ ನಿಂತ ವೀರಶೈವ ಮುಖಂಡರು ಯುದ್ಧದಲ್ಲಿ ದಿಗ್ವಿಜಯ ಪಡೆದಂತೆ ವಿಜಯೋನ್ಮಾದದಲ್ಲಿ ತಲ್ಲೀನರಾಗಿರುವಾಗ....

ಕೆಲವರ ಮನಸ್ಸಿನ ಆಳದಲ್ಲಿ ಸರ್ವರನ್ನೂ ಸಮಾನತೆಯಿಂದ ಕಾಣುತ್ತಿದ್ದ ಬಸವಣ್ಣ ಬ್ರಾಹ್ಮಣ ಮೂಲದವನು ಎಂದಾಗ ಎಂತಹದ್ದೋ ತೃಪ್ತಿಯನ್ನು ಪಡೆಯುತ್ತಿದ್ದು, ಆತ ಮಾದಿಗರ ಮೂಲದವನು ಎಂದು ತಿಳಿದಾಗ ಮನಸ್ಸು ಹುಳ್ಳುಹುಳ್ಳಗೆ ಮಾಡಿಕೊಂಡಿದ್ದು ಕೀಟದಂತೆ ಕೊರೆಯಲಾರಂಭಿಸಿತು. ಸಾರ್ವಜನಿಕರೂ ಇದೇ ಪ್ರಶ್ನೆಯನ್ನು ಎತ್ತಿ ತಮ್ಮ 'ಮುಟ್ಟುಗೋಲು ಸಂಸ್ಕೃತಿ'ಯನ್ನು ಗೇಲಿ ಮಾಡುತ್ತಿರುವುದನ್ನು ಕಂಡು ಕೆಡುಕೆನಿಸಿತು. ಸರ್ವ ಸಮಸ್ಯೆಗಳಿಗೂ ಬಾಹುಬಲವೇ ಮದ್ದು ಎಂದು ಕಾಯಾವಾಚಾಮನಸಾ ನಂಬಿರುವ ವಿಶ್ವ ಬಸವಧರ್ಮ ಮಹಾಸಭೆಯ ಸಂಘಟನಾ ಕಾರ್ಯದರ್ಶಿ ದಯಾನಂದ ಸ್ವಾಮೀಜಿ ಜ್ಞಾನೋದಯ ಆದವರಂತೆ 'ನಾವು ಮುಟ್ಟುಗೋಲಿಗೆ ಆಗ್ರಹಿಸಿದ್ದು ಬಸವಣ್ಣ ಮಾದಿಗ ಮೂಲದವ ಎಂದು ಹೇಳಿದ್ದಕ್ಕಲ್ಲ. ಮಾದಿಗರನ್ನು ನಮ್ಮ ಮನೆಯ ಒಳಕ್ಕೆ ಬಿಟ್ಟುಕೊಳ್ಳುವುದಿಲ್ಲವಾದರೂ, ಬ್ರಾಹ್ಮಣರ ಪಾದಪೂಜೆ ಮಾಡುವ ಮನಸ್ಥಿತಿ ನಮ್ಮದಾಗಿದ್ದರೂ, ಎಲ್ಲ ಜಾತಿಯವರು ಸಮಾನರು ಎಂದು ಬಸವಣ್ಣನಂತೆಯೇ ನಮ್ಮ ಮನಸ್ಥಿತಿಯೂ ಇದೆ. ಆದರೆ ಅನುಮಾನಿತ ಸತ್ಯ ಮತ್ತು ಸಂಭಾವ್ಯವಿರಬಹುದು ಎಂಬ ಹೆಸರಿನಲ್ಲಿ ಬಸವಣ್ಣನ ಚಾರಿತ್ರ್ಯವಧೆ ಮಾಡಿದ್ದು ನಮ್ಮ ತೋಳ್ಬಲ ಪ್ರದರ್ಶಿಸಲು ಕಾರಣವಾಯಿತು' ಎಂಬರ್ಥದ ಸಮಜಾಯಿಷಿ ನೀಡುತ್ತಿದ್ದಾರೆ.

ಇನ್ನೊಂದು ಕಡೆ ಅಡ್ಡ ಪಲ್ಲಕ್ಕಿಯಲ್ಲಿ ಮೆರೆಯುತ್ತಾ, ಭಕ್ತರು ತಮ್ಮ ಪಾದ ಪದ್ಮಂಗಳಿಗೆ ನಮಸ್ಕರಿಸುವುದನ್ನು ಹುಸಿನಗೆಯ ತಿರಸ್ಕಾರದಿಂದಲೋ ಆತ್ಮಾಭಿಮಾನದಿಂದಲೋ ಭಕ್ತರ ಲಿಂಗ-ವರ್ಗವನ್ನು ಆಧರಿಸಿ ಘನವಾದ ಆಶೀರ್ವಾದ ನೀಡುತ್ತಾ, ತಾವು ಸರ್ವಸಂಗ ಪರಿತ್ಯಾಗಿಗಳು ಎನ್ನುತ್ತಲೇ ಇಹಲೋಕದ ಸಕಲ ಸೌಲಭ್ಯಗಳನ್ನೂ ಅನುಭವಿಸುತ್ತಿರುವ ಸರ್ಕಾರೀ ಕೃಪಾಪೋಷಿತ ಮಠಾಧೀಶರು 'ಅನುದೇವ' ಹೊರಬಂದ ದಿನದಿಂದಲೂ ಚಿಂತಾಕ್ರಾಂತರಾಗಿದ್ದಾರೆ. ಬಸವಣ್ಣನ ಬದುಕು, ಆತನು ಹೇಳಿರುವ ಮಾತು ಮುಖ್ಯವೇ ಪರಂತು ಈ ಹಾಳು ಜಾತಿಯಲ್ಲ, ಜಾತಿಯನ್ನು ಏಕೆ ಕೆದಕುತ್ತೀರಿ ಎಂಬ ಅದ್ಭುತವಾದ ಸಲಹೆ ನೀಡುತ್ತಲೇ ಬಂದಿದ್ದಾರೆ. ಪರಮಪಾಪಿಗಳು ಬಸವಣ್ಣ ಮಾದಿಗರ ಕುಲಕ್ಕೆ ಸೇರಿದವನು ಎಂಬುದನ್ನು ದೃಢೀಕರಿಸಿಯೇ ಬಿಟ್ಟರೆ ವೀರಶೈವ



ಮಠಾಧೀಶರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ತಾವು ಮಾದಿಗರ ಮಠಾಧೀಶ ಎಂಬ ಕೀಳುಮಟ್ಟಕ್ಕೆ ಇಳಿಯಬೇಕಲ್ಲ what a fall ಎಂಬುದು ಅವರ ಅಳಲಿರಬಹುದು!

ಇದು ಹೇಗಾದರೂ ಇರಲಿ. ಕನ್ನಡ ಸಾರಸ್ವತಲೋಕ ಜಾತಿಯಿಂದ ವಿಮುಕ್ತಗೊಂಡಿದೆಯಾ ಅಂದರೆ ಯಾವುದೇ ಕವಿಯ ಜಾತಿಯನ್ನು ಜಾಲಾಡದೇ ಬಿಟ್ಟಿಲ್ಲ!

ಹೌದು ಈ 'ಮುಟ್ಟುಗೋಲು ಸಂಸ್ಕೃತಿ' ಯಾವ ಸಮುದಾಯಕ್ಕೆ ಹೆಚ್ಚು ತಳುಕು ಹಾಕಿಕೊಂಡಿದೆ?

ಸಲ್ಮಾನ್ ರಶ್ದಿ ಸೆಟಾನಿಕ್ ವರ್ಸಸ್ ಬರೆದ.

ಪ್ರವಾದಿ ಮುಹಮ್ಮದನಿಗೆ ಅವಮಾನ ಮಾಡಿರುವುದನ್ನು ಕೆಲವರು ಕಂಡರು! ಏನು ಮಾಡಬೇಕು ಈಗ?

ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಿ!

'ಲಜ್ಜಾ' ತಸ್ಲೀಮಾ ಅವರ ಆತ್ಮಕಥೆ.

ಏನು ಕಂಡಿತು ಅದರಲ್ಲಿ?

ಮೌಲ್ವಿಗಳಿಂದ ಖುರಾನಿನ ತಪ್ಪು ವ್ಯಾಖ್ಯಾನ. ಸ್ತ್ರೀಯರಿಗೆ ಸಲ್ಲದ ಹಿಂಸೆ.

ಇದನ್ನು ಸಹಿಸೀತೆ ಪುರುಷ ಇಸ್ಲಾಂ ಸಮುದಾಯ?

ಕೂಗಿತು-ಕೃತಿ ಮುಟ್ಟುಗೋಲು ಹಾಕಿಕೊಳ್ಳಿ!

ಮಾಸ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ.

ಆಗ ಗೋಚರಿಸಿತು ಅವರ ಕಾದಂಬರಿ 'ಚಿಕ್ಕವೀರರಾಜೇಂದ್ರ'ದಲ್ಲಿ ಲಿಂಗಾಯತರಿಗಾಗಿರುವ ಅಪಮಾನ! ಆಗ್ರಹಿಸಿತು ಆ ಸಮುದಾಯ-ಕೃತಿಯ ಮುಟ್ಟುಗೋಲಿಗೆ!

ಪಿ.ವಿ. ನಾರಾಯಣರ 'ಧರ್ಮಕಾರಣ' ಕಾದಂಬರಿ. ಬೇರೆ ಜಾತಿಯವರು ಯಾರು ಸಿಗಲಿಲ್ಲವೆ ಇವರಿಗೆ. ಅಲ್ಲಿಯೂ ಲಿಂಗಾಯತರ ಚಾರಿತ್ರ್ಯವಧೆ!

ಪರಿಣಾಮ-ಕೃತಿ ಮುಟ್ಟುಗೋಲು.

ಎಚ್.ಎಸ್. ಶಿವಪ್ರಕಾಶ್‌ರ 'ಮಹಾಚೈತ್ರ' ನಾಟಕ. ಪದವಿ ತರಗತಿಗಳಿಗೆ ಪಠ್ಯ ಆಯಿತು. ಆಗ ಯಾರಿಗೋ ಗೋಚರಿಸಿತು ವೀರಶೈವರಿಗೆ ಆಗಿರುವ ಅವಮಾನ!

ಕೃತಿಯ ಮುಟ್ಟುಗೋಲಿಗೆ ಆಗ್ರಹ!

ಎಂ.ಎಂ. ಕಲಬುರ್ಗಿಯವರ ಮಾರ್ಗ 2. ಅಲ್ಲಿಯೂ ಇದೇ ಸಮುದಾಯಕ್ಕೆ ಅವಮಾನ ಆಗಿರಬೇಕೆ?

'ಮುಟ್ಟುಗೋಲು ಹಾಕಿ' ಪ್ರತಿಭಟನೆ.

ಬಂಜಗೆರೆ ಜಯಪ್ರಕಾಶರ ಅನುದೇವದ ಕತೆ ಎಲ್ಲರಿಗೂ ತಿಳಿದದ್ದೆ. ಬಸವಣ್ಣನ ಚಾರಿತ್ರ್ಯವಧೆ ಮಾಡಿದ್ದಕ್ಕಾಗಿ ಇಲ್ಲಿ ಲೇಖಕನ ವಧೆ!

ಇಲ್ಲಿ ಒಂದು ಸಂಶಯ. 'ಮಾರ್ಗ'ದಲ್ಲಿ ಆಕ್ಷೇಪಿತ ಪುಟಗಳನ್ನು ಬಿಡಲು ಲೇಖಕರ ಸಮ್ಮತಿ. ಮುಟ್ಟುಗೋಲು ಶಿಕ್ಷೆಯಿಂದ ಮಾಫಿ! 'ಮಹಾಚೈತ್ರ' ಪಠ್ಯ ಆಗುವುದರಿಂದ ಹಿಂಪಡೆತ. ಇಲ್ಲೂ ಮಾಫಿ. 'ಧರ್ಮಕಾರಣ'ಕ್ಕೆ 'ಅನುದೇ... ಹೊರಗಣವನು' ಕೃತಿಗೆ, ಕೃತಿಕಾರ 'ಅನುದೇ... ಹಿಂಪಡೆದಿದ್ದೇನೆ ಎಂದಮೇಲೂ 'ಮುಟ್ಟುಗೋಲು... ಚಂಪಾ ಹೇಳಿದಂತೆ

'ಇವರು ಒಳಗಣವರು
ಅವರು ಹೊರಗಣವರು'

ಎಂಬುದೇ ನಿಜವಾ! ಏನು ನ್ಯಾಯ, ಏನು ನಿಷ್ಠ... ಏನು ಕತೆ!

ಎಚ್.ಎಲ್. ಕೇಶವಮೂ...

ಅಲ್ಲ ಕರ್ನಾಟಕದಲ್ಲಿ ವೀರಶೈವ ಸಮುದಾಯ... ಯಾಕೆ ಅತಿ ಹೆಚ್ಚು ಕೃತಿಗಳ ಮುಟ್ಟುಗೋಲಿಗೆ ಆಗ್ರಹಿಸಿ...

ಬರಗೂರು ರಾಮಚಂದ್ರಪ್ಪ ಇದಕ್ಕೆ ಒಂದು ಕಾ... ಗುರುತಿಸಿದ್ದಾರೆ. ಬಸವಣ್ಣ ಪ್ರತಿಪಾದಿಸಿದ್ದು ಜಾತಿ ವಿಸ... ಅಲ್ಲ, 'ಶಿವಸಂಸ್ಕೃತಿ'ಯನ್ನು. ಏಕದೈವೋಪಾಸನೆ ಅ... ಗುರಿಯಾಗಿತ್ತು. ಈ ಏಕದೈವ ಶ್ರೇಷ್ಠತೆ ಪ್ರತಿಪಾದನೆ... ಭಯೋತ್ಪಾದನೆಗೂ ಸಂಬಂಧ ಇದೆ.

ಏಕದೈವ ಶ್ರೇಷ್ಠತೆಯ ಜೊತೆಗೆ ಸಂಖ್ಯಾಬಾಹುಳ್ಯ... ಸೇರಿ ವೀರಶೈವ ಸಮುದಾಯ ಇಂತಹ 'ಮುಟ್ಟುಗೋ... ಸಂಸ್ಕೃತಿ'ಗೆ ಹೆಚ್ಚುಹೆಚ್ಚು ಒತ್ತಾಸೆ ನೀಡುತ್ತಿರಬಹುದೆ ಹಾ... ಇಸ್ಲಾಂ ಮೂಲಭೂತವಾದಕ್ಕೂ ಇದಕ್ಕೂ ಹೋಲಿಕೆಗ... ಇವೆಯೆ ಎಂಬುದನ್ನು ಕುರಿತು ಆಳವಾದ ಚಿಂ... ನಡೆಸಬೇಕಾಗಿದೆ.

ಇರಲಿ, ಇತ್ತೀಚೆಗೆ ಯುವಕವಿ ಬಸವರಾಜ ಹೂಗ... ಅವರ ಕವನ ಸಂಕಲನ 'ತತ್ರಾಣಿ' ಧಾರವಾಡದಲ್ಲಿ ಬಿಡು... ಆಯಿತು. ಅದರಲ್ಲಿ ಒಂದು ಕವನ 'ಎಲ್ಲಿಗೆ ಹೋಗೀ...

ಸಂದರ್ಭ ಯಾವುದೋ
ಎದ್ದು ಹೋಗುವಾಗ
"ಗೊತ್ತಾಗಲಿಲ್ಲ ತಮ್ಮ ಹೆಸರೇನು?"
ಎಂದು ಕೇಳಿದ ಅವನ
ಪ್ರಶ್ನೆಯ ಹಿಂದೆ
ನನ್ನ ಜಾತಿಯ ಹುಡುಕಾಟವಿತ್ತು.

ಕೆಲಸವಾಗಬೇಕೆ?
ನಿಮ್ಮ ಜಾತಿಯ ಅಧಿಕಾರಿಯ ಹತ್ತಿರ ಹೋಗಿ...

ಗವೇ ಇಷ್ಟು ಸುಂದರವಾಗಿರಬೇಕಾದ್ರೆ ಇನ್ನ ಮುಖಯಂಗಿರಬೇಕು ಅಂತ ಯೋಚನೆ ಬಂದುಬುಡುತು ಕಣಕ್ಕ."

"ಯೋಚನ್ಯಾಕೆ ಬತ್ತ?"

"ಯಾಕೆ ಅಂದ್ರೆ ಅಂತಮುಖ ನೋಡ್ದೆ ಬೇಕು. ಇಲ್ದಿದ್ರೆ ನಾನು ಾಡಿರೊ ಹೇಲಿನ ಚಾಕ್ರಿ ಜೀವನ ಸಾರ್ಥಕಾಗದಿಲ್ಲ ಅಂತ ಅನ್ನಕಂಡು ನಿಗೋಗಿ ಅವುನೆದ್ರಿಗೆ ಈ ಸುದ್ದಿ ಹೇಳೀ, ಏನಾರ ಆಗ್ಲಿ ಮಾರಾಣಿ ಮಕ ೋಡ್ಲೇಬೇಕು ಅಂತ ಅನ್ನ, ನೀರು ಬುಟ್ಟು ಹಟ ಇಡುದು ಮನಗಿದನಂತೆ."

"ಮಂಗಮುಂಡೆ ಮಗ ಕಂಡ್ರ ಅವುನು."

"ಇಲ್ಲ ಕಣಕ್ಕ. ಅವುನೂ ಒಂಥರಾ ಹಟಯೋಗಿನೆ. ದಲಿತ್ರಿಗೆ ಅಂತ ಟ ಇರಲಿಲ್ಲ ಅಂದ್ರೆ ಇವತ್ತಿನವರಿಗೂ ಅಂತ ಕ್ಯಲಸ ಮಾಡ್ತಯಿದ್ರೆ?"

"ಅಂಥಾ ಕ್ಯಲಸಕೂ ಬ್ಯಾಂಬ್ರು ಬಂದ್ರು ಅಂದ್ರೆ ಏನ್ಹೇಳನ?" ಎಂದ ಗ್ರಿ.

"ಅಂದ್ರೆ ನೀನೇಳೊ ಮಾತು ದೂರುಕೋಯ್ತಾ ಅದೆ ಕಣೊ ಉಗ್ರೀ. ಈ ವ್ಯಾಪ್ತಿಗೆ ಬ್ರಾಮಣ ಬರ್ತಾ ಅವುನೆ ಅಂದಂಗಾಯ್ತು" ಎಂದ ವಾಟಿಸ್ಸೆ.

"ಮುಂದಕೇಳ್ಳ ಅದೇನಾಯ್ತು ಅಂತ?" ಎಂದಳು ಜಮ್ಮಿ.

"ಮುಂದಕೇನಾಯ್ತವ್ವಾ ಅಂದ್ರೆ, ದಲಿತನೆಂದ್ರಿಗೆ ಯೋಚನೆ ಬಂದುಬುಡ್ತು, ರೋನೆ ಒಬ್ಬ ಗಂಡ ಸತ್ರೆ ನಾನೆಲ್ಲಿಗೋಗ್ಲಿ ಅಂತ ಅವುಳು ಅತ್ತಗಂಡು ಕಂಡು ಮರಾಣಿಹತ್ರಕೋಗಿ ಮರೆಲಿ ನಿಂತಗೊಂಡು ತನ್ನ ಗಂಡನ ಸ್ಥಿತಿ ೇಳಿಕೊಂಡ್ಳು."

"ಮಾರಾಣಿ ಒಪ್ಪಿದ್ಲೆ?"

"ಒಪ್ಪದೆಯಾ. ತನ್ನ ಗಂಡ ಒಂದೇ ಒಂದು ಸತಿಯಾದ್ರು ನನ್ನ ಮರಮಾಂಗ ಚ್ಚೆ ಮಾತಾಡಿಲವಲ್ಲ ಅಂತ ಆ ದಲಿತನಿಗೆ ಮುಖ ತೋರಕ್ಕೆ ತಯಾರಾಯ್ತಳೆ. ದ್ರೆ ದಲಿತ ಇವುಳ ಮುಖ ನೋಡೊ ಆಸೆಯಿಂದ ಪಾರಾಗಿಬುಟ್ಟಿರತನೆ, ೋಗಿ ಯಂಗಾಗಿರತನೆ. ಯಂಗದೆ ದ್ವಡಪ್ಪ ಕತೆ?" ಎಂದು ವಾಟಿಸ್ಸೆ ಂಟತನದಿಂದ ಕೇಳಿದ.

"ನಿಮ್ಮವ್ವನ ಮುಸುಡಿಯಂಗದೆ, ಫೋಲಿಬಡ್ಡೆತ್ತುದ್ದೆ."

"ದ್ವಡಪ್ಪ ಇದು ಸೆಕ್ಸ್ ಕತೆಯಲ್ಲ, ಇದರಲ್ಲಿ ಏನೋ ಫಿಲಾಸಫಿ ಅದೆ ಡುಕು" ಎಂದು ವಾಟಿಸ್ಸೆ ನಗಾಡಿದ. ಅವನೊಡನೆ ಎಲ್ಲರೂ ನಕ್ಕರು.

" !?"

■

ಎಂದವನ ಸಲಹೆಯಲ್ಲಿ
ನಿಜವಾಗಿಯೂ ಸತ್ಯವಿತ್ತು.

ಕೈಕೈ ಹತ್ತಿ ನಿನ್ನೆ
ಹೊಡೆದಾಡಿದವರ ಮುಖದಲ್ಲಿ
ಇಂದು ನಗೆಯ ಸಂಭ್ರಮ
ಯಾಕೆಂದರೆ
ಅವರದು ಒಂದೇ ಜಾತಿ!

ಯಾರೂ ನಿಮ್ಮ ತಂಟೆಗೆ
ಬರಬಾರದೆ?
'ಆ ಮಂತ್ರಿ ನಮ್ಮ ನಂಟನಪ್ಪಾ'
ಎಂದು ಹೇಳಿ ಸಾಕು.

ಮುಕ್ತವಾಗಿ ಮಾತನಾಡಲು
ಹೊಸಗೆಳೆಯ ಸಿಕ್ಕನೆಂದು
ಹಿಗ್ಗಿಹೀರೆಕಾಯಿಯಾದೆ
ಹಿಂದಿನಿಂದ
ಅವನೂ ನನ್ನ ಜಾತಿ ಕೇಳಿದ.


ಐಡೆಂಟಿಟಿ ಕಳಕೊಂಡು
ಹಾಯಾಗಿರಲು
ಹೈಟೆಕ್ ಸಿಟಿ ಬೆಂಗಳೂರಿಗೆ ಬಂದರೆ
ಇಲ್ಲೂ ಅದೇ ಸಂಗತಿ
ದೇವರೇ
ಎಲ್ಲಿಗೆ ಹೋಗಲಿ?

ಕೃತಿ ಬಿಡುಗಡೆ ಮಾಡಿದ ನಾನು ಹೇಳಿದೆ- ಬೆಂಗಳೂರಿನಲ್ಲಿ ಈಗ ೊಸ ಪರೀಕ್ಷೆ ಬಂದಿದೆ. ಅದೇ 'ಬೆನ್ ಟೆಸ್ಟ್!' ಹಂಗಂದರೇನಪ್ಪ ಅಂದರೆ... ತಿ ಉತ್ಸಾಹದಿಂದ ಯುವಕರು ಟಿವಿ ಮಾಧ್ಯಮದಲ್ಲೋ, ಸಿನಿಮಾದಲ್ಲೋ, ತ್ರಿಕಾಮಾಧ್ಯಮದಲ್ಲೋ ಅಥವಾ ಮತ್ತೆಲ್ಲಿಯೋ ಸೇವೆ ಸಲ್ಲಿಸಬೇಕು ಅಂತ ಂದಿರ್ತಾರೆ. ಅವರನ್ನ ಸಂಬಂಧಿಸಿದವರು ಎಲ್ಲ ರೀತಿಯ ಪರೀಕ್ಷೆ ಮುಗಿಸಿದ ೇಲೆ ಈ 'ಬೆನ್ ಟೆಸ್ಟ್' ಮಾಡುತ್ತಾರಂತೆ. ಸರ್ಕಾರಿ ಕೆಲಸಕ್ಕೆ ಸೇರಬೇಕಾದರೆ ್ವೈದ್ಯಕೀಯ ಟೆಸ್ಟು ಅಂತ ಅಂತಿಮವಾಗಿ ಮಾಡುತ್ತಾರಲ್ಲ ಹಾಗೆ ಇದೂನುವೆ. ಭ್ಯರ್ಥಿ ಪ್ರತಿಭಾವಂತ ಅಂತ ಗೊತ್ತಾದ ನಂತರ ಪ್ರೀತಿಯಿಂದ ತಬ್ಬಿಕೊಂಡು, ನ್ನು ಸವರುತ್ತಾರಂತೆ. ಅವರ ಸವರಿಕೆಯಲ್ಲಿ ಅಲ್ಲೇನಾದರೂ ಹುರಿ ಅಂತಹದ್ದು ಗೆ ಅನುಭವ ಆದರೆ ಅವರ ಮುಖದ ಮೇಲೆ ತೃಪ್ತಿ ಬರುವುದಂತೆ. ಿಪ್ಪ ಸಲ ಹೀಗೆ ಸಿಗದೇ ಇದ್ದರೇ ಸಂಬಂಧಿಸಿದವರ ಕಣ್ಣಲ್ಲಿ ಕಾಂತಿ ೀರುವುದಂತೆ. 'ಬೆನ್ ಟೆಸ್ಟ್' ಆಧಾರದ ಮೇಲೇ ಅಂತೆ ಕೆಲಸ ಕೊಡೋದು! ಜಾತಿ ಅನ್ನೋ ಪೀಡೆ ಬೆಂಗಳೂರಿಗೆ ಬಂದರೂ ಬಿಡಲಿಲ್ಲ ಅಂತ ಗೋಳಾಡಿದ್ದಾನೆ. ನೀವು ಬೆಂಗಳೂರಲ್ಲ, ಅಮೆರಿಕಾಗೆ ಹೋದರೂ ್ಟೆ ಕಣ್ಕೆ, ಅಲ್ಲೂ ಆ ಜಾತಿ ಸಂಘ, ಈ ಜಾತಿ ಸಂಘ ಅಂತ ಇರ್ತಾವಂತೆ. ವು ಅಮೆರಿಕ ಅಲ್ವಾ, ಅದಕ್ಕೆ ಜಾತಿ ಹಿಂದೆ ಅಮೆರಿಕ ಸೇರಿಸಿರುತ್ತಾರಂತೆ! ಹೀಗೆ ಸುಳಿ ಎಲ್ಲಿ ಬೋಳಿಸಿದರೂ ಅಷ್ಟೇನೆ. ಹಳ್ಳೀಲಾದರೂ ಬೋಳಿಸಿ, ಿಂಗಳೂರಲ್ಲಾದರೂ ಬೋಳಿಸಿ, ಅಮೆರಿಕಾದಲ್ಲಾದರೂ ಬೋಳಿಸಿ, ಅದರ ೆ ಬರುವುದೇ ಇಲ್ಲ!

■

ಡಾಲಿ ಬೇಕೆ?

ಮೊನ್ನೆ ಸಾಲ್ವಡಾರ್ ಡಾಲಿ ಬಗ್ಗೆ ಟೀಕೆ-ಟಿಪ್ಪಣಿ ಬರೆದದ್ದಕ್ಕೆ ಅನೇಕರು ಮೆಚ್ಚಿ ಕಾಗದ ಬರೆದಿದ್ದಾರೆ; ಒಬ್ಬರೇ ಒಬ್ಬರು "ಜನರ ಗೋಳು ಅಪಾರವಾಗಿದೆ. ನೀವು ಎಲ್ಲೋ ಕೆಲವರು ಓದುವ ಇಂಥ ವಿಷಯ ಕುರಿತು ಬರೆಯಬಾರದು" ಎಂದು ಹೇಳಿದ್ದಾರೆ. ಜನರ ಕಷ್ಟ ಲೆಕ್ಕವಿಲ್ಲದಷ್ಟಿವೆ. ಇಲ್ಲಿ ವಸತಿ, ಆಹಾರ, ಸಾರಿಗೆ, ಉದ್ಯೋಗದ ಸ್ಥಿತಿಯೆಲ್ಲ ಕೆಟ್ಟಿವೆ. ಭ್ರಷ್ಟರು ರಾಜಕಾರಣವನ್ನು ಉದ್ಯೋಗ, ವ್ಯಾಪಾರ ಮಾಡಿಕೊಂಡು ಸುಲಿಯುತ್ತಿದ್ದಾರೆ. ಇದನ್ನೆಲ್ಲ ಕುರಿತು ನಾವೂ ಬರೆದಿದ್ದೇವೆ; ಬರೆಯುತ್ತಿದ್ದೇವೆ.



ಮರೆಯುವ ಮುನ್ನ





ಪಿ. ಲಂಕೇಶ್ ಫೆಬ್ರವರಿ 19, 1989

ಇವರ ಜೊತೆಗೆ-ಒಂದು ಜನತೆಯ ಮುಖ್ಯ ಸಮಸ್ಯೆಗಳಲ್ಲಿ ಒಂದು ಸಂವೇದನೆಯ ದಾರಿದ್ರ್ಯ. ಒಂದು ಚಿತ್ರ ನೋಡಲಿ, ಒಂದು ಪುಸ್ತಕ ಓದಲಿ, ಒಂದು ಹಾಡು ಕೇಳಲಿ-ಆ ಅನುಭವವನ್ನು ಹಂಚಿಕೊಂಡರೆ ಮಾತ್ರ ಮನುಷ್ಯ ಸಂಸ್ಕೃತಿಯತ್ತ ನಡೆಯುತ್ತಾನೆ. ಚಿತ್ರಕಾರ ಡಾಲಿ ಶ್ರೀಮಂತ ದೇಶದವನು; ತಿಳಿವುಳ್ಳ ದೇಶದವನು. ಆತ ಮೊತ್ತಮೊದಲ ಬಾರಿಗೆ ಸುಪ್ತ ಅನುಭವಗಳನ್ನು ವೈಚಾರಿಕತೆಯ ಕಟ್ಟುಗಳ ಮೇಲೆ ಹಾಯಿಸಿದ. ಫ್ರಾಯ್ಡ್ ಎಂಬ ಮನಶಾಸ್ತ್ರಜ್ಞನ ಅಭಿಮಾನಿಯಾಗಿದ್ದ ಡಾಲಿ ಪೆನ್ನು, ಕುಂಚಕ್ಕೆ ಮನುಷ್ಯನ ಆಳದ, ಆತ ಅರಿಯದ ಗ್ರಹಿಕೆ ತರಲು ಯತ್ನಿಸಿದ. ನಮ್ಮೆಲ್ಲ ಗೋಳುಗಳ ನಡುವೆಯೂ ಡಾಲಿಯ ಸಾವು ಆತನ ಬದುಕಿನ ಅರ್ಥವನ್ನು ಕ್ಷಣವಾದರೂ ಸ್ಪರಿಸಬೇಕು. ಇಲ್ಲದಿದ್ದರೆ ನಾವು ಭ್ರಷ್ಟತೆ, ದಗಾಕೋರತನವನ್ನು ನೋಡುವಲ್ಲಿ ಕೂಡ ಅಸೂಕ್ಷ್ಮರಾಗುತ್ತೇವೆ.

ಪ್ರಯತ್ನಿಸಿದರೆ ಬರುವುದಿಲ್ಲ

ಅಂತರ್ವಾಣಿ, ಒಳದನಿ... ಇವುಗಳ ಬಗ್ಗೆ ಸುಮ್ಮನೇ ಯೋಚಿಸಿ. ಇವು ಕವಿಯ ಸ್ಫೂರ್ತಿಯ ಹಾಗೆಯೇ. ಸ್ಫೂರ್ತಿಯನ್ನು ಹುಟ್ಟಿಸಿಕೊಳ್ಳಲಾಗುವುದಿಲ್ಲ, ಒಳದನಿಯನ್ನು ಒತ್ತಾಯಿಸಿ ಪಡೆಯಲಾಗುವುದಿಲ್ಲ. ಇಕ್ಕಟ್ಟಿನ ವೇಳೆಯಲ್ಲಿ, ಸಾವುಬದುಕಿನ ಪ್ರತಿಧ್ವನಿ ಕೇಳತೊಡಗಿದಾಗ ಹುಟ್ಟುವ ಅಂತರ್ವಾಣಿಗೆ ಕಾವ್ಯದ ಶಕ್ತಿ ಇರುತ್ತದೆ. ಒಳ್ಳೆಯ ಕಾವ್ಯ ಕಂಡೊಡನೆ 'ಓಹ್!' ಅನ್ನಿಸುವಂತೆ ಈ ಅಂತರ್ವಾಣಿ ಕೇಳಿದಾಗ ಚಕಿತಗೊಳ್ಳುತ್ತೇವೆ. ಅಂತರ್ವಾಣಿಯಿಲ್ಲದೆ ಕೇವಲ ನುಡಿಯುವ ಹುಮ್ಮಸ್ಸಿನಿಂದ ಬಂದದ್ದು ಮಾತು, ಅದು ಕೇವಲ ಮಾರ್ಗದರ್ಶನ. ಸ್ಫೂರ್ತಿಯಿಂದ ಬಂದ ಅಂತರ್ವಾಣಿಗೆ ಮಾಂತ್ರಿಕತೆ ಇರುತ್ತದೆ.





'ಜಾಲಿ' ಜಿಲ್ಲೆ

ಎಂಥ ವಿಪರ್ಯಾಸಗಳ ದಿಟ್ಟ ಜಿಲ್ಲೆ ಬಳ್ಳಾರಿ; ಅನರ್ಘ್ಯ ಕಲ್ಲುಗಳು, ಅಪಾರ ಕಬ್ಬಿಣ, ತಡಕಿದಷ್ಟೂ ದಕ್ಕುವ ಇತಿಹಾಸದ ಸುವರ್ಣ ಪುಟಗಳು. ಬಡವರಾದ ಜನ. ಪಕ್ಕದ ಆಂಧ್ರ ಪ್ರದೇಶದಿಂದ ಬಂದು ಉದ್ಧಟತನ ತೋರುವ ತೆಲುಗರು. ಆದರೆ ಬಳ್ಳಾರಿ ಜನರ ಉತ್ಸಾಹ ಕಮ್ಮಿಯಾಗಿಲ್ಲ. ಮುಟ್ಟಿದರೆ ಇಂಪು ಧ್ವನಿ ಹೊರಡಿಸುವಂಥ, ಶೃತಿ ಮಾಡಿದರೆ ಅದ್ಭುತ ಅರ್ಥ ನೀಡುವಂಥ ಜನ. ಬಳ್ಳಾರಿ ನಗರ ಎಲ್ಲರ ನಿರ್ಲಕ್ಷ್ಯಕ್ಕೆ ಒಳಗಾಗಿ ಕಸದಬುಟ್ಟಿಯಂತಿದೆ. ಮುನಿಸಿಪಲ್ ಮೈದಾನವಂತೂ ಧೂಳುಮಯ. ಮಧ್ಯಾಹ್ನವೇ ಹಾದುಹೋಗುವಾಗ ನಾನು, ರಾಮದಾಸ್ ಆ ಮೈದಾನವನ್ನು ನೋಡಿ ನಿಟ್ಟುಸಿರುಬಿಟ್ಟಿದ್ದೆವು.

ಅಲ್ಲಿ ಆರುಗಂಟೆಗೆ ಸಭೆ. ಬಳ್ಳಾರಿ ಜಿಲ್ಲೆ, ಕರ್ನಾಟಕದ ರಾಜಕೀಯ ವಿವರಿಸುವಾಗ ಒಂದು ತಮಾಷೆ ಮರೆತೆ. ಅದಕ್ಕೇ ಈ ಟಿಪ್ಪಣಿ. ಜಿಲ್ಲೆಯ ತುಂಬ ಜಾಲಿ ಗಿಡಗಳು; ಕತ್ತರಿಸಿದರೆ ತಿಂಗಳೊಪ್ಪತ್ತಿನಲ್ಲಿ ಬೆಳೆಯುವ ಜಾಲಿ. ಬಳ್ಳಾರಿಯಲ್ಲಿ ಏನು ಬೆಳೆಯದಿದ್ದರೂ ಜಾಲಿ ಬೆಳೆಯುತ್ತೆ. ರಸ್ತೆ ಹಾಳಾಗಿವೆ; ದೊಡ್ಡ ಊರುಗಳಲ್ಲಿ ಕಕ್ಕಸ್‌ಗಳು ಕೂಡ ಇಲ್ಲ, ಆದ್ದರಿಂದ ತಮಾಷೆಯಾಗಿ ಸಾಂಕೇತಿಕವಾಗಿ ಹೇಳಬೇಕೆಂದಿದ್ದೆ; "ಬಳ್ಳಾರಿಯ ಬಂಧುಗಳೆ, ನಿಮ್ಮ ಜಿಲ್ಲೆಯ ಜಾಲಿ ನೋಡಿ ಚಕಿತನಾಗಿದ್ದೇನೆ. ಒಲೆ ಉರಿಸಲು ಜಾಲಿ, ಕಕ್ಕಸ್ ಮಾಡಲು ಮರೆ ಜಾಲಿ. ಆದರೆ ನೀವೆಲ್ಲ ನಿಮ್ಮ ಜಾಲಿ (jolly)ಯಾಗಿ ಓಡಾಡುವ ಜಾಲಿ ರಾಜಕಾರಣಿಗಳನ್ನು ನೋಡಿ ನೀವು ಜಾಲಿಯಾಗಿಯೇ ಇದ್ದರೆ ಕಡುಕಷ್ಟಗಳು ನಿಮಗಾಗಿ ಕಾದಿವೆ. ಕರ್ನಾಟಕದಲ್ಲೀಗ ಐದು ಲಕ್ಷ ಸುಶಿಕ್ಷಿತ ನಿರುದ್ಯೋಗಿಗಳು, ಇಪ್ಪತ್ತೊಂದು ಲಕ್ಷ ಅರೆಬರೆ ನಿರುದ್ಯೋಗಿಗಳು ಇದ್ದಾರೆ....."

ಜಾಲಿಯ ಸಂಕೇತ ಮರೆತು ಮಿಕ್ಕದ್ದು ಹೇಳಿದ್ದರಿಂದ ಇಲ್ಲಿ ಬರೆದಿದ್ದೇನೆ.

ಸೂಜಿಗಲ್ಲು



ನಮ್ಮ ತೇಜಸ್ವಿ ಹೇಳಿದರು, "ಪ್ರಗತಿರಂಗದ ಸಭೆಗಳನ್ನು ಬಸ್‌ಸ್ಟ್ಯಾಂಡ್, ಬಜಾರ್‌ಗಳಲ್ಲಿ ಇಟ್ಟುಕೊಳ್ಳುವ ಬದಲು ಯಾವುದಾದರೂ ಹಾಲ್ ಅಥವಾ ಕೋಣೆಯಲ್ಲಿ ಇಟ್ಟುಕೊಂಡರೆ ಒಳ್ಳೆಯದು."

ನಾನು ಯೋಚಿಸಿದೆ. ನಮ್ಮ ಬಹುಪಾಲು ಸಮಾಜವಾದಿಗಳು, ಬುದ್ಧಿಜೀವಿಗಳು ಬೆವರಿನ ವಾಸನೆಗೆ ಹಿಮ್ಮೆಟ್ಟುತ್ತಾರೆ. ಚರ್ಚೆ, ವಿವಾದ, ವಿಶ್ಲೇಷಣೆಯನ್ನು ಮೆಚ್ಚುತ್ತಾರೆ. ಆದರೆ ರಾಜಕೀಯವೆಲ್ಲ ಬರಡಾದದ್ದು ಈ ಹಾಲ್ ಮತ್ತು ಕೋಣೆಗಳಲ್ಲಿ. ಹರಕಲು ಅಂಗಿಯ ಬೀದಿಯ ಮನುಷ್ಯನನ್ನು ಪುಢಾರಿಗಳ ಭಾಷಣಕ್ಕೆ ಬಿಟ್ಟು ನಾವು ನಮ್ಮ ಮಿದುಳಿನ ವ್ಯಾಯಾಮದಲ್ಲಿ ನಿರತರಾಗಬಾರದು. ಬೀದಿಯ ಮನುಷ್ಯ ನಮ್ಮ ಭಾಷಣದ ಶೈಲಿ, ನುಡಿಕಟ್ಟನ್ನು ಬದಲಿಸುತ್ತಾನೆ; ಅತ್ಯಂತ ಗಾಢ ವಿಷಯಗಳನ್ನು ಮನನಾಟುವಂತೆ ಹೇಳುವುದನ್ನು ಈತ ನಮಗೆ ಕಲಿಸುತ್ತಾನೆ. ಇದು ನಮ್ಮ ವ್ಯಕ್ತಿತ್ವದ ಸಮತೋಲನಕ್ಕೆ ಕೂಡ ಮುಖ್ಯ. ಅಲ್ಲದೆ ಮನುಷ್ಯರೆನ್ನಿಸಿಕೊಂಡ ಎಲ್ಲರಿಗೂ ಸಮಾನವಾದ ಲಹರಿಗಳಿವೆ, ನೋವು ನಲಿವುಗಳಿವೆ; ಜನಸಾಮಾನ್ಯ ನಮ್ಮತ್ತ ಕೈಚಾಚಿ ನಾವು ಆತನತ್ತ ಬಗ್ಗಿದರೆ ದಕ್ಕುವುದು ಬೆವರಿನ ವಾಸನೆ ಮಾತ್ರವಲ್ಲ, ಚಿತ್ರವಿಚಿತ್ರ ಕಾಣ್ಕೆ, ನಮ್ಮದೂ ಅವನದೂ ಆಗುತ್ತದೆ.

ಇಷ್ಟೆಲ್ಲ ಹೇಳಿದರೂ ಸಾವಿರಾರು ಜನರನ್ನು ಕಂಡು, ತಾಳ್ಮೆಯಿಂದ ಮಾತಾಡಿಸಿ ಕ್ಷುಲ್ಲಕ ಜನರ ಮೇಲೆ ಎಷ್ಟು ಟೀಕೋ ಅಷ್ಟು ಎಗರಾಡಿ ಮನೆಗೆ ಹಿಂದಿರುಗಿದಾಗ ಸುಸ್ತಾಗಿರುತ್ತದೆ. ಬೇರೆಬೇರೆ ನೀರು, ಕಾಲಬದ್ಧವಲ್ಲದ ಊಟ, ಧೂಳು ಮೈಮನವನ್ನು ಅಸ್ತವ್ಯಸ್ತಗೊಳಿಸಿರುತ್ತದೆ. ನನಗೆ ತಲೆ ನೋವಾಗಲಿ, ಜ್ವರವಾಗಲಿ ಇನ್ನಾವುದೇ ಕಾಯಿಲೆಯಾಗಲೀ ಆಗುವುದಿಲ್ಲ, ಕೇವಲ ಸುಸ್ತು, ಆದರೆ ಎರಡೇ ದಿನಗಳಲ್ಲಿ ಜನರ ಮುಖ ನೆನಪಾಗುತ್ತದೆ; ಅವರ ಪ್ರೀತಿ ಮನಸ್ಸಿನಲ್ಲಿ ಹರಿಯತೊಡಗುತ್ತದೆ. ಮುಂದಿನ ತಿರುಗಾಟದ ಸರಣಿಗೆ ಸಿದ್ಧವಾಗುತ್ತೇನೆ. ಇದಕ್ಕಾಗಿ ಕಾತರವಿಲ್ಲ, ಆಸೆಯಿಲ್ಲ-ಇವೆಲ್ಲವನ್ನೂ ಮೀರಿದ ಕೇವಲ ಕರ್ತವ್ಯಪ್ರಜ್ಞೆ ನನ್ನಲ್ಲಿರುತ್ತದೆ. ನಿರ್ವ್ಯಾಜ ಪ್ರೀತಿಯ ಜನ ನನಗೆ ನೆಮ್ಮದಿ ನೀಡಿದ್ದನ್ನು ನೆನೆಯುತ್ತೇನೆ; ಅವರಲ್ಲಿ ಅವರನ್ನು ಭಾಗಿಗಳಾಗಿಸುವ ಕೆಲವಾದರೂ ಕೆಲಸ ನಮ್ಮೆಲ್ಲರಿಂದ ಆದರೆ, ನಾವು ಹುಟ್ಟಿದಾಗ ಇದ್ದ ನಮ್ಮ ರಾಜ್ಯಕ್ಕಿಂತ ಸ್ವಲ್ಪವಾದರೂ ಉತ್ತಮವಾದದ್ದನ್ನು ನಾವು ಸಾಯುವಾಗ ಬಿಟ್ಟು ಹೋಗುವುದಾದರೆ-ನಾನು ಬರೆಯಲಾಗದ ಎಲ್ಲ ಕವನ, ಕತೆ, ನಾಟಕಗಳನ್ನು ಮರೆಯಬಲ್ಲೆ.

ಜನ ನಿಜಕ್ಕೂ ಸೂಜಿಗಲ್ಲಿನ ತರಹ.

ರಾಧಿಕಾ ಸಂಗ ಪ್ರಧಾನಿ ಯೋಗ, ನರ್ಸ್ ಜಯಲಕ್ಷ್ಮಿ ಸಂಗ?

ಕಣ್ಣಾ ಮುಚ್ಚಾಲೆ

ಡಾ. ಅಶೋಕ ಬ್ಯಾಲಹುಣಸಿ, ಮಾಗಳ
ಎಂ.ಪಿ. ಪ್ರಕಾಶರವರು ಭಾಷಣದ ಮಧ್ಯೆ ಮಧ್ಯೆ 'ಪ್ರಾಯಶ' ಎಂಬ ಶಬ್ದ ಬಳಸಿ ಆಯಾಸ ಪಡುವ ಗುಟ್ಟು?
◆ ವಿಷಯದ ಬಗ್ಗೆ ಖಚಿತತೆ ಇಲ್ಲದಿರುವುದು.

ಮಂಟಾಲಿ ಉಮಾಗುರುರಾಜ, ಬಳ್ಳಾರಿ
ಸಹಕಾರ ಬ್ಯಾಂಕ್ ಇರುವುದು ರೈತರಿಗಾಗಿ, ಸ್ವಿಸ್ ಬ್ಯಾಂಕ್ ಇರುವುದು?
◆ ರೈತರನ್ನು ಮುಂಡಾ ಮೋಚಿದವರಿಗಾಗಿ.

ಓಮುಸಿದ್ದೇಗೌಡ ಕೆಬ್ಬೇಹಳ್ಳಿ, ಕನಕಪುರ
ಮಿತ್ರ, ಅಳ್ಳಿಮಾರನಹಳ್ಳಿ ಹರೀಶ್‌ಗೆ 'ಚೆಡ್ಡಿ'ನೇ ಇಷ್ಟವಂತೆ?
◆ ಚೋಣಚಿ ಒಳಗೋಗಲಿ. ಗೊತ್ತಾಗುತ್ತೆ.

ಡಿ.ಎಲ್. ಶ್ವೇತಾ, ಹರಪನಹಳ್ಳಿ
ಕುಮಾರಣ್ಣ ತಂದೆಗೆ ತಕ್ಕ ಮಗನೋ, ಅಣ್ಣ ಮೆಚ್ಚಿದ ತಮ್ಮನೋ, ಜಗ ಮೆಚ್ಚಿದ ಮಗನೊ?
◆ ದರೋಡೆಕೋರ ಎಮ್ಮೆಲ್ಲೆಗಳ ಮೆಚ್ಚಿನ ದೊಂಗ.

ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು
ಇದುವರೆಗೂ ಬಸವಣ್ಣ 'ಬ್ರಾಹ್ಮಣ'ನೆಂದುಕೊಂಡು ತೆಪ್ಪಗಿದ್ದವರು 'ಮಾದಿಗ' ಎಂದರೆ ಮುಜುಗರ ಪಟ್ಟದ್ದೇಕೆ?
◆ ಮಾದಿಗ ಎಂದರೆ ಮಹಾ ಆದಿಗ ಎಂದು ಆ ಮೂರ್ಖರಿಗೆ ತಿಳಿಯಲಿಲ್ಲ.

ಡಿ.ಎಲ್. ನಾಗರಾಜ, ಹರಪನಹಳ್ಳಿ
ಕಮ್ಯುನಲ್ ಫೋರ್ಸ್ ಜೊತೆ ಇರುವುದರಿಂದ ದೇವುಗೆ ರಾಷ್ಟ್ರಪತಿ ಹುದ್ದೆ ಸಿಗಲಿಲ್ಲವಲ್ಲಾ?
◆ ಮೂರು ಕಾಸಿನ ರಾಜಕಾರಣ ಮಾಡಲು ಅಡ್ಡಿ ಎಂದು ಅವರೇ ಟ್ರೈ ಮಾಡಲಿಲ್ಲವಂತೆ.

ಎಂ. ನಿಸರ್ಗ, ದಾವಣಗೆರೆ
ಕಣ್ಣಾಮುಚ್ಚಾಲೆಗೆಂದಾದರೂ ಪ್ರಶ್ನೆಗಳ ಕೊರತೆ ಉಂಟಾಗಿದೆಯೆ?
◆ ನಿಸರ್ಗನಂಥವರಿಂದ ಆ ಸಮಸ್ಯೆ ಇಲ್ಲ.

ಪಿ.ಎನ್. ಶ್ರೀವತ್ಸ, ಬೆಂಗಳೂರು
72 ವಯಸ್ಸಿನ ಮುದುಕಮ್ಮಳನ್ನು ರಾಷ್ಟ್ರಪತಿ ಮಾಡುವ ಬದಲು 52ರ ಸೋನಿಯಾ ಗಾಂಧಿಯನ್ನೇ ಮಾಡಿದ್ದರೆ ಚೆನ್ನಿತ್ತಲ್ಲವೇ....?!
◆ ಆಕೆಗಿನ್ನೂ ಪ್ರಧಾನಿ ಪಟ್ಟದ ಮೇಲೆ ಕಣ್ಣಿದ್ದೆಯಂತೆ.

ಬಿ. ಚಂದ್ರೇಗೌಡ, ಬೆಂಗಳೂರು
'ಅತ್ತೆಗೆ ತಕ್ಕ ಸೊಸೆ' ಎನ್ನುವ ಚಲನಚಿತ್ರವನ್ನು ಇನ್ನೂ ಯಾರು ನಿರ್ಮಿಸಿಲ್ಲವೇಕೆ?
◆ ನಿಮ್ಮ ಪ್ರಶ್ನೆಯಿಂದ ಚಿತ್ರ ತೆಗೆಯುವವರಿಗೊಂದು ಟೈಟಲ್ ಸಿಕ್ಕಿತು.

ಬಸವರಾಜ್ ಬೆಸ್ತರ್, ಗುಲ್ಬರ್ಗಾ
ಬನ್ನಂಜೆ ರಾಜನಿಗೂ ಬನ್ನಂಜೆ ಗೋವಿಂದಾಚಾರ್ಯನಿಗೂ ಇರುವ ವ್ಯತ್ಯಾಸವೇನು?
◆ ಬನ್ನಂಜೆ ರಾಜ ಕೂದಲು ಸೀಳುವ ಮಾತಾಡುತ್ತ ತಲೆ ತಿನ್ನುವುದಿಲ್ಲ.

ಚಾಂದಪಾಶ, ದೇವದುರ್ಗ
ವಿವಾಹಿತ ಪುರುಷ ಬೇರೆಯವರ ಹೆಂಡತಿಯನ್ನೇ ಹೊಗಳುತ್ತಾನೇಕೆ?
◆ ಕತ್ತೆ ಕಣ್ಣಿಗೆ ದೂರದ ಬೋಳುಗುಡ್ಡ ಹಸುರಾಗಿ ಕಾಣುತ್ತಂತೆ.

ಜೆ.ಎ. ಖಲಂದರ್ ಅಜೀಜ್, ಜಾವಗಲ್
ನಿಜವಾಗಲೂ ಆ ರಾತ್ರಿಯನ್ನು 'ಫಸ್ಟ್‌ನೈಟ್' ಬದಲು 'ಮಿಡ್‌ನೈಟ್' ಅಂದರೆ?
◆ ಬೆಸ್ಟ್ ನೈಟ್.

ಬಹುಮಾನಿತ ಪ್ರಶ್ನೆ

ಅಬ್ದುಲ್ ರಜಾಕ್, ದೇವದುರ್ಗ
ರಾಧಿಕಾ ಸಂಗ ಪ್ರಧಾನಿ ಯೋಗ, ನರ್ಸ್ ಜಯಲಕ್ಷ್ಮಿ ಸಂಗ?
◆ ಶೀವಣಿ ಭಂಗ.

ಜೆ.ಸಿ. ರವಿಕುಮಾರ್, ಹೊಸದುರ್ಗ
ಅತೀ 'ಸುಂದರ ತರುಣಿ'ಯನ್ನು **high voltage** ಗೆ ಹೋಲಿಸುವುದು ಎಷ್ಟರಮಟ್ಟಿಗೆ ಸರಿ?
◆ ಅದು ಮೂರ್ಛೆ ಹೋದವರ ಹೋಲಿಕೆ.



ಬಿ.ಎಸ್. ಇಮ್ಮಾನುವೇಲ, ದೇವದುರ್ಗ
ಹಣ್ಣನ್ನು ಕಚ್ಚಿ ತಿಂದರೆ ರುಚಿ. ಹೆಣ್ಣನ್ನು......?
◆ ನೆಕ್ಕಿ ನೇವರಿಸಿದರೆ ಒಳ್ಳೆ ನಿದ್ರೆ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಪ್ರಶ್ನೆ ನಂ: 23
ಬಂಜಗೆರೆಗೂ, ತಸ್ಲೀಮಾ ನಸ್ರೀನ್‌ಗೂ ಏನು ವ್ಯತ್ಯಾಸ?

ಪ್ರಶ್ನೆ ನಂ. 21ರ ನಮ್ಮ ಪ್ರಶ್ನೆ: ಹನೀಫ್ ಮತ್ತು ಮಾಧ್ಯಮಗಳ ಮಧ್ಯೆ ನಿಜವಾದ ಭಯೋತ್ಪಾದಕರು ಯಾರು?
ನಿಮ್ಮ ಉತ್ತರ: ಇನ್ಯಾರು, ಚೆಡ್ಡಿ ಪತ್ರಕರ್ತರು!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಂ.ಮುಕ್ರಂಪಾಷ, ಕೊಳ್ಳೇಗಾಲ

ಕನಕ, ಏಸು ಎಲ್ಲರೂ ಬ್ರಾಹ್ಮಣರೇ!

ತ್ರೈ ಹೊಗಳಿಕೆ

ಬಸವಣ್ಣನನ್ನು ಶೂದ್ರನೆಂದು ಬ(ಜ)ರೆದ ಬಂಜಗೆರೆಯವರು ಅಕ್ಷಮ್ಯ ಅಪರಾಧವೆಸಗಿದ್ದಾರೆಂಬ ಮೇಲ್ವರ್ಗದವರ ಹುಯಿಲಿಗೆ ಸೋತು "ಆನುದೇವಾ" ಕೃತಿಯನ್ನು ಮುಟ್ಟುಗೋಲು ಹಾಕಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಮ್ಮ ಸರ್ಕಾರ ದೊಡ್ಡ ಪೆಟ್ಟನ್ನೇ ನೀಡಿದೆ. ದೇಶದ ಹಿರಿಮೆಯನ್ನು ಸಾರುವಾಗ ಬುದ್ಧ-ಬಸವ-ಗಾಂಧಿ ಹುಟ್ಟಿದ ನಾಡೆಂದು ಹೆಮ್ಮೆಯಿಂದ ಹೇಳುವುದುಂಟು. ಬೇಸರದ ಸಂಗತಿಯೆಂದರೆ, ಇಲ್ಲಿ ಹೆಮ್ಮೆಗಿಂತ ನಾಚಿಕೆಯ ಸಂಗತಿ ಎನ್ನುವುದೇ ವಾಸ್ತವಕ್ಕೆ ಹೆಚ್ಚು ಹತ್ತಿರವೆನಿಸುತ್ತದೆ. ಇಲ್ಲಿನ ವ್ಯವಸ್ಥೆಯೇ ಗಾಂಧಿ-ಬಸವರ ಹುಟ್ಟಿಗೆ ಕಾರಣವಾದರೆ ಇದಕ್ಕೂ ಮುನ್ನ ಯುದ್ಧ-ಹಿಂಸೆ-ಡಂಭಾಚಾರಗಳಿಗೆ ಮನನೊಂದು ಬುದ್ಧ ಸಿಂಹಾಸನ ಬಿಟ್ಟು ಎದ್ದು ಬರಬೇಕಾಯಿತು. ಎಲ್ಲವೂ ತಕ್ಕ ಮಟ್ಟಿಗೆ ಸರಿ ಇದ್ದಿದ್ದರೆ ಗಾಂಧಿ-ಬಸವರುಗಳು ಸಾಮಾಜಿಕ ಅಸಮಾನತೆಗಳ ಕುರಿತು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಆದರೀಗ ಜಾತಿಯತೆ-ತಾರತಮ್ಯದ ವಿರುದ್ಧ ಬದುಕನ್ನೇ ಸವೆಸಿದ ಬಸವೇಶ್ವರ ಇದೇ ಜಾತಿ-ತಾರತಮ್ಯದ ಬಲಿಪಶುವಾಗಿ ಈಗಿನ ತಿಕ್ಕಾಟಕ್ಕೆ ಮೂಲ ಕಾರಣರಾಗಿ ಬಂದುದು ಒಂದು ಚೋದ್ಯವೆನ್ನಬೇಕಷ್ಟೇ.

ಆದೇನೇ ಇರಲಿ, ಬಸವಣ್ಣ ಬ್ರಾಹ್ಮಣನೇ ಎಂಬ ಪ್ರಶ್ನೆಗೆ ನಾನು ನೂರಕ್ಕೆ ನೂರು ಬ್ರಾಹ್ಮಣನೇ ಎನ್ನುತ್ತೇನೆ. ಯಾಕೆಂದರೆ 'ಬ್ರಾಹ್ಮಣ' ಪದದ ಅರ್ಥವೇ ಆ ರೀತಿ ಇರುವುದರಿಂದ ಬೇರೆ ಉತ್ತರ ಇಲ್ಲಿ ಅಸಾಧ್ಯ. ಬ್ರಹ್ಮಜ್ಞಾನ ಸಿದ್ಧಿಸಿಕೊಂಡವನು ಎಂಬುವುದೇ ಬ್ರಾಹ್ಮಣ ಪದಕ್ಕಿರುವ ಮೂಲಾರ್ಥ. ಆತ್ಮಸಾಕ್ಷಾತ್ಕಾರ, ಜ್ಞಾನೋದಯ, ಸತ್ಯದರ್ಶನ, **enlightenment** ಇತ್ಯಾದಿಯಾಗಿ ಕರೆಯಲ್ಪಡುವ ಪರಬ್ರಹ್ಮ ತತ್ವವನ್ನು ಸಾಕ್ಷಾತ್ಕರಿಸಿಕೊಂಡವನೇ ಬ್ರಾಹ್ಮಣನೆನಿಸಿಕೊಳ್ಳುತ್ತಾನೆ. ಆದರೆ ಕಾಲಕ್ರಮೇಣ ಶ್ರೇಷ್ಠತೆಯನ್ನುಳಿಸಿಕೊಳ್ಳುವ ಸಲುವಾಗಿ ಬ್ರಾಹ್ಮಣ ಎನ್ನುವುದು ಒಂದು ವರ್ಗವಾಗಿ ಮಾರ್ಪಾಟಾದದ್ದು ಬ್ರಾಹ್ಮಣತ್ವದ ಹಿರಿಮೆಯಂತೂ ಖಂಡಿತವಾಗಿಯೂ ಆಗಿರಲಾರದು.

ಇದೀಗ ಕೇವಲ ಹುಟ್ಟಿನಿಂದಲೇ ಬ್ರಾಹ್ಮಣ/ಅಬ್ರಾಹ್ಮಣತ್ವ ಗಿಟ್ಟಿಸಿಕೊಳ್ಳುವಂತಿದ್ದರೂ, ಮೂಲತಃ ಆಧ್ಯಾತ್ಮಿಕ ನಂಬಿಕೆಗಳ ಪ್ರಕಾರ ಬ್ರಾಹ್ಮಣತ್ವ ಯಾರ ಕೈಯಲ್ಲೂ ಇಲ್ಲದ ದುರ್ಲಭವೆನಿಸುವ ಸಂಗತಿಯಾಗಿದೆ. ಕಠಿಣ ಸಾಧನೆ ಮಾಡಿಯೂ ಕೂಡ ಬ್ರಹ್ಮಜ್ಞಾನ ಸಿದ್ಧಿಸದೇ ಇರಬಹುದು. ಏನೂ ಶ್ರಮವೇ ಇರದೇ ಅಚಾನಕ್ಕಾಗಿ ಸುಲಭದಲ್ಲಿ ಕೂಡ ಸಿದ್ಧಿಸಲೂಬಹುದು. (ಪುರಂದರ, ತುಳಸಿದಾಸರಿಗೆ ಯಾವುದೋ ನೆಪವೇ ಸತ್ಯದರ್ಶನಕ್ಕೆ ಸಾಕಾಯಿತು. ಬುದ್ಧನ ಆಪ್ತ ಶಿಷ್ಯ ಆನಂದನಿಗೆ ವರ್ಷಾನುಗಟ್ಟಲೆ ಬುದ್ಧನೊಂದಿಗಿದ್ದರೂ ಎಲ್ಲರಿಗಿಂತ ತಡವಾಗಿ ಬುದ್ಧ ಕಾಲವಾಗಿ ಕೆಲ ಸಮಯದ ಬಳಿಕವಷ್ಟೇ ಸತ್ಯ ಸಾಕ್ಷಾತ್ಕಾರವಾಯಿತು). ಒಟ್ಟಾರೆ ಬಳಿಕ ಒಂದು ವರ್ಗವಾಗಿ ಮಾರ್ಪಾಟಾದ ಬ್ರಾಹ್ಮಣ ವರ್ಗ ಈ ಸಂಗತಿಯನ್ನು ಮನಗಂಡೇ ತಮ್ಮಲ್ಲಿ ಸಾಂಕೇತಿಕ ಬ್ರಾಹ್ಮಣತ್ವದ ಪ್ರಕ್ರಿಯೆಯನ್ನು ಅಳವಡಿಸಿಕೊಂಡಿತು. ಅದೇ ಷೋಡಶ ಸಂಸ್ಕಾರಗಳಲ್ಲಿ ಪ್ರಮುಖವಾದ ಬ್ರಹ್ಮೋಪದೇಶ ಕಾರ್ಯ.



ಬ್ರಹ್ಮೋಪದೇಶದಲ್ಲೇ ಸೂಚಿಸುವಂತೆ ಇದು ಬ್ರಹ್ಮತ್ವಕ್ಕೆ ಸಂಬಂಧಿಸಿದ ಪ್ರಕ್ರಿಯೆಯಲ್ಲದೇ ಈ ಉಪನಯನದ ಬಳಿಕ ವಟುವು 'ದ್ವಿಜ' ನೆನಿಸಿಕೊಳ್ಳುತ್ತಾನೆ. ದ್ವಿ-ಜ ಅಂದರೆ 2 ನೇ ಹುಟ್ಟುಪಡೆದವ (ಜನನ-ಮರಣ ಚಕ್ರಗಳ ಸರಪಣಿಯಿರದ ಕೊನೆಯ ಹುಟ್ಟು ಅಂದರೆ ಮೋಕ್ಷ ಇದು ಸತ್ಯದರ್ಶನವಾದವರಿಗಷ್ಟೇ ಸಾಧ್ಯ) ಎನಿಸಿಕೊಳ್ಳುತ್ತಾನಲ್ಲದೇ, ಇಲ್ಲಿ ತೊಡಗಿಸಲ್ಪಡುವ ಜನಿವಾರವೂ ಕೂಡ ಸಾಂಕೇತಿಕವಾಗಿ ಕೊನೆಯ ಹುಟ್ಟನ್ನೇ ಸೂಚಿಸುತ್ತದೆ. (ಜ= ಹುಟ್ಟು, ನಿವಾರ= ಇಲ್ಲ) ಒಟ್ಟಾರೆಯಾಗಿ ನಿಜವಾಗಿ ಅಲ್ಲದಿದ್ದರೂ ಕೇವಲ ಸಾಂಕೇತಿಕ ಬ್ರಾಹ್ಮಣತ್ವ ಇಲ್ಲಿ ಉಪದೇಶಿಸಲ್ಪಡುತ್ತದೆ. ಕ್ರಮೇಣ ಅಧಿಕಾರವುಳ್ಳ ಕ್ಷತ್ರಿಯರು, ಐಶ್ವರ್ಯವುಳ್ಳ ವೈಶ್ಯರೂ ಕೂಡ ತಮ್ಮದೇ ಉಪನಯನ ಪದ್ಧತಿಯನ್ನು ಅಳವಡಿಸಿಕೊಂಡರು. ಒಟ್ಟಾರೆ ಶೂದ್ರರನ್ನು ಬಿಟ್ಟು ಎಲ್ಲರಿಗೂ ಬ್ರಾಹ್ಮಣತ್ವ (ದ್ವಿಜತ್ವ) ಈ ರೀತಿಯಾಗಿಯಾದಾಗ ಕೈಗೆಟುಕಿತು.

ಗೀತೆಯಲ್ಲಿ ಶ್ರೀಕೃಷ್ಣ ಸಾಕ್ಷಾತ್ಕಾರ ಸುಲಭವಲ್ಲವೆಂಬುದನ್ನು ಹೇಳುತ್ತಾ-ಸಾವಿರಾರು ಮಂದಿಯಲ್ಲಿ ನೂರಾರು ಜನ ನನ್ನನ್ನು ಹೊಂದುವ ತುಡಿತ ಉಳ್ಳವರಾಗಿದ್ದರೆ ಅವರಲ್ಲಿ ಒಬ್ಬಿಬ್ಬರಷ್ಟೇ ಗುರಿಮುಟ್ಟಲು ಸಾಧ್ಯ ಎಂದು ಈ ಸಂಗತಿಯ ಅನಿಶ್ಚಿತತೆಯನ್ನು ಹೇಳಿದರೆ, ಬ್ರಾಹ್ಮಣ ವರ್ಗ ಕೇವಲ ಹುಟ್ಟಿನಿಂದಲೇ ಆತ ಎಂತಹ ಮೂರ್ಖನೇ ಆಗಿದ್ದರೂ ಕೇವಲ ಜನಿವಾರಧಾರಣೆಯಿಂದ ಬ್ರಾಹ್ಮಣತ್ವವನ್ನು ಹೊಂದಿಸಿಬಿಡುತ್ತಾರೆ.

ಈ ಸಂಗತಿ ಬರೆಯುವಾಗ ರಾಜ್ಯದ ಖ್ಯಾತ ಧಾರ್ಮಿಕ ಪ್ರವಚನಕಾರರು ಭಾಷಣದಲ್ಲಿ ಹೇಳಿದ ಸಂಗತಿ ನೆನಪಾಗುತ್ತದೆ. ಹುಟ್ಟಿನಿಂದ ಬ್ರಾಹ್ಮಣ ಜಾತಿಯವರೇ ಆಗಿದ್ದ ವ್ಯಕ್ತಿಯೊಬ್ಬರು, ರಮಣರು, ಪರಮಹಂಸರು ತಲುಪಿದ ಸ್ಥಿತಿ ತಲುಪಿ ಜಮೀನು-ಮನೆ-ಕುಟುಂಬ ಬಿಟ್ಟು ಜನಿವಾರವನ್ನು ಕಿತ್ತೆಸೆದು ಜನರ ಪಾಲಿಗೆ ಹುಚ್ಚರಂತೆ ಅಲೆಯುತ್ತಿದ್ದರಂತೆ (ಇತ್ತೀಚೆಗಷ್ಟೇ ಅವರು ನಿಧನರಾದರು). ಒಮ್ಮೆ ಹೀಗೆ ಅಲೆದು ಪ್ರಸಿದ್ಧ ದೇಗುಲದ ಬ್ರಾಹ್ಮಣಪಂಕ್ತಿಯ ಊಟದ ಸಾಲಿನಲ್ಲಿ ಊಟಕ್ಕೆ ಕುಳಿತಾಗ ಇದು ಬ್ರಾಹ್ಮಣರ ಪಂಕ್ತಿ ಏಳು ಇಲ್ಲಿಂದ (ವಾಸ್ತವವಾಗಿ ಇವರೇ ನಿಜವಾದ ಬ್ರಾಹ್ಮಣರು ಉಳಿದವರೆಲ್ಲ ಸಾಂಕೇತಿಕ ಬ್ರಾಹ್ಮಣರು) ಎಂದು ದೃಢಕಾಯದ ವ್ಯಕ್ತಿಗಳು ಆ ಸಣಕಲ ವೃದ್ಧರನ್ನು ಎತ್ತಿ ಹೊರಹಾಕಿದರಂತೆ. ಈಗಲೂ ಕೂಡ ನಡೆಯುತ್ತಿರುವುದು ಇದೇ. ಅಂದರೆ ನಿಜ ಬ್ರಾಹ್ಮಣರಿಗಿಂತ ಕಳ್ಳ ಬ್ರಾಹ್ಮಣರ ಹಾರಾಟವೇ ಹೆಚ್ಚು,

ಇತ್ತೀಚೆಗೆ ಉತ್ತರ ಭಾರತೀಯನೊಬ್ಬ ವಾಲ್ಮೀಕಿ ಬೇಡನಲ್ಲ ಬ್ರಾಹ್ಮಣನೆಂದು ವಾದ ಮಂಡಿಸಿದ್ದ. ಹೌದು, ವಾಲ್ಮೀಕಿ, ಕ್ಷತ್ರಿಯ ಮೂಲದ ವಿಶ್ವಾಮಿತ್ರ, ವ್ಯಾಸ, ಕನಕದಾಸ, ಬಸವಣ್ಣ, ಏಸು, ಬುದ್ಧ, ಸತ್ಯದರ್ಶನರಾದ ಬ್ರಾಹ್ಮಣರೇ ಅಥವಾ ವಿಪ್ರರು (ಜ್ಞಾನದ ಬೆಳಕನು ನೀಡುವಂತಹವ) ಎಂದೂ ಕೂಡ ಕರೆಯಲಡ್ಡಿಯಿಲ್ಲ ಆದರೆ ಆಧ್ಯಾತ್ಮಿಕದ ಸೂಕ್ಷ್ಮವೆಂದರೆ ಶೂದ್ರ (ದಾಸ)ನಾಗದೆ ಬ್ರಾಹ್ಮಣತ್ವ (ಸತ್ಯದರ್ಶನ) ಸಾಧ್ಯವಿಲ್ಲವೆನ್ನುವುದೂ ಕೂಡ ಅಷ್ಟೇ ಸತ್ಯ ಆದಕಾರಣ ಬಸವಣ್ಣನನ್ನ ಶೂದ್ರನೆನ್ನಿ ಬ್ರಾಹ್ಮಣನೆನ್ನಿ ಆತ ಮಾತ್ರ ತಾವರೆ ಎಲೆಯ ಮೇಲಿನ ನೀರಹನಿಯಂತೆ ಅಷ್ಟೇ.

-ರವಿ ಪುತ್ತೂರು
ದಕ್ಷಿಣ ಕನ್ನಡ

ಜಾತಿವಾದಿ ಹೋರಾಟಕ್ಕೆ ಮಾನ್ಯತೆ ನೀಡಿದ ಸರ್ಕಾರ, ಲೇಖಕ ಬಂಜಗೆರೆ ಜಯಪ್ರಕಾಶ್‌ರ ಆನುದೇವಾ ಹೊರಗಣವನು ಕೃತಿಯನ್ನು ಮುಟ್ಟುಗೋಲು ಹಾಕಿಕೊಂಡಿದೆ. ಸರ್ಕಾರದ ಈ ಕ್ರಮ ಪ್ರಜಾಪ್ರಭುತ್ವದ ಮೇಲಿನ ನಂಬಿಕೆಯನ್ನು ಹುಸಿಗೊಳಿಸುವಂತಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಅನಗತ್ಯ ರಾಜಕೀಯ ಹಸ್ತಕ್ಷೇಪದ ಹೆಚ್ಚಳವಾಗುತ್ತಿರುವುದನ್ನು ಸಾಕ್ಷೀಕರಿಸಿದೆ. 'ಆನುದೇವಾ ಹೊರಗಣವನು' ಕೃತಿಯಲ್ಲಿ ಲೇಖಕ ಅತಿವಿನಮ್ರದಿಂದ "ಇದು ಅಂತಿಮ ಸತ್ಯವಲ್ಲ, ಅಧ್ಯಯನದ ನಂತರ ನನಗೆ ಗೋಚರಿಸಿರುವ ಸತ್ಯ. ಈ ಅಭಿಪ್ರಾಯದ ಆಧಾರದ ಮೇಲೆ ಹೆಚ್ಚಿನ ಸಂಶೋಧನೆಗಳು ನಡೆಯಲಿ" ಎಂದು ಹೇಳಿದ್ದಾರೆ.

ಇದ್ಯಾವುದನ್ನು ಅರ್ಥೈಸಿಕೊಳ್ಳದ ವೀರಶೈವ ಮಹಾಸಭಾದ ಕೆಲವು ಜಾತಿವಾದಿ ರಾಜಕಾರಣಿಗಳು ಬಸವಣ್ಣ ಮಾದಿಗ ಜಾತಿಯವನು ಎಂಬ ಅನುಮಾನಿತ ಸತ್ಯವನ್ನು ಅರಗಿಸಿಕೊಳ್ಳಲಾಗದೆ ನಡೆಸಿದ ಅಸಂಬದ್ಧ ಹೋರಾಟದಿಂದ ಪ್ರೇರಿತವಾದ ಸರ್ಕಾರ, ಕೃತಿಯನ್ನು ನಿಷೇಧಿಸುವುದರ ಮೂಲಕ ಸಂಶೋಧನಾ ಕ್ಷೇತ್ರದ ಬಾಗಿಲುಗಳನ್ನು ಮುಚ್ಚಿದೆ. ಇದರಿಂದ ಸಾಹಿತ್ಯದ ಬೆಳವಣಿಗೆ ಆಗುವುದಾದರೂ ಹೇಗೆ ಸಾಧ್ಯ? ಒಂದು ಸಂಶೋಧನಾ ಕೃತಿ ಅಸತ್ಯ ಎಂದು ಸಾಬೀತು ಮಾಡುವುದಾದರೆ ಅದಕ್ಕೆ ಪ್ರತಿಸಂಶೋಧನೆಗಳು ನಡೆಯಬೇಕು. ಆದರೆ ವೀರಶೈವ ಮಹಾಸಭಾದವರು ಪ್ರತಿಕ್ರಿಯಿಸಿದ ರೀತಿಯನ್ನು ಗಮನಿಸಿದರೆ ಬಸವಣ್ಣ ವೀರಶೈವರ ಆಸ್ತಿ ಎಂಬಂತೆ ವರ್ತಿಸಿದ್ದುದು ಖಚಿತವಾಗುತ್ತದೆ.

ಸತ್ಯಶೋಧನಾ ಸಮಿತಿಯ ಅಭಿಪ್ರಾಯಗಳನ್ನು ಧಿಕ್ಕರಿಸಿ ಸರ್ಕಾರ ಕೃತಿಯನ್ನು ಮುಟ್ಟುಗೋಲು ಹಾಕಿಕೊಂಡಿರುವುದನ್ನು ನೋಡಿದರೆ, ಇದು ವೀರಶೈವರನ್ನು ತೃಪ್ತಿಪಡಿಸುವ ಕೆಲಸ ಎಂಬುದು ತಿಳಿಯುತ್ತದೆ. ಸರ್ಕಾರದ ಈ ಕುಕೃತ್ಯವನ್ನು ಎಲ್ಲಾ ಪ್ರಗತಿಪರರು, ಸಾಹಿತಿಗಳು, ಸಾಹಿತ್ಯಪ್ರೇಮಿಗಳು ಒಟ್ಟಾಗಿ ಖಂಡಿಸೋಣ.

-ಕೈದಾಳ್ ಕೃಷ್ಣಮೂರ್ತಿ
ಗುಲ್ಬರ್ಗಾ

ನಿವೃತ್ತಿಯ ಅಂಚಿನಲ್ಲಿ ವಿಷ್ಣು?


'ಮಾತಾಡ್ ಮಾತಾಡು ಮಲ್ಲಿಗೆ' ಮತ್ತು 'ಈ ಬಂಧನ', ವಿಷ್ಣು ಅಭಿನಯದ ಇವೆರಡು ಚಿತ್ರಗಳು ಮುಕ್ತಾಯದ ಹಂತದಲ್ಲಿದ್ದು ಅವರ ಹುಟ್ಟುಹಬ್ಬವಾದ ಸೆಪ್ಟೆಂಬರ್ 18ರಂದು '...ಮಲ್ಲಿಗೆ' ತೆರೆಕಾಣಬಹುದು. ಆನಂತರ ಒಂದು ತಿಂಗಳ ಗ್ಯಾಪ್‌ನಲ್ಲಿ 'ಈ ಬಂಧನ' ಬರುವುದು ಗ್ಯಾರೆಂಟಿ.

ವಿಷಯ ಅದಲ್ಲ, ಇವೆರಡು ಚಿತ್ರಗಳ ನಂತರ ವಿಷ್ಣುವರ್ಧನ್ ಕೈಯಲ್ಲಿ ಯಾವುದೇ ಹೊಸ ಚಿತ್ರಗಳಿಲ್ಲದಿರುವುದೇ ವಿಷಯ. ಬಹುಶಃ ಅವರ ವೃತ್ತಿ ಜೀವನದಲ್ಲೇ ಈ ರೀತಿಯ ನಿರುದ್ಯೋಗ ಅವರನ್ನು ಎಂದೂ ಕಾಡಿರಲಿಲ್ಲ ಎನ್ನಬಹುದು. ಇದಕ್ಕೆ ಹಲವಾರು ಕಾರಣಗಳಿವೆ.

ಒಂದೆಡೆ ಗಣೇಶ್, ವಿಜಯ್ ಮತ್ತು ಪ್ರೇಮ್ ತರಹದ ನವ ನಟರ ಯುಗ ಪ್ರಾರಂಭವಾಗಿದೆ. ಇನ್ನೊಂದೆಡೆ ವಿಷ್ಣುರವರ ವಯಸ್ಸು ಮತ್ತು ಅನುಭವಕ್ಕೆ ತಕ್ಕುದಾದ ಪಾತ್ರಗಳನ್ನು, ಕತೆಗಳನ್ನು ಯಾರೂ ರೂಪಿಸಲು ಸಿದ್ಧರಿಲ್ಲ, ಮತ್ತೊಂದೆಡೆ ಸೀಮಿತ ಮಾರುಕಟ್ಟೆ ಹೊಂದಿರುವ ಕನ್ನಡ ಚಿತ್ರರಂಗದಲ್ಲಿ ವಿಷ್ಣು ತರಹದ ಹಿರಿಯ ನಟರಿಗೆ ಹೊಸ ರೀತಿಯ ಪಾತ್ರಗಳನ್ನು ರಚಿಸಿ ಪ್ರಯೋಗ ಮಾಡಲು ಯಾರಲ್ಲೂ ದಮ್ ಇಲ್ಲ. ಈ ಎಲ್ಲ ಕಾರಣಗಳು ಜೊತೆಗೂಡಿ ಇವತ್ತು ವಿಷ್ಣುವರ್ಧನ್‌ರವರು ಚಿತ್ರರಂಗದ ಅಂಚಿಗೆ ಸರಿಯುವಂತಾಗಿದೆ.

ಇಲ್ಲವಾದರೆ, ವಯಸ್ಸಿನಲ್ಲಿ ಅವರಿಗಿಂತಲೂ ಹಿರಿಯುವರಾದ ಅಮಿತಾಭ್ ಬಚ್ಚನ್ ಆಗಲೀ ಸಮಕಾಲೀನರಾದ ರಜನೀಕಾಂತ್ ಆಗಲೀ, ಆಜುಬಾಜಿನಲ್ಲಿರುವ ಮಮ್ಮೂಟಿಯಾಗಲೀ ಇವತ್ತಿಗೂ ನಟರಾಗಿ ಬ್ಯೂಸಿ ಆಗಿರುವಾಗ ವಿಷ್ಣು ಮಾತ್ರ ಯಾಕೆ ನಿವೃತ್ತಿಯನ್ನು ಎದುರು ನೋಡುವಂತಾಗುತ್ತಿತ್ತು? ಅಂದಹಾಗೆ, ಇದಕ್ಕೆ ಕಾರಣ ವಿಷ್ಣು ತರಹದ ನಟರು ಮತ್ತು ಕನ್ನಡ ಚಿತ್ರರಂಗ ಹಾಗೂ ಅದರ ಪ್ರೇಕ್ಷಕರು ಇನ್ನೂ ಹೀರೋ ಇಮೇಜಿಗೆ ಜೋತುಬದ್ದಿರುವುದೇ ಪ್ರಮುಖ ಕಾರಣ ಎಂದರೆ ತಪ್ಪಾಗಲಾರದು.

ಆದರೆ ಕಾಲ ಬದಲಾಗುತ್ತಿದೆ. ಇದನ್ನು ಸ್ವತಃ ವಿಷ್ಣುರವರೂ ಅರಿತಿದ್ದಾರೆ. ಆದ್ದರಿಂದಲೇ ಇತ್ತೀಚೆಗೆ ಅವರು "ನನಗೂ ಕೂಡ ಅಮಿತಾಬ್ ಬಚ್ಚನ್ ನಟಿಸಿದ 'ಬ್ಲಾಕ್' ಚಿತ್ರದಂತಹ ಪಾತ್ರಗಳನ್ನು ಇಲ್ಲಿಯ ನಿರ್ದೇಶಕರು ಯಾಕೆ ಸೃಷ್ಟಿಸುತ್ತಿಲ್ಲ?" ಎಂದು ಪ್ರಶ್ನಿಸಿದರು. ಹಾಗೆಯೇ "ಪರಭಾಷೆಯಲ್ಲಿ ನಿರ್ದೇಶಕರು ಆ ನಟರುಗಳ ಪ್ರತಿಭೆಯನ್ನು ಸಮರ್ಥವಾಗಿ ಬಳಸಿ ಹೊಸ ಹೊಸ ಛಾಲೆಂಜಿಂಗ್ ಪಾತ್ರಗಳನ್ನು ನೀಡುತ್ತಿದ್ದಾರೆ. ನನಗಿಲ್ಲಿ ಅಂತಹ ಅವಕಾಶಗಳು ಎಲ್ಲಿ ದೊರೆತಿವೆ?" ಎಂದೂ ಕೇಳಿದ್ದರು.



ಈಗಲಾದರೂ ಕನ್ನಡ ಚಿತ್ರರಂಗದ ಕಥೆಗಾರರು, ನಿರ್ದೇಶಕರು ಮತ್ತು ನಿರ್ಮಾಪಕರು ಹೊಸ ರೀತಿಯ ಸಿನಿಮಾಗಳನ್ನು ತರುವಂತಾಗಲಿ, ವಿಷ್ಣು ತರಹದ ನಟರು ತಮ್ಮಲ್ಲಿರುವ ಪ್ರತಿಭೆಯನ್ನು ಇನ್ನೂ ಹಲವಾರು ವರ್ಷ ಮೆರೆಯುವಂತಾಗಲಿ. ಆಗ ಮಾತ್ರ ಚಿತ್ರರಂಗ ನಿಜವಾದ ಅಭಿವೃದ್ಧಿಯನ್ನು ಕಾಣಲು ಸಾಧ್ಯ....

– ಶೆಣೈ

ಗಣೇಶ್ ಮತ್ತು ಪ್ರೇಮ್ ನಡುವೆ ಹಾವು ಏಣಿ ಆಟ

ಹೊಸ ನಾಯಕನಟರಾದ ಪ್ರೇಮ್ ಮತ್ತು ಗಣೇಶ್ ನಡುವೆ ನಂಬರ್ ಒನ್ ಸ್ಥಾನಕ್ಕೆ ಹಾವು ಏಣಿ ಆಟ ನಡೆಯುತ್ತಿದೆ. ಗಣೇಶ್‌ಗಿಂತಲೂ ಮೊದಲು 'ನೆನಪಿರಲಿ' ಮೂಲಕ ಚಿತ್ರರಂಗಕ್ಕೆ ಕಾಲಿಟ್ಟ ಪ್ರೇಮ್ ಯಶಸನ್ನು ಮತ್ತು ಅಭಿಮಾನಿಗಳನ್ನು ಗಳಿಸಿದ್ದರು. ಅದೇ ಹೊತ್ತಿಗೆ ಗಣೇಶ್ ನಟನೆಯ 'ಚೆಲ್ಲಾಟ' ಬಿಡುಗಡೆಯಾಗಿತ್ತಾದರೂ ಅದರಿಂದ ಗಣೇಶ್‌ಗೆ ಹೀರೋ ಇಮೇಜು ಲಭಿಸಿರಲಿಲ್ಲ.

ಈ ಮಧ್ಯೆ 'ಜೊತೆ ಜೊತೆಯಲಿ' ಎಂಬ ಚಿತ್ರವೂ ಯಶಸ್ಸು ಕಂಡು ಪ್ರೇಮ್ ನಿಸ್ಸಂದೇಹವಾಗಿ ನಂಬರ್ ಒನ್ ಯುವನಟ ಎಂದು ಎಲ್ಲರಿಗೂ ಅನ್ನಿಸಿತ್ತು. ಆದರೆ 'ಮುಂಗಾರು ಮಳೆ' ಎಂಬ ರೆಕಾರ್ಡ್ ಬ್ರೇಕಿಂಗ್ ಸಿನಿಮಾವೊಂದರ ಮೂಲಕ ಗಣೇಶ್ ಅಭಿಮಾನಿಗಳನ್ನು, ಬೇಡಿಕೆಯನ್ನು ತನ್ನತ್ತ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾದರು.

ಇದರಿಂದ ಇವರಿಬ್ಬರ ನಡುವಿನ ಪೈಪೋಟಿ ಮತ್ತಷ್ಟು ಹೆಚ್ಚಿತು. ಗಣೇಶ್ ನಟನೆಯ 'ಹುಡುಗಾಟ' ಮತ್ತು 'ಚೆಲುವಿನ ಚಿತ್ತಾರ' ಪ್ರಾರಂಭದಲ್ಲಿ ತೆವಳಿದವಾದರೂ ಆನಂತರ ಚೇತರಿಸಿಕೊಂಡು ಸಾಕಷ್ಟು ಹಣ ಗಳಿಸಿದವು. ಅದರಲ್ಲೂ ಎಸ್. ನಾರಾಯಣ್ ನಿರ್ಮಾಣ ಮತ್ತು ನಿರ್ದೇಶನದ 'ಚೆಲುವಿನ ಚಿತ್ತಾರ' ಈಗಾಗಲೇ ಆರೇಳು ಕೋಟಿ ರೂಪಾಯಿಗಳ ಲಾಭ ತಂದುಕೊಟ್ಟಿದೆಯಂತೆ.

ಗಣೇಶ್ ಹೀಗೆ ಯಶಸ್ಸಿನ ಹಾದಿಯಲ್ಲಿದ್ದರೆ ಪ್ರೇಮ್ ಮಾತ್ರ ಸೋಲುಗಳನ್ನು ಕಾಣುತ್ತಿದ್ದಾರೆ. ಅವರ ನಟನೆಯ 'ಪಲ್ಲಕ್ಕಿ' ಬಾಕ್ಸ್ ಆಫೀಸಿನಲ್ಲಿ ಸೋತಿತಲ್ಲದೆ, ಮೊನ್ನೆ ಬಿಡುಗಡೆಯಾಗಿರುವ 'ಸವಿ ಸವಿ ನೆನಪು' ಕೂಡ ಅದೇ ಹಾದಿ ಹಿಡಿದಂತಿದೆ. ಸದ್ಯದಲ್ಲೇ ಬಿಡುಗಡೆಯಾಗಲಿರುವ 'ಗುಣವಂತ' ಪ್ರೇಮ್ ಪ್ರತಿಭೆಯನ್ನು ನಿರ್ಧರಿಸಲಿದ್ದು, ಅದರ ಬಗ್ಗೆಯೂ ಗಾಂಧಿನಗರದಿಂದ ಉತ್ಸಾಹಕರ ಮಾತುಗಳು ಕೇಳಿಬರುತ್ತಿಲ್ಲ.


ಹೀಗೆ ಕೇವಲ ಮೂರು ಚಿತ್ರಗಳ ಯಶಸ್ಸಿನಿಂದ ಗಣೇಶ್ ಬಾಕ್ಸಾಫೀಸ್ ಕಲೆಕ್ಷನ್ ಕಿಂಗ್ ಎಂದೆನಿಸಿಕೊಂಡಿದ್ದರೆ, ಪ್ರೇಮ್ ಎರಡು ಬಾರಿ ಮುಗ್ಗರಿಸಿರುವುದರಿಂದ ಹಾವು ಏಣಿ ಆಟದಲ್ಲಿ ಹಿಂದೆ ಬದ್ದಿದ್ದಾರೆ. ಈ ಮಧ್ಯೆ ಗಣೇಶ್ ತನ್ನ ಸಂಭಾವನೆಯನ್ನು ಎಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಏರಿಸಿದ್ದರೆ, ಪ್ರೇಮ್ ಇನ್ನೂ ಹತ್ತನ್ನೆರಡು ಲಕ್ಷದ ಆಜುಬಾಜಿನಲ್ಲೇ ಇದ್ದಾರೆ.

ಇವರಿಬ್ಬರ ನಡುವೆ ಇನ್ನೂ ಹಲವು ಪ್ರಮುಖ ವ್ಯತ್ಯಾಸಗಳಿವೆ. ಉದಾಹರಣೆಗೆ ಗಣೇಶ್ ರೀಮೇಕ್ ಚಿತ್ರಗಳಿಗೆ ಜೋತು ಬದ್ದಿದ್ದರೆ, ಪ್ರೇಮ್ ಸ್ವಮೇಕ್ ಚಿತ್ರಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಹಾಗೆಯೇ ಇವತ್ತು ಈ ಪೈಪೋಟಿಯಲ್ಲಿ ಗಣೇಶ್ ಮುಂದಿದ್ದರೂ ನಟನೆಯಲ್ಲಿ ಪ್ರೇಮ್ ಆತನಿಗಿಂತಲೂ ಉತ್ತಮ ಎನ್ನುವುದನ್ನು ಎಲ್ಲರೂ ಗಮನಿಸಿದ್ದಾರೆ.

ಈ ಹಾವು ಏಣಿ ಆಟ ಮುಂದುವರೆಯುತ್ತಿದೆ.... ■



ಟಿಎನ್‌ಎಸ್‌ಗೇಕೆ ಚಿಂತೆ?



ಮೆಗಾ ಧಾರಾವಾಹಿಗಳ ಕಿಂಗ್ ಟಿ.ಎನ್.ಸೀತಾರಾಮ್‌ರವರ 'ಮೀರಾ ಮಾಧವ ರಾಘವ' ಸಿನಿಮಾಗೆ ಅವರು ಮತ್ತು ಅವರ ಆಪ್ತ ಗುಂಪಿನ ಹಿತೈಷಿಗಳು ನಿರೀಕ್ಷಿಸಿದ್ದಷ್ಟು ಯಶಸ್ಸು ಸಿಕ್ಕಿಲ್ಲ. ಮನೆಯಲ್ಲಿ ಕೂತು ಪುಕ್ಕಟೆಯಾಗಿ ಟಿವಿಯಲ್ಲಿ ಧಾರಾವಾಹಿಗಳನ್ನು ನೋಡಬಹುದಾದ್ದರಿಂದ ಅದಕ್ಕೆ ಹಣ ಕೊಟ್ಟು ಚಿತ್ರಮಂದಿರದಲ್ಲಿ ಯಾಕೆ ನೋಡಬೇಕು ಎಂಬುದೇ ಈ ಚಿತ್ರದ ಬಗ್ಗೆ ಬಹಳಷ್ಟು ಪ್ರೇಕ್ಷಕರ ಪ್ರಶ್ನೆಯಾಗಿದೆ.

ಅವರ ಈ ಪ್ರತಿಕ್ರಿಯೆ ಕಂಡು ಸ್ವತಃ ಸೀತಾರಾಮ್‌ಗೂ ಚಿಂತೆಯಾಗಿರಬಹುದು. ಯಾಕೆಂದರೆ 'ಮೀಮಾರಾ' ಬಿಡುಗಡೆಯಾದಾಗ ಅದರ ಪೋಸ್ಟರ್‌ಗಳಲ್ಲಿ ಸೀತಾರಾಮ್ ನಿರ್ದೇಶಕನ ಗತ್ತಿನಲ್ಲಿ ನಿಂತಿರುವ ಚಿತ್ರವಿತ್ತು, ಆದರೆ ಈಗ ಅದರ ಜಾಗದಲ್ಲಿ ಯಾವುದರ ಬಗ್ಗೆಯೋ ಚಿಂತಿಸುತ್ತಿರುವ ಸೀತಾರಾಮ್‌ರವರ ಫೋಟೋ ಕಾಣಿಸಿಕೊಂಡಿದೆ.

ಆ ಫೋಟೋದಲ್ಲಿ ಸೀತಾರಾಮ್ ಯಾವುದರ ಬಗ್ಗೆ ಚಿಂತಿಸುತ್ತಿರಬಹುದು? ಜನ ಯಾಕೆ ತಮ್ಮ ಚಿತ್ರ ನೋಡಲು ಬರಲಿಲ್ಲ ಎಂದೋ? ಟಿವಿ ಮಾಧ್ಯಮಕ್ಕೂ ಸಿನಿಮಾ ಮಾಧ್ಯಮಕ್ಕೂ ಇರುವ ವ್ಯತ್ಯಾಸ ಯಾಕೆ ತನಗೆ ಗೊತ್ತಾಗಲಿಲ್ಲ ಎಂದೋ? ತಾನೇಕೆ ಪುಟ್ಟಣ್ಣ ಕಣಗಾಲ್ ಆಗಲಿಲ್ಲ ಎಂದೋ? ಸ್ವಜಾತಿ ಮಿತ್ರರ ಉಘೇ ಉಘೇ ಯನ್ನು ನಂಬಿ ಕೆಟ್ಟೆ ಎಂದೋ? ಅಥವಾ ಇನ್ನು ಮುಂದೆ ಸಿನಿಮಾ ತಂಟೆಗೆ ಹೋಗದಿದ್ದರೆ ಕಿರುತೆರೆಯಲ್ಲಿ ಗಳಿಸಿದ ಹೆಸರಾದರೂ ಉಳಿಯುತ್ತೆ ಎಂದೋ?!

ಕತೆಗೂ ಸೈಟಿಗೂ ಎಲ್ಲಿಯ ಸಂಬಂಧ?




ಇತ್ತೀಚೆಗೆ ಲ್ಯಾಂಡ್ ಡೀಲರ್‌ಗಳು ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟಿರುವುದೂ, ಅವರೇ ಹಲವಾರು ಸಿನಿಮಾಗಳನ್ನು ನಿರ್ಮಿಸುತ್ತಿರುವುದೂ ಹೊಸ ಸುದ್ದಿ ಏನಲ್ಲ. ಆದರೆ ಲ್ಯಾಂಡ್ ಡೀಲರ್‌ಗಳ ಭಾಷಾ ಶೈಲಿಯೂ ಕಾಲಿಟ್ಟಿರುವುದು ಮಾತ್ರ ಅಚ್ಚರಿ ಹುಟ್ಟಿಸುವಂತಿದೆ.

ಇದಕ್ಕೊಂದು ಉದಾಹರಣೆ ಮೊನ್ನೆ ಸಂದರ್ಶನವೊಂದರಲ್ಲಿ ಪ್ರೀತಮ್ ಎಂಬ ಯುವ ಪ್ರತಿಭೆ ಹೇಳಿದ್ದು. ಈ ಪ್ರೀತಮ್ 'ಮುಂಗಾರು ಮಳೆ' ಚಿತ್ರಕ್ಕೆ ಸಂಭಾಷಣೆ ಬರೆದು ಈಗ ತಾನೇ ಒಂದು ಚಿತ್ರವನ್ನು ನಿರ್ದೇಶಿಸಲು ಹೊರಟಿದ್ದಾರೆ. ಈತ ಮೊನ್ನೆ ಮಾತನಾಡುತ್ತಾ "ಯಾರಾದರು ಕತೆ, ಚಿತ್ರಕತೆ ಬರೆದಿದ್ದರೆ ಅದನ್ನು ಬಿಸಾಡಬೇಡಿ. ಅವುಗಳನ್ನು ನಿಮ್ಮೊಂದಿಗೇ ಇಟ್ಟುಕೊಂಡಿರಿ. ಯಾಕೆಂದರೆ ಅದಕ್ಕೆ ಯಾವಾಗ ಬೆಲೆ ಬರುತ್ತೆ ಅಂತ ಹೇಳಕ್ಕಾಗುವುದಿಲ್ಲ. ಇವತ್ತು ಒಂದು ಕತೆಗೂ ಒಂದು ಖಾಲಿ ಸೈಟಿಗೆ ಇರುವಷ್ಟೇ ಬೆಲೆ ಇದೆ. ಸೈಟಿನ ರೇಟು ಹೇಗೆ ಹೆಚ್ಚಾಗುತ್ತಾ ಹೋಗುತ್ತದೋ ಹಾಗೆನೇ ಕತೆಯ ರೇಟೂ ದಿನೇದಿನೇ ಹೆಚ್ಚಾಗುತ್ತದೆ..." ಎಂದೆಲ್ಲ ಬಡಬಡಾಯಿಸಿದ.

ಅಲ್ಲ ಮಾರಾಯ, ಸೃಜನಶೀಲ ಕತೆಯೆಲ್ಲಿ, ಹಣವಿದ್ದವರು ಸೈಟುಗಳಲ್ಲಿ ಹೂಡುವ ಹಣವೆಲ್ಲಿ? ಅದೇನೇ ಇರಲಿ, ಲ್ಯಾಂಡ್ ಡೀಲರ್‌ಗಳ ಭಾಷೆಯನ್ನೇ ಕನ್ನಡ ಚಿತ್ರರಂಗದ ನಿರ್ದೇಶಕರೂ, ನಟರೂ ಬಳಸುವ ದಿನ ದೂರವಿಲ್ಲ ಎಂಬುದಂತೂ ಸಾಬೀತಾಯಿತು!

ಸಿನಿಮಾವೋ, ರಾಜಕಾರಣಿಗಳ ಸಂತೃಪ್ತಿಯೋ?




'ಮುಂಗಾರು ಮಳೆ'ಯ ನಿರ್ಮಾಪಕ ಕೃಷ್ಣಪ್ಪನವರ ಎರಡನೇ ಚಿತ್ರ ಇದೇ ಮಂಗಳವಾರ ಸೆಟ್ಟೇರಲಿದ್ದು ಅದಕ್ಕೆ 'ಮೊಗ್ಗಿನ ಮನಸ್ಸು' ಎಂದು ಹೆಸರಿಡಲಾಗಿದೆ.

ಆದರೆ ಇದರ ತಾರಾಗಣವನ್ನು ನೋಡಿದರೆ ಕೃಷ್ಣಪ್ಪನವರು ಸಿನಿಮಾ ಮಾಡುತ್ತಿದ್ದಾರೋ ಅಥವಾ ರಾಜಕಾರಣಿಗಳನ್ನು ಓಲೈಸಲು ಹೊರಟಿದ್ದಾರೋ ಎಂಬ ಅನುಮಾನ ಕಾಡುತ್ತದೆ. ಯಾಕೆಂದರೆ ಈ ಚಿತ್ರದಲ್ಲಿ ಸಚಿವ ಎಚ್.ಕೆ. ಕುಮಾರಸ್ವಾಮಿಯವರ ಮಗ ಮನೋಜ್, ಎಸ್ಸೆಂ ಕೃಷ್ಣರ ಅಳಿಯ ಸಿದ್ದಾರ್ಥನ ಹತ್ತಿರದ ಸಂಬಂಧಿ ಸ್ಕಂದ ಮತ್ತು ಎಂ.ಪಿ. ಪ್ರಕಾಶ್‌ರ ಬಂಧು ನಾಗರಾಜ್.... ಈ ಮೂರು 'ಕಲಾ ಕುಸುಮ'ಗಳನ್ನು ಕೃಷ್ಣಪ್ಪ ನಾಯಕ ನಟರಾಗಿ ಪರಿಚಯಿಸುತ್ತಿದ್ದಾರೆ!

ಹೇಳಿ ಕೇಳಿ ಕೃಷ್ಣಪ್ಪ ಜನತಾ ದಳ ಪಕ್ಷದ ಸದಸ್ಯ. ಹಾಗೆಯೇ ತನ್ನ ಕೋಟ್ಯಂತರ ರೂಪಾಯಿಗಳ ಉದ್ಯಮಗಳಿಂದಾಗಿ ಹಲವಾರು ರಾಜಕೀಯ ಪಕ್ಷಗಳ ನಾಯಕರ ನಿಕಟಸಂಪರ್ಕ ಹೊಂದಿರುವವರು. ಹೋದ ವರ್ಷದ ತನಕ ಸಿನಿಮಾ ಸ್ಕ್ರಿಪ್ಟ್ ಎಂದರೇನು, ಚಿತ್ರೀಕರಣ ಎಂದರೇನು ಎಂದು ಗೊತ್ತಿರದಿದ್ದ ಕೃಷ್ಣಪ್ಪನವರು ಈಗ ತಮ್ಮ ರಾಜಕೀಯ ಗಾಡ್‌ಫಾದರ್‌ಗಳನ್ನು ಸಂತೃಪ್ತಗೊಳಿಸಲು ಹೊರಟಂತಿದೆ.

ಕೃಷ್ಣಪ್ಪನವರ ಈ 'ಮೊಗ್ಗಿನ ಮನಸ್ಸು'ಗಳು ಅರಳುತ್ತವೋ ಅಥವಾ ಬಾಡಿ ಬೀಳುತ್ತವೋ ನೋಡಬೇಕಿದೆ...

ಮರುಜನ್ಮ ಸಿಕ್ಕೀತೇ?



'ಮರುಜನ್ಮ' ಎಂಬ ಚಿತ್ರವನ್ನು ನಿರ್ದೇಶಿಸುತ್ತಿರುವ ಮಹ್ಮದ್ ಗೌಸ್ ಯಾನೆ ಎ.ಆರ್. ಬಾಬು ಗಾಂಧಿನಗರದಲ್ಲಿ ಹಲವಾರು ದಶಕಗಳಿಂದ ಇದ್ದರೂ ಅವರು ಲೈಂ ಲೈಟಿಗೆ ಬಂದಿದ್ದು 'ಹಲೋ ಯಮ' ಚಿತ್ರದ ಮುಖಾಂತರ. '...ಯಮ'ನ ನಂತರ 'ಹಲೋ ನಾರದ' ಎಂಬ ಚಿತ್ರ ತೆಗೆದರು. ಆದರೆ ಯಮನನ್ನಾದರೂ ನಂಬು, ಚಾಲಾಕಿ ನಾರದನನ್ನು ಮಾತ್ರ ನಂಬಬೇಡ ಎಂಬಂತೆ '...ನಾರದ' ಬಾಬುಗೆ ಫುಲ್ ಕೈ ಕೊಟ್ಟ.

ಆನಂತರ 'ಆಗೋದೆಲ್ಲಾ ಒಳ್ಳೇದಕ್ಕೇ' ಎಂಬ ಸಿನಿಮಾವನ್ನು ಬಾಬು ಮಾಡಿದರಾದರೂ ಅದರಿಂದ ಅವರಿಗೆ ಮಾತ್ರ ಏನೂ ಒಳ್ಳೆಯದಾಗಲಿಲ್ಲ! ಈಗ ಬಾಬು 'ಮರುಜನ್ಮ' ಎಂಬ ಚಿತ್ರವನ್ನು ಮುಗಿಸಿದ್ದಾರೆ. ತುಂಬಾ ಶ್ರೀಮಂತವಾಗಿ ತೆಗೆದಿರುವ ಈ ಚಿತ್ರ ತಮಗೆ ನಿಜಕ್ಕೂ ಮರುಜನ್ಮ ನೀಡುತ್ತದೆ ಎಂಬ ವಿಶ್ವಾಸ ಬಾಬುರವರದ್ದು.

ಅಂದು ಹಲೋ ಎಂದು ಹೇಳುತ್ತಾ ಬಂದ ಯಮ ಬಾಬುಗೆ ಲಕ್ಕು ತಂದಿದ್ದ. ಈ ಬಾರಿ ಏನನ್ನು ತರುತ್ತಾನೋ ಬಲ್ಲವರು ಯಾರು?

R.B.P. LANKESH, Kannada Weekly Price Rs. 10/- 22-8-2007 RNI No. KARKAN2005/14648 Regd.No.KA/BG(S)/2036/2005-



ಲಂಕೇಶರ 'ಮುಸ್ಸಂಜೆ....' ಅವ್ವಳಾಗಿ ಬೆಳ್ಳಿತೆರೆಗೆ

ಅಕ್ಕ ದೇವೀರಿ, ಅವ್ವ ದೇವೀರಮ್ಮ




ಹಿಂದೊಮ್ಮೆ ಪಿ. ಲಂಕೇಶ್‌ರ ಕಿರುಕಾದಂಬರಿ 'ಅಕ್ಕ'ಳನ್ನು ಸಿನಿಮಾ ಮಾಡಲು ಹೊರಟ ಕವಿತಾಗೆ ಒಂದು ಸಮಸ್ಯೆ ಎದುರಾಗಿತ್ತು, ಅದೇನೆಂದರೆ, ಅದಕ್ಕೆ ಎರಡು ವರ್ಷಗಳ ಹಿಂದೆ ಮಾಲಾಶ್ರೀ ನಟಿಸಿದ್ದ 'ಅಕ್ಕ' ಎಂಬ ಹೆಸರಿನ ಚಿತ್ರ ಬಿಡುಗಡೆ ಆಗಿತ್ತು, ಆಗ 'ಅಕ್ಕ' ಕಾದಂಬರಿಯ ಪ್ರಮುಖ ಪಾತ್ರವಾದ 'ದೇವೀರಿ'ಯ ಹೆಸರನ್ನೇ ಚಿತ್ರಕ್ಕೆ ಇಟ್ಟಿದ್ದರು.

ಈಗಲೂ ಅಂತಹದ್ದೇ ಒಂದು ಸಮಸ್ಯೆ ಎದುರಾಯಿತು. ಹಲವು ವರ್ಷಗಳ ಹಿಂದೆ 'ಮುಸ್ಸಂಜೆ' ಎಂಬ ಸಿನಿಮಾ ನಿರ್ಮಿಸಲಾಗಿತ್ತಾದ್ದರಿಂದ 'ಮುಸ್ಸಂಜೆಯ ಕಥಾಪ್ರಸಂಗ'ದ ಪ್ರಮುಖ ಪಾತ್ರವಾದ ರಂಗವ್ವಳನ್ನು ಆಧರಿಸಿ ಹೆಸರಿಟ್ಟರೆ ಹೇಗೇ ಎಂದು ಯೋಚಿಸಿದರು. ಊರವರ ಕೆಂಗಣ್ಣಿಗೆ ಗುರಿಯಾದ ರಂಗವ್ವ ಹೇಗೆ ಅವರೆಲ್ಲರಿಂದ ತನ್ನ ಮಗಳನ್ನು ರಕ್ಷಿಸುತ್ತಾಳೆ ಎಂಬುದನ್ನು ಗ್ರಹಿಸಿ, ಚಿತ್ರಕ್ಕೆ 'ಅವ್ವ' ಎಂಬ ಹೆಸರಿಟ್ಟರೆ ಕಥಾವಸ್ತುವಿಗೂ, ಅದರಲ್ಲಿನ ಗ್ರಾಮೀಣ ಸೊಗಡಿಗೂ ಸರಿ ಹೊಂದುತ್ತದೆಂದು ನಿರ್ಧರಿಸಿದರು.

ಕಾಕತಾಳೀಯ ವಿಷಯ ಯಾವುದೆಂದರೆ 'ಅಕ್ಕ' ಕಾದಂಬರಿಯು 'ದೇವೀರಿ' ಚಿತ್ರವಾಯಿತಲ್ಲದೆ, ಲಂಕೇಶರ ತಾಯಿಯ ಹೆಸರೂ ದೇವಿರಮ್ಮ ಎಂದೇ ಆಗಿತ್ತು, ಹಾಗೆಯೇ 'ಮುಸ್ಸಂಜೆಯ ಕಥಾಪ್ರಸಂಗ' ಕಾದಂಬರಿಯು ಈಗ 'ಅವ್ವ' ಚಿತ್ರವಾಗುತ್ತಿದೆಯಲ್ಲದೆ, ಲಂಕೇಶರ ಅತಿ ಜನಪ್ರಿಯ ಕವಿತೆಯ ಹೆಸರೂ 'ಅವ್ವ' ಎಂಬುದೇ ಆಗಿರುವುದು!

ಅದು ಕನ್ನಡ ಸಾಹಿತ್ಯ ಬರಹಗಾರರಲ್ಲಿ ಮಹತ್ವಾಕಾಂಕ್ಷೆ ಮಡುಗಟ್ಟಿದ್ದ ಕಾಲ. ನವ್ಯದ ಒಂದು ತಲೆಮಾರು ಸ್ಪರ್ಧೆಯಿಂದೆಂಬಂತೆ ಕತೆ ಮತ್ತು ಕಾವ್ಯ ರಚನೆಯಲ್ಲಿ ತೊಡಗಿದ್ದ ಸಂದರ್ಭವದು. ಆಗ ಲಂಕೇಶರು 'ಮುಸ್ಸಂಜೆಯ ಕಥಾ ಪ್ರಸಂಗ' ಎಂಬ ಮಹಾ ಕಾದಂಬರಿ ಬರೆಯಲು ತಯಾರಿ ನಡೆಸಿದ್ದರು. ಆ ಕಾದಂಬರಿಯನ್ನು ಬರೆದು ಮುಗಿಸಬೇಕಾದರೆ ಪ್ರಕಟಣದ ಪೂರ್ಣ ಸಂಭಾವನೆ ಪಡೆದು ಬರೆಯಲೇ ಬೇಕಾದ ಒತ್ತಡ ಹೇರಿಕೊಳ್ಳಬೇಕು ಎಂದು ನಿರ್ಧರಿಸಿದ್ದರು. ಆಗ ಅವರು ಆರ್ಥಿಕ ಬಿಕ್ಕಟ್ಟಿನಲ್ಲಿ ಇದ್ದದ್ದೂ ಇದಕ್ಕೆ ಕಾರಣವಾಗಿದ್ದಿರಬಹುದು. ಆದ್ದರಿಂದಲೇ ತಮ್ಮ ಆತ್ಮೀಯ ಗೆಳೆಯರಾದ ಅನಂತ ಮೂರ್ತಿಯವರ ಶಿಫಾರಸ್ಸನ್ನು ಬಳಸಿ ಕೆ.ವಿ. ಸುಬ್ಬಣ್ಣನವರಿಂದ ಎರಡು ಸಾವಿರ ರೂಪಾಯಿಗಳನ್ನು ಮುಂಗಡವಾಗಿ ಪಡೆದು, ಹೆಗ್ಗೋಡು ಪ್ರಾಂತ್ಯದಲ್ಲೇ ಕುಳಿತು ಅದನ್ನು ಬರೆದು ಮುಗಿಸಿದ್ದರು.



ಕಾದಂಬರಿ ಮುಗಿಸಿದ ನಂತರ ಅನಂತಮೂರ್ತಿಯವರನ್ನೇ ಹೋಲುವಂತಹ ಪಾತ್ರವೊಂದು ಅದರಲ್ಲಿ ಕಾಣಿಸಿಕೊಂಡು ಕನ್ನಡ ಸಾಹಿತ್ಯ ಲೋಕದ ಕುತೂಹಲ ಕೆರಳಿಸಿತ್ತು, ಆದರೆ ಲಂಕೇಶರು ಆ ಪಾತ್ರವು ಯಾರ ರೂಪದರ್ಶನವಲ್ಲ ಎಂದು ಸ್ಪಷ್ಟಪಡಿಸಿದ್ದರು. ಲಂಕೇಶ್ ಆಗ ಹಠತೊಟ್ಟು 'ಮುಸ್ಸಂಜೆ...' ಬರೆಯದಿದ್ದರೆ ಮಲೆನಾಡಿನ ಸೆರಗಿನ ಆ ರೋಚಕ ಕಥಾ ವಿವರಗಳು ನಮಗೆ ಲಭ್ಯವಾಗುತ್ತಿರಲಿಲ್ಲ, ಕನ್ನಡದ ಶ್ರೇಷ್ಠ ಕಾದಂಬರಿಗಳ ಸಾಲಿನಲ್ಲಿ 'ಮುಸ್ಸಂಜೆ....' ನಿಲ್ಲುತ್ತದೆ.

ಲಂಕೇಶ್ 'ಮುಸ್ಸಂಜೆ....' ಬರೆಯುವಾಗ ಸಹಜವಾಗಿ ತಮ್ಮ ಹುಟ್ಟೂರು ಕೊನಗವಳ್ಳಿ ಸುತ್ತಮುತ್ತಲಿನ ಪ್ರದೇಶ ಮತ್ತು ಪರಿಚಿತ ವ್ಯಕ್ತಿಗಳನ್ನು ಅವರ ನಿಜವಾದ ಆಕಾರಗಳನ್ನು ಬದಲಿಸಿ ಕಾದಂಬರಿಯಲ್ಲಿ ಬಳಸಿದ್ದರು. ಇದನ್ನು ಕಂಡು ಬೆಚ್ಚಿಬಿದ್ದವರಲ್ಲಿ ಆವರ ಚಿಕ್ಕಪ್ಪ ಮಿಷಿನ್ ಭರ್ಮಣ್ಣ ಒಬ್ಬರು. ಆದರೆ ಚಿಕ್ಕಪ್ಪ ಭರ್ಮಣ್ಣನಿಗೂ ಕಾದಂಬರಿ ಯಲ್ಲಿನ ಭರ್ಮಣ್ಣನಿಗೂ ಸಂಬಂಧವಿಲ್ಲ ಎಂದು ಲಂಕೇಶರೇ ಹೇಳಿದ್ದರೂ ಅವರ ಚಿಕ್ಕಪ್ಪ ಲಂಕೇಶರನ್ನು ಭೇಟಿ ಮಾಡಿ "ನನ್ನ ಮೇಲೆ ಏನೊ ಕತೆ ಬರೆದು ದುಡ್ಡು ಮಾಡಿಕೊಂಡಂತೆ? ನನಗೂ ಪಾಲುಕೊಡು" ಎಂದು ಕೇಳಿದ್ದರು! ಮೇಷ್ಟ್ರು ಸಣ್ಣೀರಪ್ಪ "ನನ್ನಿಂದ ಪಾಠ ಹೇಳಿಸಿಕೊಂಡ ಹುಡುಗ ನನ್ನನ್ನೇ ಹರಾಜು ಹಾಕಿದನಲ್ಲಾ" ಎಂದು ಗೋಳಾಡಿದ್ದರು. ಕಾದಂಬರಿಯಲ್ಲಿನ ಸಭ್ಯ ವ್ಯಕ್ತಿ ನಂದ್ಯಪ್ಪನಲ್ಲಿ ಲಂಕೇಶ್ ತನ್ನ ಸ್ವಂತ ಅಪ್ಪನ ಗುಣ ದಾಖಲಿಸಿದ್ದರು. ಹಾಗೆಯೇ ಹಾಲುಬೆಣ್ಣೆ ಮಾರಿ ಕಾಸುಗಂಟಿಕ್ಕಿ ಬಡ್ಡಿಗೆ ಕೊಡುವ ರಂಗವ್ವನಲ್ಲಿ ಲಂಕೇಶ್ ತಮ್ಮ ತಾಯಿ ದೇವೀರಮ್ಮನನ್ನೇ ಕಂಡಿದ್ದರು. ಇಂತಹ ಐತಿಹಾಸಿಕ 'ಮುಸ್ಸಂಜೆಯ ಕಥಾಪ್ರಸಂಗ' ಎಂಬ ಕಾದಂಬರಿಯನ್ನು ಅವರ ಮಗಳಾದ ಕವಿತಾ ಲಂಕೇಶ್ 'ಅವ್ವ' ಹೆಸರಿನಡಿ ಸಿನಿಮಾ ಮಾಡಲು ಹೊರಟಿರುವುದು ಒಂದು ಸಾಹಸ ಮತ್ತು ಸವಾಲು.

ಈ ಮಹಾ ಕಾದಂಬರಿಯ ಕೆನೆ ತೆಗೆದುಕೊಂಡು, ಚಿತ್ರಕತೆ ತಯಾರಿಸಿ ಪಾತ್ರಗಳಿಗೆ ನಟ-ನಟಿಯರನ್ನು ಹುಡುಕತೊಡಗಿದಾಗ ಕವಿತಾರಿಗೆ ರಂಗವ್ವನ ಪಾತ್ರ ಮಾಡಲು ಶೃತಿಯೇ ಸರಿ ಎನ್ನಿಸಿತಂತೆ. ಆ ಬಗ್ಗೆ ಶೃತಿಯನ್ನು ಕೇಳಿದಾಗ ಅವರು ಮರುಮಾತಿಲ್ಲದೆ ಒಪ್ಪಿಕೊಂಡರಂತೆ. ವಾಸ್ತವವಾಗಿ ಕವಿತಾ ಲಂಕೇಶರ ಸಿನಿಮಾಗಳನ್ನು ನೋಡಿ ಮೆಚ್ಚಿಕೊಂಡಿದ್ದ ಶೃತಿ, ಅವರ ಸಿನಿಮಾದಲ್ಲೊಂದು ಪಾತ್ರ ಮಾಡುವ ತವಕದಲ್ಲಿದ್ದರು. ಅವರ ಅಪೇಕ್ಷೆಯಂತೆ ಪಾತ್ರ ಸಿಕ್ಕಿದೆಯಲ್ಲದೆ ಒಂದು ಸವಾಲಿನ ಪಾತ್ರವೇ ದಕ್ಕಿದೆ! ಈಗಾಗಲೇ ರಂಗವ್ವನೊಡನೆ ಗುದ್ದಾಟ ಆರಂಭಿಸಿರುವ ಶೃತಿ, ರಂಗವ್ವನನ್ನು ವಶಪಡಿಸಿಕೊಂಡು ರಂಗವ್ವನೇ ಆಗಿ ಮೂಡಿಬರುವ ಮಹತ್ವಾಕಾಂಕ್ಷೆಯಲ್ಲಿ ನಿರತರಾಗಿದ್ದಾರೆ.

ಇನ್ನು ಸಾವಂತ್ರಿಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿರುವ ಸ್ಮಿತಾ ಹರಿಣಿ ಕಣ್ಣಿನ, ಹಳ್ಳಿಯ ಸಮೃದ್ಧ ದೇಹಸಿರಿ ಹೊಂದಿರುವ ಕೃಷ್ಣ ಸುಂದರಿ. ಹಿಂದಿಯ ಚಿರ ಯೌವನ ನಟಿ ರೇಖಾ ಮೊದಲು ನಟಿಸಿದ್ದು ನಮ್ಮ ಕನ್ನಡ ಸಿನಿಮಾದಲ್ಲಿ, ಅದೂ ಡಾ. ರಾಜ್‌ಕುಮಾರ್‌ರೊಂದಿಗೆ. ಆ ಕಾಲದ ರೇಖಾಳನ್ನು ನೆನಪಿಸುವ ಸ್ಮಿತಾ, ತನ್ನ ನಟನೆಗೆ ಆಂಗಿಕ ಅಭಿನಯವನ್ನು ಮೈದುಂಬಿ ತೋರಿದ್ದನ್ನು ನೋಡಿದ ಕವಿತಾ "ಇವಳೇ ಸಾವಂತ್ರಿ" ಎಂದು ತೀರ್ಮಾನಿಸಿದರು.

'ಅವ್ವ' ಸಿನಿಮಾದ ಇನ್ನೆರಡು ಬಹು ಮುಖ್ಯ ಪಾತ್ರಗಳೆಂದರೆ, ಭರ್ಮಣ್ಣ ಮತ್ತು ಬ್ಯಾಡರ ಮಂಜ. ಈಗಾಗಲೇ ಲಂಕೇಶರನ್ನು ಚೆನ್ನಾಗಿ ಓದಿಕೊಂಡಿರುವ ರಂಗಾಯಣ ರಘು, ಮಿಷಿನ್ ಭರ್ಮಣ್ಣನ ಪಾತ್ರ ಸಿಕ್ಕ ಕೂಡಲೇ ಭರ್ಮಣ್ಣನೇ ಆಗಿಹೋಗಿದ್ದಾರೆ. ಇನ್ನು ಬೇಡರ ಮಂಜನಾಗಲಿರುವ ವಿಜಯ್ ಬಗ್ಗೆ ಹೇಳುವಂತೆಯೇ ಇಲ್ಲ, ಕೆಲವು ಪಾತ್ರಗಳು ಕೆಲವು ನಟರಿಗಾಗಿ ಕಾಯುತ್ತಿರುತ್ತವಂತೆ. ಅಂತಹ ಒಂದು ಸಮ್ಮಿಳನ ವಿಜಯ್ ಮತ್ತು ಬ್ಯಾಡರ ಮಂಜನದ್ದು.



ಹೀಗೆ ಕಾದಂಬರಿಯಲ್ಲಿನ ಪಾತ್ರಗಳ ಭಾವಕ್ಕೆ ತಕ್ಕಂತೆ ನಟ-ನಟಿಯರನ್ನು ಆಯ್ಕೆ ಮಾಡುತ್ತಾ ಹೊರಟ ಕವಿತಾಗೆ ಸಭ್ಯ ವ್ಯಕ್ತಿ ನಂದ್ಯಪ್ಪನ ಪಾತ್ರ ಮಾಡಲು ಗೃಹ ಸಚಿವ ಎಂ.ಪಿ. ಪ್ರಕಾಶರೇ ಸರಿ ಎನ್ನಿಸಿತು. ಇದರ ಬಗ್ಗೆ ಪ್ರಕಾಶ್‌ರ ಮುಂದೆ ಪ್ರಸ್ತಾಪಿಸಿದಾಗ "ಮಿಷಿನ್ ಭರ್ಮಣ್ಣನ ಪಾತ್ರವೇ?" ಎಂದು ಅವರು ಆತಂಕಗೊಂಡರು. "ಇಲ್ಲ ನಂದ್ಯಪ್ಪನಪಾತ್ರ" ಎಂದಾಗ ಅವರು ಕೂಡಲೇ ಒಪ್ಪಿಕೊಂಡರಲ್ಲದೇ "ಕವಿತಾ ಲಂಕೇಶರ ನಿರ್ದೇಶನದಲ್ಲಿ ಪಾತ್ರ ನಿರ್ವಹಿಸುವುದು ಒಳ್ಳೆಯ ಅವಕಾಶವೆಂದು ತಿಳಿದಿದ್ದೇನೆ" ಎಂದರು. ಇನ್ನು ಮೇಷ್ಟ್ರು ಸಣ್ಣೀರಪ್ಪನ ಪಾತ್ರ ಮಾಡಲು ಎಣಿಗಿ ನಟರಾಜ್ ಅಲ್ಲದೆ ಬೇರೆ ಯಾರಾದರೂ ಮಾಡಲು ಸಾಧ್ಯವೇ? ಅವರೇ ಹೇಳಿದಂತೆ "ಈ ಕಾದಂಬರಿಯನ್ನು ಮೊದಲ ಬಾರಿಗೆ ಓದಿದಾಗಲೇ ಸಣ್ಣೀರಪ್ಪನ ಪಾತ್ರ ನನಗೇ ಬರೆದಂತಿದೆ ಅನ್ನಿಸಿತ್ತು. ಈ ಪಾತ್ರವನ್ನು ನಾನೇ ಮಾಡಬೇಕು ಅಂದುಕೊಂಡಿದ್ದೆ. ಈಗ ನೀವು ನನ್ನನ್ನೇ ಆ ಪಾತ್ರಕ್ಕೇ ಕರೆಯುತ್ತಿದ್ದೀರಿ" ಎಂದು ಸಂತೋಷಪಟ್ಟರು.



ಪಿ. ಲಂಕೇಶರ 'ಅಕ್ಕ' ಎಂಬ ಕಿರು ಕಾದಂಬರಿಯನ್ನು ತನ್ನ ಚೊಚ್ಚಲ ನಿರ್ದೇಶನಕ್ಕೆ ತೆಗೆದುಕೊಂಡ ಕವಿತಾ, ಅದನ್ನು ಬೆಳ್ಳಿತೆರೆಗೆ 'ದೇವೀರಿ'ಯ ರೂಪದಲ್ಲಿ ತಂದು ಪ್ರೇಕ್ಷಕರ ಮತ್ತು ವಿಮರ್ಶಕರ ಮನ್ನಣೆ ಗಳಿಸಿದ್ದರು. ಈಗ ಅವರ ತಂದೆಯ ಮಹಾ ಕಾದಂಬರಿ 'ಮುಸ್ಸಂಜೆ....'ಯನ್ನು 'ಅವ್ವ'ಳಾಗಿ ತರಲು ಹೊರಟಿದ್ದಾರೆ. 'ಅಕ್ಕ ದೇವೀರಿ'ಯನ್ನೂ ಮೀರಿ 'ಅವ್ವ' ರಂಗವ್ವಳ ಕತೆ ಬರಲೆಂದು ಹಾರೈಸುತ್ತೇವೆ.



ಪ್ರಶಸ್ತಿ ವಿಜೇತರ ಸಮಾಗಮ

'ಅವ್ವ' ಚಿತ್ರದ ತಂಡ ಪ್ರಶಸ್ತಿ ವಿಜೇತ ಪ್ರತಿಭೆಗಳ ಸಮಾಗಮದಂತಿದೆ. ಮೊದಲನೆಯದಾಗಿ 'ಅವ್ವ' ಆಧರಿಸಿರುವ 'ಮುಸ್ಸಂಜೆಯ ಕಥಾ ಪ್ರಸಂಗ' ಕಾದಂಬರಿಯ ಸೃಷ್ಟಿಕರ್ತ ಪಿ. ಲಂಕೇಶರು ಚಲನಚಿತ್ರ ನಿರ್ದೇಶಕರಾಗಿ ಮತ್ತು ಸಾಹಿತಿಯಾಗಿ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪಡೆದಿದ್ದರಲ್ಲದೆ, ಪತ್ರಕರ್ತರಾಗಿಯೂ ಅಪಾರ ಖ್ಯಾತಿಗಳಿಸಿದ್ದವರು.

ಅವರ ಪುತ್ರಿ ಕವಿತಾ ಲಂಕೇಶ್ ಈಗಾಗಲೇ ನಿರ್ದೇಶಿಸಿರುವ ಮೂರು ಚಿತ್ರಗಳು ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪಡೆದಿವೆ. ಹಾಗೆಯೇ 'ಅವ್ವ' ಚಿತ್ರದ ಛಾಯಾಗ್ರಾಹಕ ಮಧು ಅಂಬಟ್ ಈಗಾಗಲೇ ರಾಷ್ಟ್ರ ಪ್ರಶಸ್ತಿಯನ್ನು ಮತ್ತು ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿದ್ದಾರಲ್ಲದೆ, ಕೇರಳ, ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಲ್ಲಿ ಹಲವಾರು ರಾಜ್ಯ ಪ್ರಶಸ್ತಿಗಳನ್ನೂ ಪಡೆದಿದ್ದಾರೆ.

ಇನ್ನು ಇದರ ಸಂಗೀತ ನಿರ್ದೇಶಕ ಐಸಾಕ್‌ರವರು ಕೇರಳ ರಾಜ್ಯದ ಮೂರು ಪ್ರಶಸ್ತಿಗಳನ್ನು ಪಡೆದಿದ್ದರೆ, ಸಂಕಲನಕಾರ ಸುರೇಶ್ ಅರಸ್ ಮತ್ತು ಕಲಾ ನಿರ್ದೇಶಕ ರಮೇಶ್ ದೇಸಾಯಿ ಕೂಡ ರಾಷ್ಟ್ರಪ್ರಶಸ್ತಿಗಳನ್ನು ಪಡೆದಿದ್ದಾರೆ. ತಾರಾಗಣದಲ್ಲಿರುವ ಶೃತಿ ಈಗಾಗಲೇ ಮೂರು ಬಾರಿ ರಾಜ್ಯ ಪ್ರಶಸ್ತಿ ಪಡೆದಿದ್ದರೆ, ರಂಗಾಯಣ ರಘು ಮತ್ತು ವಿಜಯ್ ಕೂಡ ರಾಜ್ಯ ಪ್ರಶಸ್ತಿ ವಿಜೇತರೇ. ಕೊನೆಯದಾಗಿ ಸಂಭಾಷಣೆಕಾರ ಬಿ. ಚಂದ್ರೇಗೌಡ ಕೂಡ ತಮ್ಮ ಜನಪ್ರಿಯ 'ಕಟ್ಟೆಪುರಾಣ' ಅಂಕಣಕ್ಕೆ ಪತ್ರಿಕಾ ಅಕಾಡೆಮಿ ನೀಡುವ ರಾಜ್ಯ ಪ್ರಶಸ್ತಿಯನ್ನು ಪಡೆದಿರುವವರು.

ಅದಕ್ಕೆ ಅಂದದ್ದು 'ಅವ್ವ' ನಿಜವಾಗಲೂ ಪ್ರತಿಭಾವಂತರ ಸಮಾಗಮ ಎಂದು! ■



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-4